
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)



# ಆಸ್ಟ್ರಿಯಾದ ಛಾನ್ಸಲರ್ ಮೆಟರ್ನಿಕ್

ಕೋರ್ಸ್ – 4

ಬ್ಲಾಕ್ – 5

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 4

# ಬ್ಲಾಕ್ 5

ಘಟಕ - 110
ಮೊದಲನೆಯ ಜಾಗತಿಕ ಯುದ್ಧ - ಕಾರಣಗಳು, ಯುದ್ಧದಗತಿ ಮತ್ತು ಪರಿಣಾಮಗಳು

ಘಟಕ - 111
ಪ್ಯಾರಿಸ್ ಶಾಂತಿ ಸಮ್ಮೇಳನ ಮತ್ತು ಶಾಂತಿ ಒಪ್ಪಂದಗಳು

ಘಟಕ - 112
1917 ರ ರಷ್ಯಾದ ಕ್ರಾಂತಿ

ಘಟಕ - 113
ಲೀಗ್ ಆಫ್ ನೇಷನ್ಸ್ (ರಾಷ್ಟ್ರ ಸಂಘ)

ಘಟಕ - 114
ವೀಮರ್ ಗಣರಾಜ್ಯ

# ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


ಪ್ರೊ. ಎಂ.ಜಿ. ಕೃಷ್ಣನ್
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*


## ಪಠ್ಯಕ್ರಮ ನಿರೂಪಕರು


**ಡಾ. ಶಿವಣ್ಣ**
ಇತಿಹಾಸ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರ

ಘಟಕಗಳು **110** ರಿಂದ **114**


## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, **2013**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೯ - 4

## ಬ್ಲಾಕ್ - 5

### ಪೀಠಿಕೆ

5ನೆಯ ಬ್ಲಾಕ್ ಐದು ಘಟಕಗಳಿಂದ ಕೂಡಿದೆ. ಘಟಕ 110 ಮೊದಲನೆಯ ಜಾಗತಿಕ ಯುದ್ಧ ; ಕಾರಣಗಳು ಯುದ್ಧದಗತಿ ಮತ್ತು ಪರಿಣಾಮಗಳು ಎಂಬ ವಿಷಯವನ್ನೊಳಗೊಂಡಿದೆ. ನೀವು ಈ ಘಟಕದಲ್ಲಿ ಒಂದನೆಯ ಮಹಾ ಯುದ್ಧಕ್ಕೆ ಕಾರಣವಾದ ಅನೇಕ ಕದನಗಳನ್ನು ಅನೇಕ ಸ್ಥಳಗಳಲ್ಲಿ ನಡೆದ ಯುದ್ಧದ ಪ್ರಮುಖ ಕದನಗಳನ್ನು ಹಾಗೂ ಅನೇಕ ಕ್ಷೇತ್ರಕ್ಕೆ ಸಂಬಂಧಿಸಿದ ಪರಿಣಾಮಗಳನ್ನು ಅಧ್ಯಯನ ಮಾಡುವಿರಿ.

ಘಟಕ 111 ಪ್ಯಾರಿಸ್ ಶಾಂತಿ ಸಮ್ಮೇಳನ ಮತ್ತು ಶಾಂತಿ ಒಪ್ಪಂದಗಳು ಎಂಬ ವಿಷಯಕ್ಕೆ ಸಂಬಂಧಿಸಿದುದು. ಮೊದಲನೆಯ ಮಹಾಯುದ್ಧದ ನಂತರ ಶಾಂತಿ ಸಮ್ಮೇಳನವು ನಡೆಯಿತು. ಈ ಸಮ್ಮೇಳನದಲ್ಲಿ ಮಾಡಿಕೊಂಡ ಅನೇಕ ಒಪ್ಪಂದಗಳ ಬಗ್ಗೆ ನೀವು ಈ ಘಟಕದಲ್ಲಿ ಅಧ್ಯಯನ ಮಾಡುವಿರಿ. ಜರ್ಮನಿಯೊಡನೆ ವರ್ಸೈಲ್ಸ್ ಒಪ್ಪಂದ ಮಾಡಿಕೊಳ್ಳಲಾಯಿತು. ಆಸ್ಟ್ರಿಯ ಸೆಯಿಂಟ್ ಜರ್ಮನ್ ಒಪ್ಪಂದಕ್ಕೆ ಸಹಿ ಹಾಕಿತು. ಬಲ್ಗೇರಿಯಾವು ನೆಯುಲಿ ಒಪ್ಪಂದಕ್ಕೂ, ಹಂಗೇರಿಯು ಟ್ರಿಮನನ್ ಒಪ್ಪಂದಕ್ಕೂ, ಹಾಗೂ ತುರ್ಕಿಯು ಸೆವೆರೆಸ್ ಒಪ್ಪಂದಕ್ಕೂ ವಿಜಯಿ ರಾಷ್ಟ್ರಗಳೊಡನೆ ಸಹಿ ಹಾಕಿದವು.

ಘಟಕ 112 ರಲ್ಲಿ 1917 ರ ರಷ್ಯಾದ ಕ್ರಾಂತಿಯ ಬಗ್ಗೆ ನೀವು ಅಧ್ಯಯನ ಮಾಡುವಿರಿ. ಕ್ರಾಂತಿಗೆ ಕಾರಣವಾದ ಅಂಶಗಳು, ಕ್ರಾಂತಿಯ ಪ್ರಮುಖ ಘಟನಾವಳಿಗಳು, ಬೋಲ್ಶೆವಿಕ್‌ರ ಪಾತ್ರ ಹಾಗೂ ಅವರ ಅಧಿಕಾರ ಸ್ಥಾಪನೆಯ ಬಗ್ಗೆ ನೀವು ತಿಳಿದುಕೊಳ್ಳುವಿರಿ. ಅನಂತರ ರಷ್ಯಾದಲ್ಲಿ ನಡೆದ ಆಂತರಿಕ ಯುದ್ಧ ಮತ್ತು ಲೆನಿನ್‌ನ ನಿರ್ಧಾರಗಳನ್ನು ತಿಳಿದುಕೊಳ್ಳುವಿರಿ.

ಘಟಕ 113 ರಲ್ಲಿ ಲೀಗ್ ಆಫ್ ನೇಷನ್ಸ್ ಬಗ್ಗೆ ವಿವರಿಸಲಾಗಿದೆ. ಈ ಘಟಕದಲ್ಲಿ ನೀವು ಲೀಗ್‌ನ ಸ್ಥಾಪನೆಗೆ ಕಾರಣವಾದ ಅಂಶಗಳು, ಲೀಗ್‌ನ ಅಂಗಗಳು, ಅದರ ರಾಜಕೀಯ ಮತ್ತು ರಾಜಕೀಯೇತರ ಸಾಧನೆಗಳನ್ನು ಕುರಿತು ನೀವು ಅಧ್ಯಯನ ಮಾಡುವಿರಿ. ಅಂತಿಮವಾಗಿ ಲೀಗ್‌ನ ವಿಫಲತೆಗೆ ಕಾರಣಗಳನ್ನು ನೀವು ಅರ್ಥಮಾಡಿಕೊಳ್ಳುವಿರಿ.

ಘಟಕ 114 ಜರ್ಮನಿಯಲ್ಲಿ ಒಂದನೆಯ ಜಾಗತಿಕ ಯುದ್ಧದ ನಂತರ ಸ್ಥಾಪನೆಯಾದ ವೀಮರ್ ಗಣರಾಜ್ಯಕ್ಕೆ ಸಂಬಂಧಿಸಿದುದು. ಈ ಘಟಕದಲ್ಲಿ ನೀವು ಎರಡನೆಯ ವಿಲಿಯಂನ ವಿರುದ್ಧ ಜನರು ದಂಗೆ ಎದ್ದು ಹೇಗೆ ವೀಮರ್ ಗಣರಾಜ್ಯವನ್ನು ಸ್ಥಾಪಿಸಿದರು ಎಂಬುದನ್ನು ಅರ್ಥಮಾಡಿಕೊಳ್ಳುವಿರಿ. ಅನಂತರ ಅದರ ಸಮಸ್ಯೆಗಳು ಹಾಗೂ ಈ ಸಮಸ್ಯೆಗಳನ್ನು ಬಗೆಹರಿಸಲು ಅದು ನಡೆಸಿದ ಹೋರಾಟದ ಬಗ್ಗೆ ಮತ್ತು ಅದರ ವಿಫಲತೆಗಳು ಎಷ್ಟರ ಮಟ್ಟಿಗೆ ಅದರ ಪತನಕ್ಕೆ ಕಾರಣವಾಯಿತೆಂಬುದನ್ನು ನೀವು ತಿಳಿದುಕೊಳ್ಳುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ 110

# ಮೊದಲನೆಯ ಜಾಗತಿಕ ಯುದ್ಧ - ಕಾರಣಗಳು, ಯುದ್ಧದಗತಿ ಮತ್ತು ಪರಿಣಾಮಗಳು.

## ರಚನೆ

110.0 ಉದ್ದೇಶಗಳು

110.1 ಪೀಠಿಕೆ

110.2 ಕಾರಣಗಳು

110.2.1. ಗುಪ್ತ ಒಪ್ಪಂದಗಳು

110.2.2. ಶಸ್ತ್ರಾಸ್ತ್ರಗಳ ಪೈಪೋಟಿ

110.2.3 ಸಾಮ್ರಾಜ್ಯಶಾಹಿ ಮತ್ತು ಆರ್ಥಿಕ ಪೈಪೋಟಿ

110.2.4 ಸಂಕುಚಿತ ರಾಷ್ಟ್ರೀಯ ಭಾವನೆ

110.2.5 ಕೈಸರ್ ವಿಲಿಯಂನ ವಿಶ್ವ ಸಾಮ್ರಾಜ್ಯ ಸ್ಥಾಪನೆಯ ಮಹತ್ವಾಕಾಂಕ್ಷೆ

110.2.6 ಅಂತರ ರಾಷ್ಟ್ರೀಯ ಸಂಸ್ಥೆಯ ಅಭಾವ

110.2.7 ಬಾಲ್ಕನ್ ಸಮಸ್ಯೆ

110.2.8 ತಕ್ಷಣದ ಕಾರಣ

110.2.9 ಯುದ್ಧದ ಪ್ರಾರಂಭ

110.3 ಯುದ್ಧದಗತಿ

110.3.1 ಪಶ್ಚಿಮದ ಗಡಿ

110.3.2 ಪೂರ್ವದ ಗಡಿ

110.3.3 ಡಾರ್ಡನೆಲ್ಸ್ ಜಲಸಂಧಿಯ ಪತ್ತಿರ ನಡೆದ ಯುದ್ಧ

110.3.4. ಬಾಲ್ಕನ್ ಗಡಿ

110.3.5 ಪೌರ್ವಾತ್ಯ ಮತ್ತು ವಸಾಹತುಗಳನ್ನು ನಡೆದ ಕದನಗಳು

110.3.6 ಇಟಲಿಯ ಗಡಿ

110.3.7 ಜಲಾಂತರ್ಗಾಮಿ ಯುದ್ಧ ಮತ್ತು ಮೊದಲನೆಯ ಜಾಗತಿಕ ಯುದ್ಧಕ್ಕೆ ಅಮೆರಿಕಾದ ಪ್ರವೇಶ

110.3.8 ವುಡ್ರೊ ವಿಲ್ಸನ್ನನ ಹದಿನಾಲ್ಕು ಅಂಶಗಳು

110.3.9 ಯುದ್ಧದ ಅಂತಿಮ ಘಟ್ಟಗಳು



110.4 ಪರಿಣಾಮಗಳು

110.4.1 ಜೀವಹಾನಿ

110.4.2 ಅರ್ಥವ್ಯವಸ್ಥೆಯ ಸ್ಥಾನ ಪಲ್ಲಟ

110.4.3 ಹಣದುಬ್ಬರ, ಸಾಲ ಮತ್ತು ಯುದ್ಧ ಪರಿಹಾರ ಸಮಸ್ಯೆಗಳು

110.4.4 ನಾಲ್ಕು ಸಾಮ್ರಾಜ್ಯಗಳ ಪತನ

110.4.5 ಸಾಮಾಜಿಕ ಪರಿಣಾಮಗಳು

110.4.6 ಸ್ವಯಂ ನಿರ್ಧಾರದ ತತ್ವದ ಮೂಲಕ ಅಸ್ತಿತ್ವಕ್ಕೆ ಬಂದ ರಾಜ್ಯಗಳು

110.4.7 ಕೇಂದ್ರ ಬಣಗಳ ಪತನ ಮತ್ತು ಹೊಸ ಶಕ್ತಿ ಸಮತೋಲನ ಸ್ಥಾಪನೆ

110.4.8 ಹೊಸ ಅಂತರ ರಾಷ್ಟ್ರೀಯ ಸಂಸ್ಥೆಯ ಉದಯ

110.4.9 ಉಗ್ರ ರಾಷ್ಟ್ರೀಯ ವಾದದ ಉದಯ

110.5 ಸಂಕ್ಷಿಪ್ತ ಅವಲೋಕನ

110.6 ಮಾದರಿ ಪ್ರಶ್ನೆಗಳು

110.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 110.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ತಿಳಿದುಕೊಳ್ಳುವ ಅಂಶಗಳೆಂದರೆ,

* ಮೊದಲನೆಯ ಜಾಗತಿಕ ಯುದ್ಧಕ್ಕೆ ಕಾರಣಗಳು - ಪ್ರಮುಖವಾಗಿ ಗುಪ್ತ ಒಪ್ಪಂದಗಳು, ಶಸ್ತ್ರಾಸ್ತ್ರ ಪೈಪೋಟಿ, ಸಾಮ್ರಾಜ್ಯಶಾಹಿ ಮತ್ತು ಆರ್ಥಿಕ ಪೈಪೋಟಿ, ಜರ್ಮನಿಯ ಮಹತ್ವಾಕಾಂಕ್ಷೆ, ಬಾಲ್ಕನ್ ಸಮಸ್ಯೆಗಳು, ಆಸ್ಟ್ರಿಯಾದ ಉತ್ತರಾಧಿಕಾರಿ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ
* ಯುದ್ಧದ ಪ್ರಮುಖ ಘಟನಾವಳಿಗಳು
* ಪಶ್ಚಿಮ ಗಡಿಯಲ್ಲಿ ಫ್ರಾನ್ಸ್ ಮತ್ತು ಜರ್ಮನಿಯ ನಡುವೆ ನಡೆದ ಭೀಕರ ಹೋರಾಟ
* ಪೂರ್ವದ ಗಡಿಯಲ್ಲಿ ರಷ್ಯನರು ಜರ್ಮನಿ ಮತ್ತು ಆಸ್ಟ್ರಿಯ- ಹಂಗೇರಿಯ ವಿರುದ್ಧ ನಡೆದ ಹೋರಾಟ
* ಅಂತಿಮವಾಗಿ ರಷ್ಯನರ ಸೋಲು- ಬ್ರೆಸ್ಟ್ ಲಿಟೋವ್‌ಸ್ಕ್ ಒಪ್ಪಂದ
* ಇಟಲಿ ಮತ್ತು ಗ್ರೀಸ್‌ನ ಪಾತ್ರ
* ಆಸ್ಟ್ರಿಯ- ಹಂಗೇರಿ ಮತ್ತು ಜರ್ಮನಿಗಳ ಪರವಾಗಿ ತುರ್ಕಿ ಮತ್ತು ಬಲ್ಗೇರಿಯಗಳು ಹೋರಾಟ ನಡೆಸಿದುದು
* ಜಲಾಂತರ್ಗಾಮಿ ಯುದ್ಧ ಮತ್ತು ಒಂದನೆಯ ಜಾಗತಿಕ ಯುದ್ಧದಲ್ಲಿ ಅಮೆರಿಕಾದ ಪ್ರವೇಶ
* ವುಡ್ರೊವಿಲ್ಸನ್ನನ ಹದಿನಾಲ್ಕು ಅಂಶಗಳು
* ಯುದ್ಧದ ಅಂತಿಮ ಹಂತ ಹಾಗೂ ಜರ್ಮನಿ ಮತ್ತು ಅದರ ಮಿತ್ರ ರಾಷ್ಟ್ರಗಳ ಸೋಲು
* ಯುದ್ಧದ ಫಲಿತಾಂಶಗಳು.

## 110.1 ಪೀಠಿಕೆ

ಆಧುನಿಕ ಪ್ರಪಂಚದ ಇತಿಹಾಸದಲ್ಲಿ 1914ರ ಬೇಸಿಗೆಯಲ್ಲಿ ಪ್ರಾರಂಭವಾದ ಒಂದನೆಯ ಜಾಗತಿಕ ಯದ್ಧವು ಅತ್ಯಂತ ಮಹತ್ವದ ಘಟನೆ ಎನಿಸಿಕೊಂಡಿದೆ. ನಾಲ್ಕು ವರ್ಷಗಳ ಕಾಲ ಈ ಯುದ್ಧ ಮುಂದುವರಿಯಿತು. ಇದು ಯೂರೋಪಿನಲ್ಲಿ ಪ್ರಾರಂಭವಾದರೂ, ಕ್ರಮೇಣ ಜಗತ್ತಿನ ಬಹುತೇಕ ರಾಷ್ಟ್ರಗಳು ಭಾಗವಹಿಸಬೇಕಾಯಿತು. ಆದುದರಿಂದಲೇ ಈ ಯುದ್ಧವನ್ನು ಮೊದಲನೆಯ ಮಹಾ ಜಾಗತಿಕಯುದ್ಧ ಎಂದು ಕರೆಯಲಾಗಿದೆ. ಆಧುನಿಕ ಶಸ್ತ್ರಾಸ್ತ್ರಗಳನ್ನು ಹಾಗೂ ಯುದ್ಧ ವಿಮಾನಗಳನ್ನು ಯಥೇಚ್ಛವಾಗಿ ಬಳಸಲಾಯಿತು. ಈ ಯುದ್ಧದ ವಿಶೇಷತೆ ಎಂದರೆ ಕಂದಕಗಳನ್ನು ತೋಡಿ ಯುದ್ಧಗಳನ್ನು ಹೋರಾಟ ನಡೆಸಿದುದು. ಸೈನಿಕರು ಯುದ್ಧ ವಿಮಾನಗಳ ಧಾಳಿಯನ್ನು ತಪ್ಪಿಸಿಕೊಳ್ಳಲು ಈ ರೀತಿ ಕಂದಕಗಳನ್ನು ತೋಡಿ ರಕ್ಷಿಸಿಕೊಳ್ಳಬೇಕಾಯಿತ್ತು. ಆದರೆ ಈ ಜಾಗತಿಕ ಯುದ್ಧದಲ್ಲಿ ಅಸಂಖ್ಯಾತ ಮಂದಿ ಸಾವನ್ನಪ್ಪಿದರು. ಲಕ್ಷಾಂತರ ಮಂದಿ ಗಾಯಗೊಂಡರು. ಇದೊಂದು ಭೀಕರ ಯುದ್ಧ ಎನಿಸಿಕೊಂಡಿತು. ಹಿಂದೆಂದೂ ಕಾಣದಂತಹ ವಿಪತ್ತು, ವಿನಾಶ, ಭೀಕರ ನರಹತ್ಯೆ, ಆರ್ಥಿಕ ದುಂದು ವೆಚ್ಚ, ವ್ಯವಸ್ಥೆ ಮತ್ತು ಅರಾಜಕತೆಯಲ್ಲಿ ಜಗತ್ತನ್ನೇ ಮುಳುಗಿಸಿತು.

## 110.2 ಕಾರಣಗಳು

ಒಂದನೆಯ ಜಾಗತಿಕ ಯುದ್ಧಕ್ಕೆ ಕಾರಣಗಳೇನು ಎಂಬುದನ್ನು ಸುಲಭವಾಗಿ ವಿವರಿಸಲು ಸಾಧ್ಯವಿಲ್ಲ. ಆದರೆ ಯುದ್ಧಕ್ಕೆ ಪ್ರಬಲ ಕಾರಣಗಳನ್ನು ಹತ್ತೊಂಬತ್ತನೆಯ ಶತಮಾನದಿಂದಲೂ ಗುರುತಿಸಬಹುದು. ಆದ್ದರಿಂದ ತಕ್ಷಣದ ಕಾರಣದ ಜೊತೆಗೆ ಅನೇಕ ದಶಕಗಳಿಂದ ಬೆಳೆದು ಬಂದಿದ್ದಂತಹ ಪ್ರಬಲ ಕಾರಣಗಳನ್ನು ವಿವರಿಸುವುದು ಅತ್ಯವಶ್ಯಕ .

### *110.2.1 ಗುಪ್ತ ಒಪ್ಪಂದಗಳು*

ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಯೂರೋಪಿನ ಅನೇಕ ಪ್ರಬಲ ರಾಷ್ಟ್ರಗಳು ಗುಪ್ತ ಒಪ್ಪಂದಗಳನ್ನು ಮಾಡಿಕೊಂಡಿದುದು ಒಂದನೆ ಜಾಗತಿಕ ಯುದ್ಧದ ಅನೇಕ ಕಾರಣಗಳಲ್ಲಿ ಒಂದು ಪ್ರಮುಖ ಕಾರಣವಾಗಿದೆ. ಈ ಗುಪ್ತ ಒಪ್ಪಂದಗಳ ರೂವಾರಿ ಬಿಸ್ಮಾರ್ಕ್ ಫ್ರಾನ್ಸ್‌ನ್ನು ಜರ್ಮನಿಯ ಪರಮ ಶತ್ರುವೆಂದು ಅವನು ಭಾವಿಸಿದನು. 1870ರಲ್ಲಿ ಫ್ರಾನ್ಸ್ ಜರ್ಮನಿಯಿಂದ

ಪರಾಭವಹೊಂದಿ, ಅಲ್ಸೆಸ್ ಮತ್ತು ಲೊರೇನ್‌ಗಳನ್ನು ಜರ್ಮನಿಗೆ ಬಿಟ್ಟುಕೊಟ್ಟು, ಅಪಮಾನದ ಬೇಗೆಯನ್ನು ಕುದಿಯಲಾರಂಭಿಸಿತು. ಫ್ರಾನ್ಸ್ ಜರ್ಮನಿಯ ವಿರುದ್ಧ ಸೇಡಿನ ಯುದ್ಧ ಹೂಡುವುದು ಖಚಿತವೆಂದು ಭಾವಿಸಿ ಬಿಸ್ಮಾರ್ಕನು ಫ್ರಾನ್ಸ್‌ನ್ನು ಏಕಾಂಗಿಗೊಳಿಸುವ ಹಾಗೂ ಜರ್ಮನ್ ಸಾಮ್ರಾಜ್ಯಕ್ಕೆ ಮಿತ್ರ ರಾಷ್ಟ್ರಗಳನ್ನು ಸಂಪಾದಿಸುವ ನೀತಿಯನ್ನು ಅನುಸರಿಸಿದನು. 1872ರಲ್ಲಿ ಬಿಸ್ಮಾರ್ಕನು ಜರ್ಮನಿ, ರಷ್ಯ ಮತ್ತು ಆಸ್ಟ್ರಿಯಾ - ಹಂಗೇರಿಗಳನ್ನೊಳಗೊಂಡಂತೆ ಮೂವರು ಚಕ್ರವರ್ತಿಗಳ ಲೀಗ್‌ನ್ನು ರಚಿಸಿದನು. ಈತನ ಉದ್ದೇಶ ಯೂರೋಪಿನಲ್ಲಿ ಶಾಂತಿ ಹಾಗೂ ಸಮತೋಲನವನ್ನು ಕಾಪಾಡುವುದಾಗಿತ್ತು. ಆದರೆ ಈ ಲೀಗ್ (ಒಕ್ಕೂಟ) ರಷ್ಯ ಮತ್ತು ಆಸ್ಟ್ರಿಯಾ ನಡುವೆ ಬಾಲ್ಕನ್ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯಗಳು ಉಂಟಾದುದರಿಂದ ಮುರಿದುಬಿತ್ತು. ಆದ್ದರಿಂದ 1879ರಲ್ಲಿ ಆಸ್ಟ್ರಿಯ - ಹಂಗೇರಿ ಮತ್ತು ಜರ್ಮನಿಯ ನಡುವೆ ದ್ವಿರಾಷ್ಟ್ರ ಒಪ್ಪಂದವನ್ನು ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾದನು. ಆಕಸ್ಮಿಕವಾಗಿ ರಷ್ಯ ಆಕ್ರಮಣ ನಡೆಸಿದರೆ ಪರಸ್ಪರ ಸಹಾಯ ಮಾಡಬೇಕೆಂದು ಒಪ್ಪಂದ ಮಾಡಿಕೊಳ್ಳಲಾಯಿತು. 1882ರಲ್ಲಿ ದ್ವಿರಾಷ್ಟ್ರಗಳ ಒಪ್ಪಂದಕ್ಕೆ ಇಟಲಿಯು ಸೇರಿಕೊಂಡಿದುದರಿಂದ ಅದು ತ್ರಿರಾಷ್ಟ್ರಗಳ ಒಕ್ಕೂಟವಾಗಿ ಪರಿವರ್ತಿತಗೊಂಡಿತು.

ಇದಕ್ಕೆ ವಿರುದ್ಧವಾಗಿ ಮತ್ತೊಂದು ಒಕ್ಕೂಟ ಬಹಳ ಬೇಗನೆ ರೂಪುಗೊಂಡಿತು. 1890ರಲ್ಲಿ ಕೈಸರ್ ಎರಡನೆಯ ವಿಲಿಯಂ ಅಧಿಕಾರಕ್ಕೆ ಬಂದ ಮೇಲೆ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಬಿಸ್ಮಾರ್ಕ್‌ನ ಹಾಗೆ ಎಚ್ಚರಿಕೆ ವಹಿಸಲಿಲ್ಲ. ಬಿಸ್ಮಾರ್ಕ್ ರಷ್ಯದೊಡನೆ ಮಾಡಿಕೊಂಡಿದ್ದ ದಿ ಇನ್ಸುರನ್ಸ್ ಒಪ್ಪಂದವನ್ನು ನವೀಕರಿಸಲಿಲ್ಲ. ಇದೇ ವೇಳೆಯಲ್ಲಿ ಫ್ರಾನ್ಸ್ ರಷ್ಯಾವನ್ನು ತನ್ನ ಕಡೆಗೆ ಒಲಿಸಿ ಕೊಳ್ಳಲು ಪ್ರಯತ್ನ ನಡೆಸಿತು. ಇಂತಹ ಪರಿಸ್ಥಿತಿಯಲ್ಲಿ ರಷ್ಯಾವು ಕೂಡ ಫ್ರಾನ್ಸ್‌ನೊಂದಿಗೆ ಸೇರಿಕೊಳ್ಳಲು ಸಮ್ಮತಿಸಿತು. ಈ ರೀತಿಯಾಗಿ 1893ರಲ್ಲಿ ಫ್ರಾನ್ಸ್ ಮತ್ತು ರಷ್ಯ ಒಂದು ಸೈನಿಕ ಒಪ್ಪಂದವನ್ನು ಮಾಡಿಕೊಂಡಿತು. ಈ ಒಪ್ಪಂದದ ಪ್ರಕಾರ ಆಸ್ಟ್ರಿಯ-ಹಂಗೇರಿ ಅಥವಾ ಜರ್ಮನಿ ಆಕ್ರಮಣ ನಡೆಸಿದರೆ ಪರಸ್ಪರ ಸಹಾಯ ಮಾಡಲು ನಿರ್ಧಾರ ತೆಗೆದುಕೊಂಡವು.

ರಷ್ಯ ಮತ್ತು ಫ್ರಾನ್ಸ್ ಒಪ್ಪಂದ ಮಾಡಿಕೊಂಡ ನಂತರ ಇಂಗ್ಲೆಂಡ್‌ಗೆ ತಾನು ಏಕಾಂಗಿ ರಾಷ್ಟ್ರವೆಂಬ ಭಾವನೆ ಉಂಟಾಯಿತು ಮತ್ತು ಫ್ರಾನ್ಸ್‌ನ ನಡುವೆ ವಸಾಹತುಗಳಿಗೆ ಸಂಬಂಧಿಸಿದಂತ ಭಿನ್ನಾಭಿಪ್ರಾಯಗಳಿದ್ದವು. ಆದರು ಕೂಡ ಲಾರ್ಡ್ ಸ್ಯಾಲಿಸ್ ಬರಿಯ ನಂತರ, ಏಕಾಂಗಿತನವನ್ನು ಅಂತ್ಯಗೊಳಿಸಿ ಫ್ರಾನ್ಸ್ ಜೊತೆ ಸಖ್ಯ ಬೆಳಸಲು ಉತ್ಸಾಹ ತೋರಿತು. ಇದೇ ಸಮಯದಲ್ಲಿ 1902ರಲ್ಲಿ ಏಷ್ಯಾದ ಪ್ರಮುಖ ರಾಷ್ಟ್ರವೆನಿಸಿದ್ದ ಜಪಾನ್‌ನೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿತು. ಇದಾದ ಕೆಲವೇ ವರ್ಷಗಳಲ್ಲಿ ಫ್ರಾನ್ಸ್‌ನೊಡನೇ ಇದ್ದ ವಸಾಹತುಗಳಿಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿತು. 1904 ರಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸಿನ ನಡುವೆ ಒಂದು ಒಪ್ಪಂದವೇರ್ಪಟ್ಟಿತು. ಅನಂತರ ಆಂಗ್ಲೊ-ರಷ್ಯನ್ ಒಪ್ಪಂದವನ್ನು 1907ರಲ್ಲಿ ಮಾಡಿಕೊಳ್ಳಲಾಯಿತು. ಈ ರೀತಿಯಾಗಿ ಟ್ರಿಪಲ್ ಅಂತಾಂತ್ ಒಪ್ಪಂದವೇರ್ಪಟ್ಟಿತು. (Triple entente)ಈ ರೀತಿಯಾಗಿ ಪ್ರಪಂಚದಲ್ಲಿ ಎರಡು ಪ್ರಬಲ ಬಣಗಳು ಹುಟ್ಟಿಕೊಂಡವು. ಇವುಗಳ ನಡುವಿನ ಪೈಪೋಟಿ ಒಂದನೆಯ ಮಹಾ ಯುದ್ಧಕ್ಕೆ ಒಂದು ಪ್ರಬಲ ಕಾರಣವಾಯಿತು.

### *110.2.2 ಶಸ್ತ್ರಾಸ್ತ್ರಗಳ ಪೈಪೋಟಿ*

ಎರಡು ಬಣಗಳ ನಡುವೆ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ ಮತ್ತು ಅನುಮಾನಗಳು ಹೆಚ್ಚಾಗಿ ಶಸ್ತ್ರಾಸತ್ರಗಳ ಪೈಪೋಟಿ ಪ್ರಾರಂಭವಾಯಿತು. ಅವರು ತಮ್ಮ ರಕ್ಷಣೆಗೋಸ್ಕರ ಹಾಗೂ ಶಕ್ತಿ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ಯೂರೋಪಿನ ರಾಷ್ಟ್ರಗಳು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೆಚ್ಚಿನ ಸಂಖ್ಯೆಯನ್ನು ಸಂಗ್ರಹಿಸಲು ಪ್ರಾರಂಭಿಸಿದವು. ಈ ಶಸ್ತ್ರಾಸ್ತ್ರಗಳ ಪೈಪೋಟಿ ಫ್ರಾಂಕೊ-ಪ್ರಷ್ಯಾನ್ ಯುದ್ಧದ ನಂತರ ಪ್ರಾರಂಭವಾಯಿತು. ಜರ್ಮನಿಯು ತನ್ನ ಸೈನ್ಯ ಹಾಗೂ ನೌಕಾ ಬಲವನ್ನು ಆಧುನೀಕರಣಗೊಳಿಸುವ ದೊಡ್ಡ ಯೋಜನೆಯನ್ನೇ ಕೈಗೆತ್ತಿಕೊಂಡಿತು. ಜರ್ಮನಿಯ ಈ ನೀತಿ ಉಳಿದ ಯೂರೋಪಿಯನ್ ರಾಷ್ಟ್ರಗಳು ಕೂಡ ತಮ್ಮ ತಮ್ಮ ಸೈನ್ಯಗಳನ್ನು ಜರ್ಮನಿಯ ಮಾದರಿಯಲ್ಲಿಯೇ ಆಧುನೀಕರಣಗೊಳಿಸಲು ಪ್ರೇರೇಪಿಸಿದವು. ಮತ್ತು ಹೆಚ್ಚು ಹಣವನ್ನು ವ್ಯಯ ಮಾಡಿದವು. 1870ರ ನಂತರ ಯೂರೋಪಿನಲ್ಲಿ ದೊಡ್ಡ ಗಾತ್ರ ಸೈನ್ಯದ ನಿರ್ಮಾಣಕ್ಕೆ ಅಪಾರ ಹಣವನ್ನು ವ್ಯಯ ಮಾಡುವುದು ಸರ್ವೇ ಸಾಮಾನ್ಯವಾಯಿತು. 1878ರಿಂದ 1914ವರೆಗೆ ಯೂರೋಪಿನಲ್ಲಿ ಶಾಂತಿ ನೆಲೆಸಿತ್ತು. ಆದರೆ ಇದು ಶಸ್ತ್ರಾಸ್ತ್ರ ಪೈಪೋಟಿಯಿಂದ ಕೂಡಿದ್ದ ಶಾಂತಿಯಾಗಿತ್ತು.

ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿ ಜರ್ಮನಿ ಮತ್ತು ಗ್ರೇಟ್ ಬ್ರಿಟನ್‌ನ ನಡುವೆ ನೆಡದ ಪೈಪೋಟಿಯೇ ಪ್ರಮುಖ ಲಕ್ಷಣವಾಗಿದೆ. 1900ರ ವೇಳೆಗೆ ಎರಡು ಅಂಶಗಳು ಸಾಬೀತಾಗಿದ್ದವು. ಒಂದನೆಯದಾಗಿ ಯೂರೋಪಿನಲ್ಲಿ ಜರ್ಮನಿ ಒಂದು ಪ್ರಬಲ ರಾಷ್ಟ್ರವೆಂಬುದು, ಎರಡನೆಯದು ಪ್ರಪಂಚದಲ್ಲಿ ಗ್ರೇಟ್‌ಬ್ರಿಟನ್ ಸಾಮ್ರಾಜ್ಯ ಒಂದು ಪ್ರಬಲವೆಂಬುದು. ಹತ್ತೊಂಬತ್ತನೆಯ ಶತಮಾನದಲ್ಲಿ ಗ್ರೇಟ್ ಬ್ರಿಟನ್ ಸಮುದ್ರದ ಮೇಲೆ ಸರ್ವಾಧಿಕಾರವನ್ನು ಸ್ಥಾಪಿಸಿತ್ತು. ಪ್ರಪಂಚದ 1/4ರಷ್ಟು ಭೂಭಾಗದ ಮೇಲೆ ಗ್ರೇಟ್ ಬ್ರಿಟನ್ ತನ್ನ ಅಧಿಕಾರವನ್ನು ಸ್ಥಾಪಿಸಿತ್ತು. ಕೈಸರ್ ಎರಡನೆಯ ವಿಲಿಯಂ ಕೇವಲ ಯೂರೋಪಿನಲ್ಲಿ ತಾನು ಪ್ರಬಲ ಸೈನ್ಯ ಹೊಂದಿದ್ದರೆ ಸಾಕಾಗುವುದಿಲ್ಲ **ಎಂಬ** ನಿಲುವಿಗೆ ಬಂದನು. ಅವನು ಕೂಡ ಒಂದು ಪ್ರಬಲ ನೌಕಾ ಬಲವನ್ನು ನಿರ್ಮಿಸಲು ನಿರ್ಧರಿಸಿನು. ತನ್ನ ಹಡಗುಗಳ ಪ್ರಯಾಣಕ್ಕೆ ಯಾವುದೇ ಅಪಾಯ ಉಂಟಾಗಬಾರದೆಂಬ ದೃಷ್ಟಿಯಿಂದ ಡ್ರೆಡ್‌ನಾಟ್ಸ್ ಎಂಬ ಯುದ್ಧ ನೌಕೆಗಳನ್ನು (dread Noughts battle

ships) ನಿರ್ಮಿಸಲು ಪ್ರಾರಂಭಿಸಿದನು. ಪ್ರಬಲ ಯುದ್ಧ ನೌಕೆಗಳನ್ನು ಜರ್ಮನಿ ನಿರ್ಮಿಸುವುದನ್ನು ಕಂಡು ಇಂಗ್ಲೆಂಡ್‌ಗೆ ತಳಮಳವುಂಟಾಯಿತು. ಇದೇ ವೇಳೆಯಲ್ಲಿ ಡಾರ್ವಿನ್ನನ ಸಿದ್ಧಾಂತವನ್ನನುಸರಿಸಿ ಯುದ್ಧದ ಪ್ರೇರಣೆ ಜರ್ಮನರಲ್ಲಿ ಹೆಚ್ಚಾಯಿತು. 1909 ಮತ್ತು 1911ರ ನಡುವೆ ಜರ್ಮನಿ ಒಂಬತ್ತು ಡ್ರೆಡ್‌ನಾಟ್ಸ್ ಯುದ್ಧ ನೌಕೆಗಳನ್ನು ನಿರ್ಮಿಸಿತು. ಬ್ರಿಟನ್ 18 ಅಂತಹ ಯುದ್ಧ ನೌಕೆಗಳನ್ನು ನಿರ್ಮಾಣಮಾಡಿತು. 1912-13ರಲ್ಲಿ ಜರ್ಮನಿಯು ಸೈನ್ಯದ ಬಲವನ್ನು 8,70.000ಕ್ಕೆ ಏರಿಸಲು ಕಾನೂನುಗಳನ್ನು ಹೊರಡಿಸಿತು. ಫ್ರಾನ್ಸ್ ಮತ್ತು ರಷ್ಯಾದಲ್ಲಿಯೂ ಕೂಡ ಯುವಕರು ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಯಿತು.

ಶಸ್ತ್ರಾಸ್ತ್ರ ಪೈಪೋಟಿಯನ್ನು ತಡೆಗಟ್ಟಲು ಹಲವು ಪ್ರಯತ್ನಗಳನ್ನು ನಡೆಸಲಾಯಿತು. ಅನೇಕ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸಲಾಯಿತು. ಆದರೆ ಈ ಅಂತರ ರಾಷ್ಟ್ರೀಯ ಸಮಾವೇಶಗಳು ಶಸ್ತ್ರಾಸ್ತ್ರ ಪೈಪೋಟಿಯನ್ನು ನಿಲ್ಲಿಸಲು ಯಶಸ್ವಿಯಾಗಲಿಲ್ಲ. ಯುದ್ಧ ಅನಿವಾರ್ಯ ಎಂಬ ಭಾವನೆಯಿಂದ ಸಣ್ಣಪುಟ್ಟ ರಾಷ್ಟ್ರಗಳು ಕೂಡ ತಮ್ಮ ಸೈನ್ಯಗಳ ಬಲವನ್ನು ಹೆಚ್ಚಿಸಲು ಕ್ರಮಕೈಗೊಂಡವು. ಈ ರೀತಿಯಾಗಿ ಯೂರೋಪಿನ ರಾಷ್ಟ್ರಗಳು ಎರಡು ಬಣಗಳಾಗಿ ರೂಪುಗೊಂಡು ಎಂತಹ ಘರ್ಷಣೆಯನ್ನಾದರೂ ಎದುರಿಸಲು ಶಸ್ತ್ರಾಸ್ತ್ರಗಳನ್ನು ಶೇಖರಿಸಿದವು.

### *110.2.3 ಸಾಮ್ರಾಜ್ಯಶಾಹಿ ಮತ್ತು ಆರ್ಥಿಕ ಪೈಪೋಟಿ*

ಯೂರೋಪಿನ ರಾಷ್ಟ್ರಗಳ ಸಾಮ್ರಾಜ್ಯಶಾಹಿ ನೀತಿ ಹಾಗೂ ಆರ್ಥಿಕ ಪೈಪೋಟಿಯು ಕೂಡ ಯುದ್ಧಕ್ಕೆ ಕಾರಣವಾಯಿತು. ಅನೇಕ ಒಕ್ಕೂಟಗಳ ರಚನೆಯು ಅಯಾಯ ರಾಷ್ಟ್ರಗಳ ಸಾಮ್ರಾಜ್ಯಶಾಹಿ ನೀತಿ ಹಾಗೂ ಉದ್ದೇಶಗಳನ್ನು ಅವಲಂಬಿಸಿತು ಪ್ರಪಂಚದ ನಾನಾ ಭಾಗಗಳನ್ನು ಈ ರಾಷ್ಟ್ರಗಳು ಹೋರಾಟ ನಡೆಸಿ ತಮ್ಮ ರಾಜಕೀಯ ಹಾಗೂ ಆರ್ಥಿಕ ಶಕ್ತಿಯನ್ನು ಪಡೆಯಲು ಪ್ರಯತ್ನ ನಡೆಸಿದವು.

ವಿಶೇಷವಾಗಿ ಚರ್ಚಿಸಬೇಕಾದ ಅಂಶವೆಂದರೆ ಜರ್ಮನಿ ಮತ್ತು ಗ್ರೇಟ್‌ಬ್ರಿಟನ್‌ನ ನಡುವೆ ನಡೆದ ಆರ್ಥಿಕ ಪೈಪೋಟಿ. ಜರ್ಮನಿ ಮತ್ತು ಗ್ರೇಟ್‌ಬ್ರಿಟನ್ ತಮ್ಮ ದೇಶಗಳಲ್ಲಿ ತಯಾರಿಸಲ್ಪಟ್ಟ ಸಿದ್ಧ ವಸ್ತುಗಳನ್ನು ಪ್ರಪಂಚದಾದ್ಯಂತ ಮಾರಾಟ ಮಾಡಲು ಪೈಪೋಟಿ ನಡೆಸಿದರು. ಜರ್ಮನಿಯ ವಸ್ತುಗಳು ಪ್ರಪಂಚದ ಪ್ರತಿಯೊಂದು ಮೂಲೆಯನ್ನು ತಲುಪಿದವು. ಜರ್ಮನಿಯ ಈ ಅದ್ಭುತ ಸಾಧನೆ ಯೂರೋಪಿನ ಇನ್ನಿತರ ರಾಷ್ಟ್ರಗಳಿಗೆ ಅಸೂಯೇಯನ್ನುಂಟು ಮಾಡಿದವು. ಅದರಲ್ಲೂ ಗ್ರೇಟ್ ಬ್ರಿಟನ್‌ಗೆ ಜರ್ಮನಿಯ ಸಾಧನೆಯನ್ನು ಕಂಡು ಭೀತಿ ಉಂಟಾಯಿತು.

### *110.2.4 ಸಂಕುಚಿತ ರಾಷ್ಟ್ರೀಯ ಭಾವನೆ*

ರಾಷ್ಟ್ರೀಯತೆಯ ಉತ್ಸಾಹ ಇಟಲಿ ಮತ್ತು ಜರ್ಮನಿಯಂತಹ ರಾಷ್ಟ್ರಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಉದಯಿಸಲು ಕಾರಣವಾಯಿತು. ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ಸ್ವಯಂ ನಿರ್ಣಯದ ಅಂಶ ಅನೇಕ ರೀತಿಯ ಜಟಿಲ ಸಮಸ್ಯೆಗಳನ್ನು ಸೃಷ್ಟಿಸಿತು. ಅಲ್ಸೆಸ್ ಮತ್ತು ಲೊರೇನ್ ಪ್ರದೇಶಗಳನ್ನು ಜರ್ಮನಿ ಆಕ್ರಮಿಸಿಕೊಂಡಿದುದು ಹಾಗೂ ಬೋಸ್ನಿಯ ಮತ್ತು ಹರ್ಜಿಗೋವಿನ ಪ್ರದೇಶಗಳನ್ನು ಆಸ್ಟ್ರಿಯ - ಹಂಗೇರಿ ಆಕ್ರಮಿಸಿಕೊಂಡಿದುದು ಅನೇಕ ಸಮಸ್ಯೆಗಳನ್ನು ಒಡ್ಡಿದವು. ಫ್ರಾನ್ಸ್ ಮತ್ತು ಸರ್ಬಿಯ ಇಂತಹ ನೀತಿಯನ್ನು ವಿರೋಧಿಸಿದವು. ಈ ಅಲ್ಪ ಸಂಖ್ಯಾತರು (ಅಲ್ಸೇಸ್ -ಲೋರೇನ್ ಹಾಗೂ ಬೋಸ್ನಿಯ ಹರ್ಜಿಗೋವಿನ ಜನಾಂಗ) ತಮ್ಮ ರಾಷ್ಟ್ರಿಯತೆಯನ್ನು ನಿರ್ಧರಿಸಿಕೊಳ್ಳಲು ಅಡ್ಡಿ ಉಂಟು ಮಾಡಿದುದು ಕೂಡ ಒಂದನೆಯ ಮಹಾಯುದ್ಧಕ್ಕೆ ಕಾರಣವಾಯಿತು.

### *110.2.5 ಕೈಸರ್ ವಿಲಿಯಂನ ವಿಶ್ವಸಾಮ್ರಾಜ್ಯ ಸ್ಥಾಪನೆಯ ಮಹತ್ವಾಕಾಂಕ್ಷೆ*

ಕೈಸರ್ ಎರಡನೆಯ ವಿಲಿಯಂ ವಿಶ್ವಸಾಮ್ರಾಜ್ಯವನ್ನ ಸ್ಥಾಪಿಸಬೇಕೆಂದು ಮಹತ್ವಾಕಾಂಕ್ಷೆಯನ್ನು ಹೊಂದಿದ್ದನು. ಕೈಸರ್ ವಿಲಿಯಂ "ದೇವರಿಗೆ ಮಾತ್ರ ನಾವು ಜರ್ಮನರು ಹೆದುರುತ್ತೇವೆ ವಿಶ್ವದಲ್ಲಿ ಇನ್ನಾರಿಗೂ ಹೆದುರುವುದಿಲ್ಲ" ಮತ್ತು ಜರ್ಮನರ ಶ್ರೇಷ್ಠತೆಗೆ ಸಮುದ್ರವು ಅತ್ಯವಶ್ಯಕ" ಎಂದು ಘೋಷಿಸಿದನು. " ನಮ್ಮ ಭವಿಷ್ಯ ಸಮುದ್ರದ ಮೇಲೆ ನಿಂತಿದೆ" ಈ ಗುರಿ ಸಾಧನೆಗಾಗಿ ವಸಾಹತು ಸಾಮ್ರಾಜ್ಯದ ವಿಸ್ತರಣೆಗಾಗಿ ಸೇನಾಬಲ ಹಾಗೂ ನೌಕಾ ಬಲವನ್ನು ಹೆಚ್ಚಿಸಿಕೊಂಡು ಐರೋಪ್ಯ ರಾಷ್ಟ್ರಗಳ ವೈರತ್ವವನ್ನು ಕಟ್ಟಿಕೊಂಡರು. ಜರ್ಮನ್ ಸಾಮ್ರಾಜ್ಯದ ವಿಸ್ತರಣೆ ಮತ್ತು ಅದರ ಪ್ರತಿಷ್ಠೆಯನ್ನು ಎತ್ತಿ ಹಿಡಿಯಲು ಸಮರೋತ್ಸಾಹಿಯಾದನು. ಕೈಸರಂ ವಿಲಿಯಂನ ಇಂತಹ ಮಹತ್ವಾಕಾಂಕ್ಷೆಯು ಒಂದನೆಯ ಮಹಾಯುದ್ಧಕ್ಕೆ ಕಾರಣವಾಯಿತು.

### *110.2.6 ಅಂತರ ರಾಷ್ಟ್ರೀಯ ಸಂಸ್ಥೆಯು ಅಭಾವ*

ಮೊದಲನೆಯ ಜಾಗತಿಕ ಯುದ್ಧಕ್ಕೆ ಮುಂಚೆ ರಾಷ್ಟ್ರಗಳ ನಡುವೆ ಉಂಟಾಗಬಹುದಾದ ಸಮಸ್ಯೆಗಳನ್ನು ಬಗೆಹರಿಸಲು ಅಂತರರಾಷ್ಟ್ರೀಯ ಸಂಸ್ಥೆ ಇಲ್ಲದೆ ಇದ್ದುದು ಕೂಡ 1914ರಲ್ಲಿ ಯುದ್ಧ ಪ್ರಾರಂಭವಾಗಲು ಕಾರಣವಾಯಿತು. ಅಂತರ ರಾಷ್ಟ್ರೀಯ

ಸಂಬಂಧಗಳು ದ್ವೇಷ. ಅಸೂಯೆ ಮತ್ತು ಅಸೂಯೆಗಳಿಂದ ಕೂಡಿದ್ದು ಅನೇಕ ಯುದ್ಧಗಳಿಗೆ ಕಾರಣವಾಗಿದ್ದವು. ಲೀಗ್ ಆಫ್ ನೇಷನ್ಸ್ ಅಥವಾ ವಿಶ್ವಸಂಸ್ಥೆಯಂತಹ ಅಂತರ ರಾಷ್ಟ್ರೀಯ ಸಂಸ್ಥೆಗಳು ಇಲ್ಲದೆ ಇದ್ದುದು ಕೂಡ ಯುದ್ಧಕ್ಕೆ ಕಾರಣವಾಯಿತೆಂದು ಹೇಳಬಹುದು.

### *110.2.7 ಬಾಲ್ಕನ ಸಮಸ್ಯೆ*

ತುರ್ಕಿ ಸಾಮ್ರಾಜ್ಯದ ಅವನತಿಯು ಕೂಡ ಅಂತರ ರಾಷ್ಟ್ರೀಯ ಬಿಕ್ಕಟ್ಟಿಗೆ ಕಾರಣವಾಗಿ ಒಂದನೆಯ ಮಹಾಯುದ್ಧಕ್ಕೆ ಕಾರಣವಾಯಿತು. ತುರ್ಕಿ ಸಾಮ್ರಾಜ್ಯದ ಪತನದಿಂದಾಗಿ ಅನೇಕ ಬಾಲ್ಕನ್ ರಾಜ್ಯಗಳು ಉದಯಿಸಿದವು. ಈ ರಾಜ್ಯಗಳು ಪರಸ್ಪರ ಕಚ್ಚಾಟ ಪ್ರಾಂಭಿಸಿದವು. ಯೂರೋಪಿನ ಪ್ರಬಲ ರಾಷ್ಟ್ರಗಳು ಬೆಂಬಲ ಸೂಚಿಸಿದುದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಅದರಲ್ಲೂ ಪ್ರಮುಖವಾಗಿ ಆಸ್ಟ್ರಯ - ಹಂಗೇರಿ ಮತ್ತು ರಷ್ಯ ಹಸ್ತಕ್ಷೇಪ ನಡೆಸಿದವು. 1908ರ ಬೋಸ್ನಿಯ ಬಿಕ್ಕಟ್ಟಿನ ಸಮಯದಲ್ಲಿ ರಷ್ಯಾವು ಆಸ್ಟ್ರಿಯಾದ ವಿರುದ್ಧ ಸರ್ಬಿಯಾಕ್ಕೆ ಬೆಂಬಲ ಸೂಚಿಸಿತು. ಇದು ಆಸ್ಟ್ರಿಯ, ಸರ್ಬಿಯ ಮತ್ತು ರಷ್ಯಾಗಳ ನಡುವೆ ಉದ್ವೇಗಕ್ಕೆ ಕಾರಣವಾಯಿತು. 1913ರಲ್ಲಿ ಮ್ಯಾಸಿಡೋನಿಯಾದ ವಿಭಜನೆಗೆ ಸಂಬಂಧಿಸಿದಂತೆ ಸರ್ಬಿಯ, ಬಲ್ಗೇರಿಯಾ, ಗ್ರೀಸ್ ಮತ್ತು ಮಾಂಟಿನಿಗ್ರೋಗಳ ನಡುವೆ ಮನಸ್ತಾಪ ಉಂಟಾಯಿತು. ಸರ್ಬಿಯ ಏಡ್ರಿಯಾಟಿಕ್ ಸಮುದ್ರದಲ್ಲಿ ಒಂದು ಬಂದರನ್ನು ಪಡೆಯುವುದನ್ನು ಆಸ್ಟ್ರಿಯ ವಿಫಲಗೊಳಿಸಿತು. ಸಮುದ್ರಕ್ಕೆ ತಲುಪಲು ಒಂದು ಮಾರ್ಗವನ್ನು ಸರ್ಬಿಯ ಪ್ರಯತ್ನ ನಡೆಸಿತು. ಆಗ ಅದಕ್ಕ ಅಡ್ಡಿಪಡಿಸಲು ಆಸ್ಟ್ರಿಯಾ- ಹಂಗೇರಿ ತನ್ನ ಪ್ರಭಾವ ಬೀರಿ ಅಲ್ಬೇನಿಯ ರಾಜ್ಯವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಯಿತು. ಆದ್ದರಿಂದ ಆಸ್ಟ್ರಿಯ ಮತ್ತು ಸರ್ಬಿಯಾ ನಡುವೆ ವೈಷಮ್ಯ ಹೆಚ್ಚಾಯಿತು. ಈ ವೈರತ್ವ ಮುಂದುವರಿದು ಅಂತಿಮವಾಗಿ ಒಂದನೆಯ ಮಹಾಯುದ್ಧಕ್ಕೆ ಕಾರಣವಾಯಿತು. ಇದೇ ರೀತಿ ಇನ್ನುಳಿದ ಅನೇಕ ಬಾಲ್ಕನ್ ರಾಜ್ಯಗಳುಕೂಡ ಎರಡು ಬಾಲ್ಕನ್ ಯುದ್ಧಗಳ ಫಲಿತಾಂಶಗಳ ಬಗ್ಗೆ ಅಸಂತೋಷವನ್ನು ಹೊಂದಿದ್ದವು.

### *110.2.8 ತಕ್ಷಣದ ಕಾರಣ*

1914ರ ಜೂನ್ 28ರಂದು ಆಸ್ಟ್ರಿಯಾ ಚಕ್ರವರ್ತಿ ಸಹೋದರನ ಮಗ ಹಾಗೂ ಆಸ್ಟ್ರಿಯಾ ಸಿಂಹಾಸನಕ್ಕೆ ಉತ್ತರಾಧಿಕಾರಿ ಆರ್ಚ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್ ಮತ್ತು ಆತನ ಪತ್ನಿಯು ಸೈನ್ಯದ ಪರಿಶೀಲನೆಗಾಗಿ ಬಂದಾಗ ಸರ್ಬಿಯಾದ ತರುಣ ವಿದ್ಯಾರ್ಥಿ ಪ್ರಿನ್ಸೆಪ್ ಎಂಬುವವನು ಬೋಸ್ನಿಯಾದ ರಾಜಧಾನಿ ಸರಾಜಿವೊ ನಗರದ ರಸ್ತೆಯಲ್ಲಿ ಕೊಲೆ ಮಾಡಿದನು. ಈ ಕಗ್ಗೊಲೆಯ ದಾರುಣ ವಾರ್ತೆಯಿಂದ ಆಸ್ಟ್ರಿಯಾ -ಹಂಗೇರಿ ಸಾಮ್ರಾಜ್ಯವು ತಲ್ಲಣಿಸಿತು. ಸರಾಜಿವೊ ಘಟನೆ ಪ್ರಥಮ ಮಹಾಯುದ್ಧಕ್ಕೆ ತಕ್ಷಣದ ಕಾರಣವಾಗಿ ಪರಿಣಮಿಸಿತು. ಈ ಕಗ್ಗೊಲೆಗೆ ಸರ್ಬಿಯಾವೇ ಕಾರಣವೆಂದು ಪ್ರಬಲವಾಗಿ ಆರೋಪ ಮಾಡಿತು.

### *110.2.9 ಯುದ್ಧದ ಪ್ರಾರಂಭ*

ಆಸ್ಟ್ರಿಯಾದ ಜನತೆಯು ಸರ್ಬಿಯವನ್ನು ಕೊಲೆ ಪಾತಕಿಗಳ ನಾಡೆಂದು ಘೋಷಿಸಿತು. ಕೊಲೆಯಾದ ಒಂದು ತಿಂಗಳ ನಂತರ ಆಸ್ಟ್ರಿಯಾ ಸರ್ಕಾರವು ಕಠೋರವಾದ ಬೇಡಿಕೆಗಳಿಂದ ಕೂಡಿದ ಅಂತಿಮ ಎಚ್ಚರಿಕೆಯ ಪತ್ರವನ್ನು ಸರ್ಬಿಯಾಕ್ಕೆ ಕಳುಹಿಸಿತು. ಸರ್ಬಿಯಾ ಫರ್ಡಿನೆಂಡನ ಕೊಲೆಯಲ್ಲಿ ಎಸಗಿದ ತನ್ನ ತಪ್ಪನ್ನು 48 ಗಂಟೆಗಳೊಳಗೆ ಒಪ್ಪಿಕೊಳ್ಳತಕ್ಕದೆಂದೂ, ಸರ್ಬಿಯಾದಲ್ಲಿ ಅಪರಾಧದ ಶೋಧ ನಡೆಸಲು ಆಸ್ಟ್ರಿಯ -ಹಂಗೇರಿಯು ಸರ್ಬಿಯಾವನ್ನು ಒತ್ತಾಯಿಸಿತು. ಸರ್ಬಿಯವು ಆಸ್ಟ್ರಿಯಾದ ಹಲವು ಬೇಡಿಕೆಗಳನ್ನು ನಿರಾಕರಿಸಿತು. ಆಸ್ಟ್ರಿಯವು ಸರ್ಬಿಯಾದ ಉತ್ತರದಿಂದ ತೃಪ್ತವಾಗಲಿಲ್ಲ. ಅದು 1914 ರ ಜುಲೈ 28ರಂದು ಸರ್ಬಿಯದ ವಿರುದ್ಧ ಯುದ್ಧ ಘೋಷಿಸಿತು. ರಷ್ಯಾವು ಸರ್ಬಿಯದ ಪರ ತನ್ನ ಬೆಂಬಲ ಸೂಚಿಸಿ ಸೈನ್ಯವನ್ನು ಕಳುಹಿಸಿಕೊಟ್ಟಿತು. ಜರ್ಮನಿಯು ರಷ್ಯಕ್ಕೆ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿ ಕೊಳ್ಳುವಂತೆ ಸೂಚಿಸಿತು. ಆದರೆ ರಷ್ಯ ಇದಕ್ಕೆ ಉತ್ತರಿಸಲಿಲ್ಲ. ಆದ್ದರಿಂದ ಜರ್ಮನಿಯು ಅದರ ವಿರುದ್ಧ ಯುದ್ಧ ಘೋಷಿಸಿತು. ಜರ್ಮನಿಯು ಫ್ರಾನ್ಸ್‌ಗೆ ತಟಸ್ಥವಾಗಿರಬೇಕೆಂದು ಸೂಚಿಸಿತು. ಆದರೆ ಫ್ರಾನ್ಸ್ ಯಾವುದೇ ಪ್ರತ್ಯುತ್ತರ ನೀಡಲಿಲ್ಲ. ಆದ್ದರಿಂದ ಜರ್ಮನಿಯು ಫ್ರಾನ್ಸ್ ವಿರುದ್ಧವು ಕೂಡ ಯುದ್ಧ ಸಾರಿತು. ಇಟಲಿಯು ತ್ರಿರಾಷ್ಟ್ರಗಳ ಸದಸ್ಯವಾದರೂ, ತಕ್ಷಣವೇ ಯುದ್ಧದಲ್ಲಿ ಭಾಗವಹಿಸಲಿಲ್ಲ. ಅದು ಹಲವು ವರ್ಷಗಳ ಕಾಲ ತಟಸ್ಥ ನೀತಿಯನ್ನುಸರಿಸಿತು. 1839ರ ಬೆಲ್ಜಿಯಂನ ಮೇಲೆ ಜರ್ಮನಿ ದಾಳಿ ಮಾಡಿದಾಗ 1914 ಆಗಸ್ಟ್ ನಾಲ್ಕರಂದು ಅದರ ವಿರುದ್ಧ ಇಂಗ್ಲೆಂಡ್ ಕೂಡ ಯುದ್ಧ ಘೋಷಿಸಿತು. ತುರ್ಕಿಯು ಕೂಡ ಜರ್ಮನಿಯ ಪರ ವಹಿಸಿ ಯುದ್ಧದಲ್ಲಿ ಧುಮುಕಿತು. ಬಲ್ಗೇರಿಯಾ ಸೆಪ್ಟೆಂಬರ್ 1915ರಂದು ಜರ್ಮನಿಯ ಪರ ಯುದ್ಧದಲ್ಲಿ ಭಾಗವಹಿಸಿತು. ಆದರೆ ಅಂತಿಮವಾಗಿ ಇಟಲಿಯು ಕೂಡ ತಟಸ್ಥ ನೀತಿಯನ್ನು ಮುರಿದು ಟ್ರಿಪಲ್ ಅಂತಾಂತ್ ಪರ ಯುದ್ಧದಲ್ಲಿ ಭಾಗವಹಿಸಿತು. ಈ ರೀತಿಯಾಗಿ ಮೊದಲನೆಯ ಜಾಗತಿಕ ಯುದ್ಧ ಪ್ರಾರಂಭವಾಯಿತು.

## 110.3 ಯುದ್ಧದ ಗತಿ

ಆಸ್ಟ್ರಿಯಾ - ಹಂಗೇರಿಯು ಸರ್ಬಿಯಾದ ಮೇಲೆ ನಡೆಸಿದ ಆಕ್ರಮಣದಿಂದ ಯುದ್ಧ ಪ್ರಾರಂಭವಾಯಿತು. ಜರ್ಮನಿ, ಆಸ್ಟ್ರಿಯ-ಹಂಗೇರಿ, ತುರ್ಕಿ ಮತ್ತು ಬಲ್ಗೇರಿಯ ವಿರುದ್ಧ ವಿಶ್ವದ ಅನೇಕ ರಾಷ್ಟ್ರಗಳು ಹೋರಾಟ ನಡೆಸಿದವು. ಈ ರಾಷ್ಟ್ರಗಳೆಂದರೆ ರಷ್ಯ, ಫ್ರಾನ್ಸ್, ಬೆಲ್ಜಿಯಂ, ಇಂಗ್ಲೆಂಡ್, ಸರ್ಬಿಯ, ಮಾಂಟಿನಿಗ್ರೊ, ಜಪಾನ್, ಇಟಲಿ, ಸ್ಯಾನಿಮಾರಿನೊ, ಪೋರ್ಚುಗಲ್, ರುಮೇನಿಯ, ಗ್ರೀಕ್, ಅಮೆರಿಕ, ಪನಾಮ, ಕ್ಯೂಬ, ನಿಕರಗುವ, ಸಯಂ, ಲೈಬೀರಿಯಾ, ಬ್ರೆಜಿಲ್, ಗ್ವಾಟೆಮಾಲ, ಕೊಸ್ಟರಿಕವ, ಹೈಟಿ, ಹೊಂಡುರಾಸ್ ಮೊದಲಾದ ರಾಷ್ಟ್ರಗಳು ಈ ಯುದ್ಧವು ಅನೇಕ ಕಡೆಗಳಲ್ಲಿ ನಡೆಯಿತು.

### *110.3.1.* ಪಶ್ಚಿಮ ಗಡಿ

ಜರ್ಮನಿಯು ಪಶ್ಚಿಮದ ಗಡಿಯಲ್ಲಿ ಅತೀ ಶೀಘ್ರವಾಗಿ ಕಾರ್ಯಾಚರಣೆ ನಡೆಸಿ ಹಲವು ವಿಜಯಗಳನ್ನು ಗಳಿಸಿತು. ಜರ್ಮನಿಯು ಫ್ರಾನ್ಸ್‌ನ ಮೇಲೆ ಆಕ್ರಮಣ ನಡೆಸಲು ಬೆಲ್ಜಿಯಂ ಮೂಲಕ ಹಾದು ಹೋಗಲು ಅದರ ಅನುಮತಿಯನ್ನು ಕೇಳಿತು. ಆದರೆ ಬೆಲ್ಜಿಯಂ ನಿರಾಕರಿಸಿದಾಗ ಅದರ ಮ್ಯೂಸ್‌ಕಣಿಯ ಮೂಲಕ ಜರ್ಮನಿಯ ಸೈನ್ಯ ಮುನ್ನುಗ್ಗಿತು. ಬ್ರಿಟನ್‌ಗೆ ಸೇರಿದ್ದ ಒಂದು ಸಣ್ಣ ತುಕಡಿ ಜರ್ಮನಿಯ ಸೈನ್ಯವನ್ನು ತಡೆಯಲು ಪ್ರಯತ್ನಿಸಿತು. ಆದರೆ ಅದು ಯಶಸ್ವಿಯಾಗಲಿಲ್ಲ. ಫ್ರಾನ್ಸಿನ ಉತ್ತರ ಭಾಗದ ಅನೇಕ ನಗರಗಳನ್ನು ತ್ವರಿತಗತಿಯಲ್ಲಿ ಜರ್ಮನಿ ಗೆದ್ದುಕೊಂಡಿತು. ಬಹಳ ಬೇಗನೆ ಪ್ಯಾರಿಸ್‌ನಿಂದ ಕೇವಲ ಹದಿನೈದು ಮೈಲಿ ದೂರದಲ್ಲಿ ಜರ್ಮನಿಯ ಸೈನ್ಯಾ ಬೀಡು ಬಿಟ್ಟಿತು. ತ್ರಿಪಲ್ ಅಂತಾಂತ್ ರಾಷ್ಟ್ರಗಳು ತಲ್ಲಣಗೊಂಡಿದವು. ಈ ಸಮಯದಲ್ಲಿ ಜರ್ಮನಿಯು ಒಂದು ತಪ್ಪನ್ನೆಸಗಿತು. ಅದೇನೆಂದರೆ ತನ್ನ ಇಡೀ ಸೈನ್ಯವನ್ನು ಪ್ಯಾರಿಸ್ ನಗರದ ಮೇಲೆ ಕಳುಹಿಸುವುದರ ಬದಲು ಅದರ ಸೈನ್ಯದ ಒಂದು ಭಾಗವನ್ನು ಪೂರ್ವಪ್ರಷ್ಯಾದಲ್ಲಿ ರಷ್ಯಾದ ವಿರುದ್ಧ ಹೋರಾಡಲು ಕಳುಹಿಸಿಕೊಟ್ಟಿತು. ಮೂಲತಃ ಜರ್ಮನರ ಉದ್ದೇಶವಿದ್ದುದು ಶೀಘ್ರಗತಿಯಲ್ಲಿ ಪ್ಯಾರಿಸ್ ನಗರವನ್ನು ಸುತ್ತುವರಿಯುವುದು. ಆದರೆ ಈ ಬದಲಾವಣೆ ಮಾಡಿದುದರಿಂದ ಪ್ಯಾರಿಸ್ ನಗರದ ಕಡೆ ಮುಂದುವರಿಯಲು ಸಾಧ್ಯವಾಗಲಿಲ್ಲ. ಇದು ಮಿತ್ರರಾಷ್ಟ್ರಗಳಿಗೆ ಒಂದು ಸದಾವಕಾಶವನ್ನು ಒದಗಿಸಿಕೊಟ್ಟಿತು. ಜರ್ಮನರ ವಿರುದ್ಧ ಪ್ರತಿ ಧಾಳಿಯನ್ನು ನಡೆಸಲು ಮಿತ್ರ ರಾಷ್ಟ್ರಗಳು ದಂಡನಾಯಕ ಜೊಫ್ರೆಯ ನಾಯಕತ್ವದಲ್ಲಿ ಪ್ರಾರಂಭಿಸಿದವು. ಸೆಪ್ಟೆಂಬರ್ 5ನೆಯ ತಾರೀಖು ಮಾರ್ನೆ ಎಂಬಲ್ಲಿ ಭೀಕರ ಹೋರಾಟ ಪ್ರಾರಂಭವಾಯಿತು. ಈ ಹೋರಾಟ ಐದು ದಿನಗಳವರೆಗೆ ಮುಂದುವರಿಯಿತು. ಈ ಪ್ರಮುಖ ಕದನದಲ್ಲಿ ಜರ್ಮನರು ಸೋತು ಹಿಂದಕ್ಕೆ ಸರಿಯಬೇಕಾಯಿತು.

ಈ ಯುದ್ಧದ ನಂತರ ಹಲವು ವಾರಗಳ ಕಾಲ ಕಡಲು ಕಾಲುವೆಯ ಸ್ವಾಧೀನಕ್ಕೆ ಹೋರಾಟ ನಡೆಯಿತು. (race for the channel) ಎರಡು ಕಡೆಯ ಸೈನಿಕರು ಇಂಗ್ಲೀಷ್ ಕಡಲ್ಗಾಲುವೆಯ ಅನೇಕ ಬಂದರುಗಳನ್ನು ತಮ್ಮ ವಶಕ್ಕೆ ತೆಗೆದು ಕೊಳ್ಳವುದಕ್ಕೆ ಪೈಪೋಟಿ ನಡೆಸಿದವು. ಕಂದಕಗಳನ್ನು ತೋಡಿ ಹೋರಾಟ ಪ್ರಾರಂಭಿಸಿದರು. ಸುಮಾರು ನಾಲ್ಕು ವರ್ಷಗಳ ಕಾಲ ನಡೆಯಿತು. ಕಡಲ್ಗಾಲುವೆಯಿಂದ ಸ್ವಿಟ್ಜರ್ಲೆಂಡಿನವರೆ ಕಂದಕಗಳನ್ನು ತೋಡಿ ಹೋರಾಟ ನಡೆಸಿದರು. ಇತಿಹಾಸದಲ್ಲಿ ಕಂದಕ ಯುದ್ಧ (trench war fare) ಎಂದು ಪ್ರಸಿದ್ಧಯಾಗಿದೆ. ಜರ್ಮನರು ಬ್ರಿಟಿಷ್ ಸೈನ್ಯಕ್ಕೆ ಈ ಕಾಲುವೆಯ ಮೂಲಕ ಬರುತ್ತಿದ್ದ ಸೈನ್ಯ ಮತ್ತು ಇತರ ಸಾಮಾಗ್ರಿಗಳನ್ನು ನಿಲ್ಲಿಸುವುದಾಗಿತ್ತು. ಆದರೆ ಇದರಲ್ಲಿಯೂ ಕೂಡ ಜರ್ಮನಿ ಯಶಸ್ವಿಯಾಗಲಿಲ್ಲ. ಯುದ್ಧ ಮುಗಿಯುವವರೆಗೂ ಕ್ಯಾಲಿಯಸ್ ಮತ್ತು ಚೌಲಾಗ್ನೆ ಬಂದರುಗಳು ಹಾಗೂ ಬೆಲ್ಜಿಯಂನ ಪಶ್ಚಿಮ ಭಾಗ ಮಿತ್ರ ರಾಷ್ಟ್ರಗಳ ಹಿಡಿತದಲ್ಲೇ ಇದ್ದವು. ಇವುಗಳು ಆಯಕಟ್ಟಿನ ಸ್ಥಳಗಳಾಗಿದ್ದು ಮಿತ್ರರಾಷ್ಟ್ರಗಳ ಯಶಸ್ಸಿಗೆ ಸುಗಮ ದಾರಿ ಮಾಡಿಕೊಟ್ಟವು.

### *110.3.2* ಪೂರ್ವದ ಗಡಿ

ಪಶ್ಚಿಮದ ಗಡಿಯಲ್ಲಿ ಜರ್ಮನಿಯು ಶರವೇಗದಲ್ಲಿ ಮುನ್ನುಗುತ್ತಿದ್ದಾಗ ಪೂರ್ವದ ಗಡಿಯಲ್ಲಿ ಪೂರ್ವ ಪ್ರಷ್ಯದ ಮೇಲೆ ಆಕ್ರಮಣ ಮಾಡುವಂತೆ ಮಿತ್ರರಾಷ್ಟ್ರಗಳು ರಷ್ಯಾದ ಮೇಲೆ ಒತ್ತಡ ತಂದವು. ಆದ್ದರಿಂದ ತನ್ನ ಅಪಾರ ಸೈನ್ಯದೊಡನೆ 1914ರ ಆಗಸ್ಟ್ ಹದಿನೇಳರಂದು ದಂಡನಾಯಕ ಸ್ಯಾಮ್ ಸೊನೊನ್ ನಾಯಕತ್ವದಲ್ಲಿ ಆಕ್ರಮಣ ನಡೆಸಿದವು. ಅಧಿಕ ಸಂಖ್ಯೆಯನ್ನು ಕೂಡಿದ್ದ ರಷ್ಯಾದ ಸೈನ್ಯ ಪ್ರಾರಂಭದಲ್ಲಿ ಹಲವು ಸ್ಥಳಗಳಲ್ಲಿ ವಿಜಯ ಸಾಧಿಸಿತು. ಆದರೆ ಅಂತಿಮವಾಗಿ ರಷ್ಯಾದ ಸೈನ್ಯವು ಟ್ಯಾನೆನ್‌ಬರ್ಗ್‌ನಲ್ಲಿ ದಂಡನಾಯಕರುಗಳಾದ ಹಿಂಡನ್‌ಬರ್ಗ್ ಮತ್ತು ಲೂಡೆನ್‌ಡಾರ್ಫ್ ಸೈನ್ಯಗಳಿಂದ ಸುತ್ತುವರಿಯಲ್ಪಟ್ಟಿತು. ಸುಮಾರು ರಷ್ಯಾದ ಮೂರುಲಕ್ಷ ಸೈನಿಕರು ಪ್ರಾಣತೆತ್ತರೆಂದು ಅಂದಾಜು ಮಾಡಲಾಗಿದೆ. ಅದೇ ರೀತಿ ಯುದ್ಧ ಸಾಮಾಗ್ರಿಗಳನ್ನು ಶತ್ರುಗಳು ವಶಪಡಿಸಿಕೊಂಡರು.

ಅದೇ ವೇಳೆಯಲ್ಲಿ ಆಸ್ಟ್ರಿಯಾದ ವಿರುದ್ಧವು ಕೂಡ ರಷ್ಯ ಯುದ್ಧ ಸಾರಿತು. ಆಗಸ್ಟ್ ಹದಿನೆಂಟರಂದು ಗೆಲಿಷಿಯಾದ ಮೇಲೆ ಧಾಳಿ ನಡೆಸಿತು.

ಪ್ರಾರಂಭದ ವಾರಗಳಲ್ಲಿ ಆಸ್ಟ್ರಿಯ ಅನೇಕ ವಿಜಯಗಳನ್ನು ಸಾಧಿಸಿತು. ಗೆಲಿಷಿಯಾದ ರಾಜಧಾನಿ ಲ್ವೆವ್(Lvov)ವನ್ನು ಕೂಡ ರಷ್ಯಾದ ಸೈನಿಕರು ಗೆದ್ದುಕೊಂಡರು. ಆಸ್ಟ್ರಿಯಾದ ಸೈನ್ಯ ಸೋತು ಹಿಮ್ಮೆಟ್ಟಿತು. ಸುಮಾರು 3 ಲಕ್ಷ ಆಸ್ಟ್ರಿಯಾದ ಸೈನಿಕರು ಸೆರೆಹಿಡಿಯಲ್ಪಟ್ಟರು.

ಆಸ್ಟ್ರಿಯ- ಹಂಗೇರಿ ಸಾಮ್ರಾಜ್ಯ ಸಂಪೂರ್ಣವಾಗಿ ನಾಶವಾಗುವ ಅಂಚಿನಲ್ಲಿತ್ತು. ಇಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದ ಸಮಯದಲ್ಲಿ ಜರ್ಮನರು ಅದರ ಸಹಾಯಕ್ಕೆ ಧಾವಿಸಿದರು. 1915ರಲ್ಲಿ ಜರ್ಮನಿಯ ಸೈನಿಕರು ಆಸ್ಟ್ರಿಯಾಕ್ಕೆ ತಲುಪಿದರು. ಆ ವರ್ಷದ ಅಂತ್ಯದ ವೇಳೆಗೆ ಆಸ್ಟ್ರಿಯನ್ನರು ಜರ್ಮನರ ಸಹಾಯದಿಂದ ಕಳೆದುಕೊಂಡಿದ್ದ ಅನೇಕ ಪ್ರದೇಶಗಳನ್ನು ಗೆದ್ದುಕೊಳ್ಳುವುದರಲ್ಲಿ ಯಶಸ್ವಿಯಾದರು. ರಷ್ಯಾದ ಸೈನ್ಯವನ್ನು ಗೆಲಿಷಿಯಾದಿಂದ ಹೊಡೆದೋಡಿಸುವುದರಲ್ಲಿ ಜರ್ಮನರು ಯಶಸ್ವಿಯಾದರು.

ಸಂಕ್ಷಿಪ್ತವಾಗಿ ಹೇಳುವುದಾದರೆ ರಷ್ಯ ಅನೇಕ ಸ್ಥಳಗಳಿಂದ ಹಿಮ್ಮೆಟ್ಟಿತು. ವಾರ್ಸ, ಬ್ರೆಸ್ಟ್‌ಲಿಟೋವ್‌ಸ್ಕ್ ಮತ್ತು ಪೋಲೆಂಡಿನಿಂದ, ಲಿಥುಯೆನಿಯ ಹಾಗೂ ಯುಕ್ರೇನ್ ಹಾಗೂ ಇನ್ನೂ ಅನೇಕ ಸ್ಥಳಗಳಿಂದ ಹಿಮ್ಮೆಟ್ಟಬೇಕಾಯಿತು.

### *110.3.3* ಡಾರ್ಡನೆಲ್ಸ್ ಜಲಸಂಧಿ ಕದನ

ಮಿತ್ರ ರಾಷ್ಟ್ರಗಳ (Allies) ಉದ್ದೇಶ ಜರ್ಮನಿಯು ಅನೇಕ ಕಡೆ ಹೋರಾಟ ನಡೆಸುವಂತೆ ಮಾಡುವ ಯುದ್ಧ ತಂತ್ರ ಹೊಂದಿದ್ದವು. ಇದರ ಉದ್ದೇಶವೇನೆಂದರೆ ರಷ್ಯಾಕ್ಕೆ ಬೇಕಾದ ಸಾಮಾಗ್ರಿಗಳು ತಲುಪುವಂತೆ ಮಾಡುವುದು. ಅದೇ ರೀತಿ ಜರ್ಮನಿ ಅಥವಾ ಆಸ್ಟ್ರಿಯಾ- ಹಂಗೇರಿಗೆ (central powers) ಸಮುದ್ರ ಮಾರ್ಗದಲ್ಲಿ ಭಾರತಕ್ಕೆ ಸಾಮಾಗ್ರಿಗಳನ್ನು ತಡೆಗಟ್ಟುವುದಾಗಿತ್ತು.

1914ರ ನವೆಂಬರ್ ತಿಂಗಳಲ್ಲಿ ತುರ್ಕಿಯು ಜರ್ಮನಿಯ ಪರ ಒಂದನೆಯ ಜಾಗತಿಕ ಯುದ್ಧದಲ್ಲಿ ಧುಮಿಕಿತು. ಇದರ ಪರಿಣಾಮವಾಗಿ ಡಾರ್ಡನೆಲ್ಸ್ ಜಲ ಸಂಧಿಯು ಮಿತ್ರ ರಾಷ್ಟ್ರಗಳ ಹಡಗುಗಳಿಗೆ ಮುಚ್ಚಲ್ಪಟ್ಟಿತು. ಆದ್ದರಿಂದ ರಷ್ಯಾಕ್ಕೆ ಬೇಕಾದ ಯುದ್ಧ ಸಾಮಾಗ್ರಿಗಳನ್ನು ಸುಲಭವಾಗಿ ಮಿತ್ರ ರಾಷ್ಟ್ರಗಳು ಕಳುಹಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಬಳಸು ಮಾರ್ಗದ ಮೂಲಕ ಅಂದರೆ ಆರ್ಚೆಂಜಲ್ ಬಂದರಿನ ಮೂಲಕ ಕಳುಹಿಸಬೇಕಾಗಿತ್ತು, ಆದರೆ ವರ್ಷದಲ್ಲಿ ಹೆಚ್ಚು ಕಾಲ ಹಿಮದಿಂದ ಆವೃತವಾಗಿರುತ್ತಿತ್ತು. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ಡಾರ್ಡನೆಲ್ಸ್‌ನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು. ಆದರೆ ಫ್ರೆಂಚರು ಮಾತ್ರ ಹೋರಾಟ ನಡೆಸಿದರೆ ಕಷ್ಟ ಕೆಲಸವೆಂದು ಭಾವಿಸಿ ರಾಜಕೀಯ ಹಾಗೂ ಮಿಲಿಟರಿ ತಜ್ಞರು ಬ್ರಿಟಿಷ್ ಸೈನ್ಯದ ಶಕ್ತಿಯನ್ನು ಏಜಿಯನ್ ಸಮುದ್ರದ ತೀರ ಪ್ರದೇಶದ ಹತ್ತಿರದವರೆಗೆ ಹೆಚ್ಚಿಸಲು ತೀರ್ಮಾನಿಸಲಾಯಿತು. ಇದರ ಪ್ರಕಾರ ಜರ್ಮನಿಯ ಮತ್ತು ಆಸ್ಟ್ರಿಯ ಕಡೆಯಿಂದ ಏಕಕಾಲಕ್ಕೆ ವಿಯೆನ್ನ ಮತ್ತು ಬರ್ಲಿನ್ ಕಡೆಗೆ ಧಾಳಿಗಳನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ದಂಡನಾಯಕ ವಿನ್‌ಸ್ಟನ್ ಚರ್ಚಿಲ್‌ನಿಗೆ ವಹಿಸಲಾಯಿತು. ಮೊದಲು ಡಾರ್ಡವೆಲ್ಸ್‌ನ ಮೇಲೆ ಆಕ್ರಮಣ ನಡೆಸಲು ತೀರ್ಮಾನಿಸಲಾಯಿತು. ಈ ಕದನವನ್ನು " ಗಲ್ಲಿಪೋಲಿ ಕದನ" ವೆಂದು ಕೂಡ ಕರೆಯಲಾಗಿದೆ.

1915ರ ಮಾರ್ಚ್ ತಿಂಗಳನಲ್ಲಿ ಬ್ರಿಟಿಷ್ ಮತ್ತು ಫ್ರೆಂಚರ ನೌಕೆಗಳು ಡಾರ್ಡನೆಲ್ಸ್ ಜಲಸಂಧಿಯನ್ನು ಪ್ರವೇಶಿಸಲು ಪ್ರಯತ್ನ ನಡೆಸಿದವು. ಆದರೆ ಈ ಕಾರ್ಯಚರಣೆಯನ್ನು ತುರ್ಕಿಯ ಪ್ರಬಲ ಹಾಗೂ ವಿರೋಧದಿಂದಾಗಿ ಮುಂದುವರಿಸಲು ಬ್ರಿಟಿಷ್ ಮತ್ತು ಫ್ರಂಚ್ ಸೈನಿಕರಿಗೆ ಸಾಧ್ಯವಾಗಲಿಲ್ಲ. ಪುನಃ ಕದನವನ್ನು ಮುಂದುವರಿಸಲು ನಿರ್ಧರಿಸಲಾಯಿತು. ಇದರ ಪ್ರಕಾರ ಬ್ರಿಟಿಷ್, ನ್ಯೂಜಿಲೆಂಡ್ ಮತ್ತು ಫ್ರೆಂಚ್ ಸೈನಿಕರು ಒಟ್ಟಿಗೆ ಸೇರಿ ಏಷ್ಯಾ ಮತ್ತು ಯೂರೋಪಿನ ತೀರಗಳ ಕಡೆಯಿಂದ ಡಾರ್ಡನೆಲ್, ಸಂಧಿಯ ಮೇಲೆ ಆಕ್ರಮಣ ನಡೆಸಿದರು. ಈ ಬಾರಿಯೂ ಕೂಡ ಮಿತ್ರರಾಷ್ಟ್ರಗಳ ಸೈನಿಕರ ನಡುವೆ ಸರಿಯಾದ ಹೊಂದಾಣಿಕೆ ಇರಲಿಲ್ಲ. ತುರ್ಕಿಯ ಸೈನಿಕರು ಈ ದಾಳಿಗಳನ್ನು ಸಮರ್ಥವಾಗಿ ಎದುರಿಸಿದರು. ಈ ಬಾರಿಯೂ ಮಿತ್ರರಾಷ್ಟ್ರಗಳು ಯಶಸ್ವಿಯಾಗಲಿಲ್ಲ. ಆದ್ದರಿಂದ ಈ ಯೋಜನೆಯನ್ನು ಕೈ ಬಿಡಬೇಕಾಯಿತು.

### *110.3.4* ಬಾಲ್ಕನ್ ಗಡಿ

1914ರ ಡಿಸೆಂಬರ್‌ನಲ್ಲಿ ಆಸ್ಟ್ರಿಯನ್ನರು ಸರ್ಬಿಯಾದ ರಾಜಧಾನಿ ಬೆಲ್‌ಗ್ರೇಡ್‌ನ್ನು ವಶಪಡಿಸಿಕೊಂಡರು. ಆದರೆ ಈ ದಾಳಿಯನ್ನು ಹಿಮ್ಮೆಟ್ಟಿಸಲಾಯಿತು. 1915ರಲ್ಲಿ ಬಲ್ಗೇರಿಯವು ಕೂಡ ಕೇಂದ್ರ ಬಣಗಳ (ಜರ್ಮನಿ ಮತ್ತು ಆಸ್ಟ್ರಿಯ ಹಂಗೇರಿ ಪರ ಯುದ್ಧದಲ್ಲಿ ಭಾಗವಹಿಸಿತು. ಜರ್ಮನಿಯು ಪುನಃ ಸರ್ಬಿಯವನ್ನು ಗೆದ್ದುಕೊಳ್ಳಲು ತನ್ನ ಸೈನ್ಯವನ್ನು ಕಳುಹಿಸಿತು. ಸುಲಭವಾಗಿ ಸರ್ಬಿಯ ಜರ್ಮನಿಯ ವಶವಾಯಿತು. ಸರ್ಬಿಯಾದ ಸೈನ್ಯ ಪಲಾಯನ ಮಾಡಿ ಗ್ರೀಸ್‌ನಲ್ಲಿ ಆಶ್ರಯ ಪಡೆಯಿತು.

ಆದುದರಿಂದ ಮಿತ್ರರಾಷ್ಟ್ರಗಳು ಬಾಲ್ಕನ್ ಗಡಿಗಳಲ್ಲಿ ತಮ್ಮ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದರು. ಈ ವೇಳೆಗಾಗಲೆ ಗ್ರೀಸ್‌ನ ನಗರ ಸಲೋನಿಕದಲ್ಲಿ ಹಲವು ತುಕಡಿಗಳನ್ನು ನಿಲ್ಲಿಸಿದ್ದರು. ಮ್ಯಾಸಿಡೋನಿಯದಲ್ಲಿ ಒಂದು ಗಡಿಯನ್ನು ಸ್ಥಾಪಿಸಿ ಸೈನ್ಯದ

ಜಮಾವಣೆಯನ್ನು ಕೈಗೊಂಡಿದ್ದರು. ಆದರೆ ಗ್ರೀಕರು ಯುದ್ಧದಲ್ಲಿ ಭಾಗವಹಿಸುವುದರ ಬಗ್ಗೆ ಯೂವುದೇ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ. ಒಂದು ಗುಂಪು ರಾಜ ಕಾನ್‌ಸ್ಟ್ಯಾಟೈನ್ ನಾಯಕತ್ವದಲ್ಲಿ ತಟಸ್ಥ ನೀತಿಯನ್ನು ಅನುಸರಿಸಬೇಕೆಂದು ವಾದಿಸಿತು. ಮಿತ್ರರಾಷ್ಟ್ರಗಳ ಪರವಾಗಿದ್ದ ಮತ್ತೊಂದು ಗುಂಪು ವೆನಿಜೆಲಿಸ್‌ನ (Venijelos) ಮುಂದಾಳತ್ವದಲ್ಲಿ ಯುದ್ಧದಲ್ಲಿ ಭಾಗವಹಿಸಬೇಕೆಂದು ವಾದಿಸಿತು. 1917ರಲ್ಲಿ ಮಿತ್ರರಾಷ್ಟ್ರಗಳು ಕಾನ್‌ಸ್ಟ್ಯಾಂಟೈನ್‌ನ್ನು ಪದಚ್ಯುತಿಗೊಳಿಸಿ ಅವನ ಎರಡನೆಯ ಮಗನನ್ನು ರಾಜನನ್ನಾಗಿ ನೇಮಿಸಿದವು. ಈ ರೀತಿಯಾಗಿ ಗ್ರೀಸ್ ಮಿತ್ರರಾಷ್ಟ್ರಗಳ ಪರವಾಗಿ ಯುದ್ಧದಲ್ಲಿ ಭಾಗವಹಿಸಿತು.

ರುಮೇನಿಯವು ಕೂಡ ರಷ್ಯಾದ ಒತ್ತಡದಿಂದಾಗಿ ಮಿತ್ರರಾಷ್ಟ್ರಗಳ (Allies) ಪರವಾಗಿ ಯುದ್ಧದಲ್ಲಿ ಭಾಗವಹಿಸಿತು. ದುರಾದೃಷ್ಟವಶಾತ್ ರಷ್ಯ ಮತ್ತು ರುಮೇನಿಯಗಳೆರಡೂ ಜರ್ಮನಿ ಮತ್ತು ಆಸ್ಟ್ರಿಯ ಸೈನ್ಯಗಳಿಂದ ಸೋಲನ್ನನುಭವಿಸಿತು. ಆಸ್ಟ್ರಿಯನ್ನರು ಜರ್ಮನ್ನರ ಸಹಾಯ ಪಡೆದು ರುಮೇನಿಯಾದ ಮೇಲೆ ಆಕ್ರಮಣ ನಡೆಸಿದರು. 1917ರ ಜನವರಿಯ ವೇಳೆಗೆ ರುಮೇನಿಯವನ್ನು ಆಸ್ಟ್ರಿಯ ವಶಪಡಿಸಿಕೊಂಡಿತು. ರಾಷ್ಯಾವು ಕೂಡ ಸೋಲನ್ನು ಅನುಭವಿಸಿತು. ರಷ್ಯಾವು ಯುದ್ಧವನ್ನು ನಿಲ್ಲಿಸಿ ಜರ್ಮನಿಯೊಡನೆ ಬ್ರೆಸ್ಟ್ ಲಿಟೋವಸ್ಕ್ ಒಪ್ಪಂದವನ್ನು 1918ರ ಮಾರ್ಚ್ ತಿಂಗಳಲ್ಲಿ ಮಾಡಿಕೊಂಡಿತು. ರಷ್ಯಾವು ಈ ಒಪ್ಪಂದದಿಂದಾಗಿ ಅನೇಕ ಪ್ರದೇಶಗಳನ್ನು ಜರ್ಮನಿ ಮತ್ತು ಅದರ ಮಿತ್ರರಾಷ್ಟ್ರಗಳಿಗೆ ಯುದ್ಧ ನಷ್ಟ ಪರಿಹಾರವನ್ನು ಕೊಡಬೇಕಾಯಿತು. ಈ ರೀತಿಯಾಗಿ ಬೋಲ್ಶೆವಿಕ್‌ರು ಅಧಿಕಾರಕ್ಕೆ ಬಂದ ಮೇಲೆ ಯುದ್ಧದಿಂದ ನಿರ್ಗಮಿಸಿತು.

1917ರಲ್ಲೆ ಗ್ರೀಸ್ ಮಿತ್ರ ರಾಷ್ಟ್ರಗಳ ಪರ ಸೇರಿಕೊಂಡಿದ್ದರೂ , 1918ರ ಬೇಸಿಗೆಯವರೆಗೂ ಕ್ರಿಯಾತ್ಮಕವಾಗಿ ಭಾಗವಹಿಸಲಿಲ್ಲ. ಅಮೇರಿಕಾದ ಸೈನ್ಯ ಫ್ರಾನ್ಸ್‌ಗೆ ಬಂದು ಸೇರಲು ಪ್ರಾರಂಭಿಸಿದ ಮೇಲೆ ಮಿತ್ರರಾಷ್ಟ್ರಗಳು ಗ್ರೀಸ್‌ನ ಸಲೊನಿಕ ನೆಲೆಗೆ ಹೆಚ್ಚಿನ ಸೈನ್ಯವನ್ನು ಕಳುಹಿಸಿಕೊಡುವ ಮೂಲಕ ಬಲಪಡಿಸಿದವು. ಮಿತ್ರ ರಾಷ್ಟ್ರಗಳ ಪಡೆಯ ನಾಯಕನಾಗಿದ್ದ ಫ್ರೆಂಚ್ ದಂಡ ನಾಯಕ ಸಲೊನಿಕ ಗಡಿಯ ಕಡೆಯಿಂದ ಶತ್ರು ಸೈನ್ಯದ ನೆಲೆಗಳ ಮೇಲೆ ದಾಳಿ ಮಾಡಿ ಸೋಲಿಸಿದನು. ಫ್ರೆಂಚರು, ಬ್ರಿಟಿಷ್, ಸರ್ಬರು ಮತ್ತು ಗ್ರೀಕರು 1918ರ ಸೆಪ್ಟೆಂಬರ್ ಹದಿನೆಂಟರಂದು ಏಡ್ರಿಯಾಟಿಕ್‌ನಿಂದ ಬಲ್ಗೇರಿಯ ಗಡಿಯವರೆಗೂ ದಾಳಿ ಪ್ರಾರಂಭಿಸಿದರು. ಸೆಪ್ಟೆಂಬರ್ 30ರಂದು ಅವರು ಬಲ್ಗೇರಿಯನ್ನರು ಸೋತು ಶರಣಾದರು. ಮಿತ್ರ ರಾಷ್ಟ್ರಗಳ ಸೈನಿಕರು ನವೆಂಬರ್ ತಿಂಗಳನಲ್ಲಿ ಡ್ಯಾನೂಬ್ ನದಿಯನ್ನು ದಾಟಿದವು. ಫ್ರಾನ್ಸ್‌ನ ಸೈನ್ಯ ಮತ್ತು ಇತರ ಮಿತ್ರರಾಷ್ಟ್ರಗಳ ಸೈನ್ಯ ವಿಯೆನ್ನಾ ಕಡೆ ಧಾವಿಸಿದವು.

### *110.3.5 ಪೌರ್ವಾತ್ಯ ಮತ್ತು ವಸಾಹತುಗಳಲ್ಲಿ ಕದನಗಳು*

1916ರಲ್ಲಿ ಏಪ್ರಿಲ್ ತಿಂಗಳಲ್ಲಿ ತುರ್ಕಿಯು ಬ್ರಿಟನ್ನಿನ ಪ್ರತಿಷ್ಠೆಗೆ ಬಲವಾದ ಪೆಟ್ಟು ನೀಡಿತು. ತುರ್ಕಿಯ ಸೈನ್ಯ ಭಾರತದಿಂದ ಬಾಸ್ರಾಕ್ಕೆ ಬಂದಿಳಿದಿದ್ದ ಜನರಲ್‌ಟೌನ್‌ಸೆಂಡನನ್ನು ಸೆರೆಹಿಡಿದನು. ತುರ್ಕಿಯ ಸೈನ್ಯ ಟೈಗ್ರಿಸ್ ಮತ್ತು ಯೂಫ್ರಟಿಸ್ ನದಿಗಳ ಪ್ರದೇಶಗಳವರೆಗೆ ದಾಳಿ ಮಾಡಿದವು. ಆದರೆ ತುರ್ಕಿಯ ಸೈನ್ಯ ರಷ್ಯಾದ ಅರ್ಮೇನಿಯವನ್ನು ಗೆದ್ದುಕೊಳ್ಳಲು ಸಾಧ್ಯವಾಗಲಿಲ್ಲ. 1918ರ ಸೆಪ್ಟೆಂಬರ ತಿಂಗಳಲ್ಲಿ ಗ್ರೇಟ್ ಬ್ರಿಟನ್ ಪ್ಯಾಲೆಸ್ಟೀನ್‌ನಲ್ಲಿ ನಡೆಸಿದ ಪ್ರತಿ ದಾಳಿಯಿಂದಾಗಿ ತುರ್ಕಿಯರು ಸೋಲನ್ನನುಭವಿಸಿದರು. ಅವರು 1918ರ ಸೆಪ್ಟೆಂಬರ್ 30ರಂದು ಒಂದು ಒಪ್ಪಂದವನ್ನು ಮಾಡಿಕೊಂಡರು. ಆದ್ದರಿಂದ ತುರ್ಕಿಯು ಯುದ್ಧದಿಂದ ಹಿಂದಕ್ಕೆ ಸರಿದಂತಾಯಿತು.

### *110.3.6 ಇಟಲಿಯ ಗಡಿ*

ಲಂಡನ್‌ನಲ್ಲಿ ಇಟಲಿಯು 1915ರಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾದೊಡನೆ ಗುಪ್ತವಾಗಿ ಒಪ್ಪಂದವನ್ನು ಮಾಡಿಕೊಂಡಿತು. ಕ್ರಮವಾಗಿ ಆಸ್ಟ್ರಿಯ ಮತ್ತು ತುರ್ಕಿಗೆ ಸೇರಿದ್ದ ಟ್ರೆಂಟ್ (Trent) ಮತ್ತು ಟ್ರಿಯೆಸ್ಟ್ (Tnicse)ಗಳನ್ನು ಇಟಲಿಗೆ ನೀಡಲಾಗುವುದೆಂದು ಒಪ್ಪಿಕೊಳ್ಳಲಾಯಿತು. 1915ರ ಮೇ ತಿಂಗಳನಲ್ಲಿ ಇಟಲಿಯನ್ನರು ಮಿತ್ರ ರಾಷ್ಟ್ರಗಳ ಪರವಾಗಿ ಯುದ್ಧದಲ್ಲಿ ಭಾಗವಹಿದರು. ಕೇಂದ್ರ ಬಣಗಳ ವಿರುದ್ಧ ಇಟಲಿ ಯುದ್ಧ ಸಾರಿತು. ಆಸ್ಟ್ರೋ-ಇಟಲಿಯನ್ ಗಡಿಯಲ್ಲಿ ಹೊಸದೊಂದು ಕದನದ ಗಡಿ ಪ್ರಾರಂಭವಾಯಿತು. ಆದರೆ ಈ ಗಡಿಯು ಪರ್ವತಗಳಿಂದ ಕೂಡಿದ್ದರಿಂದ ಯುದ್ಧವನ್ನು ಮಾಡುವುದು ದುಸ್ತರವಾಗಿತ್ತು. ಆದ್ದರಿಂದ ಇಸೊನ್‌ಜೊ(Isonzo) ನದಿಯ ಹತ್ತಿರ ಸುಮಾರು 60 ಮೈಲಿಗಳವರೆಗೆ ಮಾತ್ರ ಹೋರಾಟ ಸೀಮಿತವಾಗಿತ್ತು. ಸುಮಾರು ಎರಡು ವರ್ಷಗಳವರೆಗೆ ಭೀಕರ ಹೋರಾಟ ನಡೆದು ಸಾವಿರಾರು ಆಸ್ಟ್ರಿಯಾದ ಸೈನಿಕರು ಮರಣವನ್ನಪ್ಪಿದರು. ಆದರೆ 1917ರ ವೇಳೆಗೆ ರಷ್ಯಾವು ಸೋಲನ್ನನುಭವಿಸಿದಾಗ ಇಟಲಿಗೆ ಯುದ್ಧವನ್ನು ಮುಂದುವರಿಸುವುದು ಕಷ್ಟವಾಯಿತು. ಆಸ್ಟ್ರಿಯಾದ ಸೈನಿಕರು ಮತ್ತು ಜರ್ಮನಿಯ ಸೈನಿಕರು ಇಟಲಿಯ ಸೈನಿಕರನ್ನು ಅನೇಕ ಸ್ಥಳಗಳಲ್ಲಿ ಸೋಲಿಸಿದರು. ಇಟಲಿಯು ಸಂಪೂರ್ಣವಾಗಿ ನಾಶವಾಗುವ ಅಂಚಿನಲ್ಲಿತ್ತು. ತಕ್ಷಣವೇ ಫ್ರೆಂಚ್ ಮತ್ತು ಬ್ರಿಟಿಷ್ ಸೈನಿಕರು ಇಟಲಿಯ ಸಹಾಯಕ್ಕೆ ದಾವಿಸಿದರು. ಆದ್ದರಿಂದ ಇಟಲಿಯನ್ನರು ರಕ್ಷಿಸಲ್ಪಟ್ಟರು ಹಾಗೂ ಜರ್ಮನಿ ಮತ್ತು ಆಸ್ಟ್ರಿಯ ಸೈನಿಕರು ಮುನ್ನುಗ್ಗುವುದನ್ನು ತಡೆಗಟ್ಟಲಾಯಿತು.

### 110.3.7 *ಜಲಾಂತರ್ಗಾಮಿ ಯುದ್ಧ ಮತ್ತು ಮೊದಲನೆಯ ಜಾಗತಿಕ ಯುದ್ಧಕ್ಕೆ ಅಮೆರಿಕಾದ ಪ್ರವೇಶ*

ಅಮೆರಿಕ ಯುದ್ಧದಲ್ಲಿ ಭಾಗವಹಿಸಬೇಕಾದರೆ ಪ್ರಮುಖ ಕಾರಣವೇನೆಂದರೆ ಜರ್ಮನಿಯ ಜಲಾಂತರ್ಗಾಮಿಯ ಯುದ್ಧ ಗ್ರೇಟ್ ಬ್ರಿಟನ್ ಜರ್ಮನಿಗೆ ಬರತಕ್ಕ ಹಡಗುಗಳನ್ನು ತಡೆಗಟ್ಟಲು ಕ್ರಮ ಕೈಗೊಂಡಿತ್ತು. ಇದರಿಂದ ಕೋಪಗೊಂಡ ಜರ್ಮನಿ ಇಂಗ್ಲೆಂಡ್ ವಿರುದ್ಧ ತೀವ್ರತರವಾದ ಸೆಣಸಾಟ ಪ್ರಾರಂಭಿಸಲು ಕೈಸರ್ ವಿಲಿಯಂ ನಿರ್ಧರಿಸಿದನು. ಅವನು 1915ರ ಫೆಬ್ರವರಿ ತಿಂಗಳಲ್ಲಿ ಜಲಾಂತರ್ಗಾಮಿ ಯುದ್ಧವನ್ನು ಘೋಷಿಸಿದನು. 1915ರ ಫೆಬವರಿ ಏಳನೆ ತಾರೀಖಿನಂದು ಅಮೇರಿಕಾದ 'ಲೂಸಿಟಾನಿಯ' ಹಡಗ ಜರ್ಮನ್ ಜಲಾಂತರ್ಗಾಮಿಗಳು ಮುಳುಗಿಸಿದವು. ಸ್ತ್ರೀಯರು, ಮಕ್ಕಳನ್ನೊಳಗೊಂಡಂತೆ ಒಂದು ಸಾವಿರಕ್ಕೂ ಹೆಚ್ಚಿ ಜನ ಪ್ರಯಾಣಿಕರು ಸಾವನ್ನಪ್ಪಿದರು. ಇವರಲ್ಲಿ ಒಂದು ನೂರು ಮಂದಿ ಅಮೆರಿಕನ್ನರಿದ್ದರು. 1916ರ ಮಾರ್ಚ್ ತಿಂಗಳಲ್ಲಿ ಫ್ರಾನ್ಸಿನ ನೌಕೆ 'ಸಸ್ಸೆಕ್ಸ್' ಎಂಬ ಹಡಗನ್ನು ಜರ್ಮನ್ನರು ಮುಳುಗಿಸಿದರು. ನೂರಾರು ಮಂದಿ ಅಮೆರಿಕನ್ನರು ಸಾವನ್ನಪ್ಪಿದರು. ಈ ದುರಂತಗಳ ನಂತರ ಜರ್ಮನಿಗೆ ಅಮೆರಿಕಾ ಜಲಾಂತರ್ಗಾಮಿ ಯುದ್ಧವನ್ನು ನಿಲ್ಲಿಸುವಂತೆ ಎಚ್ಚರಿಕೆಯನ್ನು ನೀಡಿತು. ಆದರೆ ಜರ್ಮನಿಯು ಈ ಎಚ್ಚರಿಕೆಯನ್ನು ಕಡೆಗಣಿಸಿ ಯುದ್ಧವನ್ನು ಮುಂದುವರಿಸುವುದಾಗಿ ತಿಳಿಸಿತು. ಇಂತಹ ಜರ್ಮನಿಯ ನಿಲುವಿನಿಂದ ಅಮೆರಿಕಾಕ್ಕೆ ಅಪಮಾನವಾದಂತಾಯಿತು. 1917ರ ಏಪ್ರಿಲ್ ಆರರಂದು ಅಮೆರಿಕಾವು ಜರ್ಮನಿಯೊಡನೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಹಾಕಿತು. ಜರ್ಮನಿಯ ವಿರುದ್ಧ ಯುದ್ಧವನ್ನು ಘೋಷಿಸಿತು. ಅಮೆರಿಕಾವು ಒಂದನೆ ಮಹಾಯುದ್ಧದಲ್ಲಿ ಭಾಗವಹಿಸಲು ಪ್ರಾರಂಭಿಸಿದುದರಿಂದ ಮಿತ್ರರಾಷ್ಟ್ರಗಳಿಗೆ ಮನೋಸ್ಥೈರ್ಯ ಹೆಚ್ಚಾಯಿತು. ಮಿತ್ರ ರಾಷ್ಟ್ರಗಳಿಗೆ ಧನ ಸಹಾಯವನ್ನು ಮಾಡುವುದರ ಜೊತೆಗೆ ಎರಡು ಮಿಲಿಯನ್ ಸೈನಿಕರನ್ನು ಕೂಡ ಯುದ್ಧದಲ್ಲಿ ಭಾಗವಹಿಸಲು ಕಳುಹಿಸಿಕೊಟ್ಟಿತು.

### 110.3.8 *ವುಡ್ರೊ ವಿಲ್ಸನನು ಮಿತ್ರ ರಾಷ್ಟ್ರಗಳ ಮನೋಬಲವನ್ನು ಹೆಚ್ಚಿಸುವ ದೃಷ್ಟಿಯಿಂದ 1918 ಜನವರಿ ತಿಂಗಳಿನಲ್ಲಿ ಹದಿನಾಲ್ಕು ಅಂಶಗಳನ್ನು ಪ್ರಕಟಿಸಿದನು.*

1 ಗುಪ್ತ ಒಪ್ಪಂದಗಳನ್ನು ಕೊನೆಗೊಳಿಸಿ ಬಹಿರಂಗವಾಗಿ ಒಪ್ಪಂದಗಳನ್ನು ಮಾಡಿಕೊಳ್ಳಬೇಕು.

2 ಯುದ್ಧ ಅಥವಾ ಶಾಂತಿ ಕಾಲದಲ್ಲಿ ನೌಕಾಯಾನಕ್ಕೆ ಪೂರ್ಣ ಸ್ವಾತಂತ್ರ್ಯ.

3 ಅಂತರ ರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಎಲ್ಲ ಆರ್ಥಿಕ ಪ್ರತಿ ಬಂಧಕಗಳನ್ನು ರದ್ದು ಪಡಿಸಬೇಕು.

4 ಎಲ್ಲಾ ರಾಷ್ಟ್ರಗಳು ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸಬೇಕು.

5 ವಸಾಹತುಗಳ ಸಮಸ್ಯೆಯನ್ನು ಆಯಾಯ ವಸಾಹತುಗಳ ಜನರ ಆಸಕ್ತಿಯನ್ನಾಧರಿಸಿ ಬಗೆಹರಿಸಬೇಕು.

6 ರಷ್ಯಾದ ಆಕ್ರಮಿತ ಪ್ರದೇಶವನ್ನು ತೆರವು ಮಾಡಬೇಕು.

7 ಬೆಲ್ಜಿಯಂನ್ನು ಮುಕ್ತಗೊಳಿಸಬೇಕು.

8 ಫ್ರಾನ್ಸಿನ ಪ್ರದೇಶಗಳನ್ನು ಜರ್ಮನಿ ಹಿಂದಿರುಗಿಸಬೇಕು. ಅಲ್ಸೇಸ್ ಮತ್ತು ಲೋರೇನ್ ಪ್ರಾಂತ್ಯಗಳನ್ನು ಫ್ರಾನ್ಸಿಗೆ ಹಿಂತಿರುಗಿಸಬೇಕು.

9 ಇಟಲಿಯ ಗಡಿಗಳನ್ನು ಪುನರ್‌ರಚಿಸಬೇಕು.

10 ಆಸ್ಟ್ರಿಯ - ಹಂಗೇರಿ ಸಾಮ್ರಾಜ್ಯದಲ್ಲಿನ ವಿವಿಧ ಜನಾಂಗಗಳಿಗೆ ಸ್ವಾತಂತ್ರ ರಾಷ್ಟ್ರ ರಚಿಸುವ ಆತ್ಮ ನಿರ್ಣಯದ ಅಧಿಕಾರದ ಹಕ್ಕನ್ನು ನೀಡಬೇಕು.

11 ರುಮೇನಿಯ, ಮಾಂಟಿನಿಗ್ರೊ ಮತ್ತು ಸರ್ಬಿಯಾಗಳನ್ನು ತೆರವು ಮಾಡಬೇಕು. ಸರ್ಬಿಯಾಕ್ಕೆ ಸಮುದ್ರ ಸಂಪರ್ಕವನ್ನು ಕಲ್ಪಿಸಬೇಕು. ಬಾಲ್ಕನ್ ದೇಶಗಳ ಗಡಿಗಳನ್ನು ಗುರುತಿಸುವಾಗ ಅಲ್ಲಿನ ಜನರ ರಾಷ್ಟ್ರೀಯತೆಗೆ ಪ್ರಾಶಸ್ತ್ಯ ನೀಡಬೇಕು.

12 ಟರ್ಕಿಗೆ ಸೇರಿದ ಭಾಗಗಳಿಗೆ ಸ್ವಾಯತ್ತತೆಯನ್ನು ನೀಡುವುದು ಮತ್ತು ಕಪ್ಪು ಸಮುದ್ರಕ್ಕೆ ಸಂಪರ್ಕ ಕಲ್ಪಿಸುವ ಡಾರ್ಡನೆಲ್ಸ್ ಜಲಸಂಧಿಯನ್ನು ಮುಕ್ತದ್ವಾರವೆಂದು ಪರಿಗಣಿಸಿ ಎಲ್ಲ ರಾಷ್ಟ್ರಗಳ ನೌಕಾಯಾನಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

13 ಸ್ವತಂತ್ರ ಪೋಲೆಂಡಿನ ಸ್ಥಾಪನೆ ಹಾಗೂ ಅದಕ್ಕೆ ಸಮುದ್ರ ತಲುಪಲು ಒಂದು ಮಾರ್ಗವನ್ನು ಹುಡುಕುವುದು.



14 ಇನ್ನು ಮುಂದೆ ಯಾವುದೇ ರೀತಿಯಾದ ಯುದ್ಧಗಳು ಮತ್ತು ಘರ್ಷಣೆಗಳು ನಡೆಯದಂತೆ ತಡೆಯಲು ರಾಷ್ಟ್ರ ಸಂಘವನ್ನು ರಚಿಸುವುದು

### 110.3.9 ಯುದ್ಧದ ಅಂತಿಮ ಘಟ್ಟಗಳು

ಅಮೇರಿಕ ಮೊದಲ ಜಾಗತಿಕ ಯುದ್ಧದಲ್ಲಿ ಭಾಗವಹಿಸುವುದರೊಂದಿಗೆ ಯುದ್ಧ ಅಂತಿಮ ಘಟ್ಟಕ್ಕೆ ತಲುಪಿತು ಎಂದು ಹೇಳಬಹುದು. ಫ್ರಾನ್ಸಿನ ಗಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕರನ್ನು ಹೊಂದಿದ್ದ ಜರ್ಮನಿಯು ಅಂತಿಮವಾಗಿ 1918ರಲ್ಲಿ ಮತ್ತೊಂದು ಆಕ್ರಮಣವನ್ನು ಫ್ರಾನ್ಸ್‌ನ ಸೈನಿಕರ ಮೇಲೆ ನಡೆಸಿತು. ಈ ಆಕ್ರಮಣವನ್ನು ಎದುರಿಸಲು ಎಲ್ಲ ಮಿತ್ರರಾಷ್ಟ್ರಗಳ ಸೈನ್ಯವನ್ನು ಫ್ರೆಂಚ್ ದಂಡನಾಯಕ ಫೋಚ್(Foch) ಹಿಡಿತಕ್ಕೊಪ್ಪಿಸಲಾಯಿತು. ಇಂತಹ ಒಗ್ಗಟ್ಟು ಮಿತ್ರ ರಾಷ್ಟ್ರಗಳ ಹಾದಿ ಸುಗಮವಾಗಲು ಕಾರಣವಾಯಿತು. ಜರ್ಮನರು ದಾಳಿಯನ್ನು ಪ್ರಾರಂಭಿಸಿದಾಗ ಜನರಲ್ ಫೋಚ್ ತನ್ನ ಪ್ರತಿದಾಳಿಯನ್ನು 1918ರ ಜುಲೈ ಹದಿನೆಂಟರಂದು ಪ್ರಾರಂಭಿಸಿದನು. ಮೂರು ವಾರಗಳ ಕಾಲ ಎರಡನೆಯ ಮಾರ್ನೆ ಕದನ ನಡೆಯಿತು. ಜರ್ಮನರು ಸೋತು ಹಿಂಡನ್‌ಬರ್ಗ್ (Hindenburg line) ನ ಕಡೆಗೆ ಹಿಮ್ಮೆಟ್ಟಿತು. ಫೋಚ್ ತಡ ಮಾಡದೆ ಜರ್ಮನರನ್ನು ಅಟ್ಟಿಸಿಕೊಂಡು ಹೋದನು. ಅಮೇರಿಕಾದ ಸೈನ್ಯವನ್ನೊಳಗೊಂಡಂತೆ ಎಲ್ಲ ಮಿತ್ರ ರಾಷ್ಟ್ರಗಳ ಸೈನ್ಯ ಜರ್ಮನಿಯ ವಿರುದ್ಧ ಹೋರಾಟ ನಡೆಸಿದವು. ಜರ್ಮನ್ ಸೈನ್ಯ ಈ ದಾಳಿಯನ್ನು ಎದುರಿಸಲಾಗದೆ ಹಿಮ್ಮೆಟ್ಟಬೇಕಾಯಿತು. 1918ರ ಅಕ್ಟೋಬರ್ ತಿಂಗಳ ವೇಳೆಗೆ ಜರ್ಮನರನ್ನು ಸಂಪೂರ್ಣವಾಗಿ ಫ್ರಾನ್ಸ್‌ನಿಂದ ಹೊಡೆದೋಡಿಸಲಾಯಿತು. ಮಿತ್ರ ರಾಷ್ಟ್ರಗಳ ಸೈನ್ಯ ಜರ್ಮನಿಯೊಳಗೆ ನುಗ್ಗಿತು. ಜರ್ಮನಿಯು ಯುದ್ಧವನ್ನು ಮುಂದುವರಿಸಲು ಶಕ್ತವಾಗಿರಲಿಲ್ಲ. ಅಂತಿಮವಾಗಿ ಜರ್ಮನ್ ಛಾನ್ಸಲರ್ ಅಧ್ಯಕ್ಷ ವುಡ್ರೊವಿಲ್ಸನ್‌ಗೆ ಯುದ್ಧವನ್ನು ನಿಲ್ಲಿಸಬೇಕೆಂದು ಒಂದು ಪತ್ರದ ಮೂಲಕ ಮನವಿ ಮಾಡಿಕೊಂಡನು. ಇದೆ ವೇಳೆಯಲ್ಲಿ ಜರ್ಮನಿಯ ಒಳಗಡೆಯು ಕೆಲವು ಮಹತ್ತರ ಘಟನೆಗಳು ಉಂಟಾದವು. ಜರ್ಮನ್ ಛಾನ್ಸಲರ್ ಚಕ್ರವರ್ತಿಯ ಆಳ್ವಿಕೆಯನ್ನು ಮುಂದುವರಿಸುವ ನೆಪದಿಂದ ಹಲವು ಸುಧಾರಣೆಗಳು ತಡವಾಗಿ ಬಂದ ಸುಧಾರಣೆಗಳಾಗಿದ್ದವು. ಜರ್ಮನಿಯಲ್ಲಿ ಕ್ರಾಂತಿ ಪ್ರಾರಂಭವಾಯಿತು.ಕೈಸರ್ ಸಿಂಹಾಸನವನ್ನು ತ್ಯಜಿಸಿ ಹಾಲೆಂಡ್‌ಗೆ ಪಲಾಯನ ಮಾಡಿದನು. ಜರ್ಮನಿಯಲ್ಲಿ ಒಂದು ಗಣ ರಾಜ್ಯವನ್ನು ಸ್ಥಾಪಿಸಲಾಯಿತು.

ಜರ್ಮನಿಯ ಮಿತ್ರರಾಷ್ಟ್ರಗಳು ಕೂಡ ಎಲ್ಲಾ ಕಡೆಯು ಪರಾಭವ ಹೊಂದಿದವು. ಬಲ್ಗೇರಿಯ ಮಿತ್ರರಾಷ್ಟ್ರಗಳಿಗೆ ಸೆಪ್ಟೆಂಬರ್ 30ರಂದು ಶರಣಾಯಿತು. ಒಂದು ತಿಂಗಳನಂತರ ಟರ್ಕಿಯ ಕೂಡ ಶರಣಾಯಿತು. ಆಸ್ಟ್ರಿಯ-ಹಂಗೆರಿಯ ಕೂಡ ಸೋಲಿಸಲ್ಪಟ್ಟಿತು. ಅದರ ಚಕ್ರವರ್ತಿ ಒಂದನೆಯ ಚಾರ್ಲ್ಸ್ ಸ್ವಿಟ್ಜರ್ಲೆಂಡಿಗೆ ಓಡಿಹೋದನು.

1918ರ ನವೆಂಬರ್ ಹನ್ನೊಂದರಂದು ಇಬ್ಬರು ಜರ್ಮನ್ ಪ್ರತಿನಿಧಿಗಳು ಫ್ರೆಂಚ್ ಜನರಲ್ ಫೋಚ್‌ನನ್ನು ಭೇಟಿಮಾಡಿ ಯುದ್ಧ ನಿಲ್ಲಿಸುವ ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಈ ರೀತಿಯಾಗಿ ಒಂದನೆ ಮಹಾಯುದ್ಧವು ಅಂತ್ಯಗೊಂಡಿತು. ಎಲ್ಲಾ ಕಡೆಯೂ ಜನರು ಸಂತೋಷದಿಂದ ಕುಣಿದಾಡಿದರು. ಪ್ರಪಂಚದಲ್ಲಿ ಮತ್ತೊಮ್ಮೆ ಶಾಂತಿ ನೆಲೆಸಿತು.

## 110.4 ಪರಿಣಾಮಗಳು

ಒಂದನೆಯ ಜಾಗತಿಕ ಯುದ್ಧದಲ್ಲಿ ಮುವತ್ತು ರಾಷ್ಟ್ರಗಳು ಭಾಗವಹಿಸಿದ್ದವು. ಇಂತಹ ದುಂದು ವೆಚ್ಚದಿಂದ ಭೀಕರ ಹಾಗೂ ವಿನಾಶಕಾರಕ ಯುದ್ಧ ಹಿಂದೆಂದೂ ನಡೆದಿರಲಿಲ್ಲ. ಅಪಾರ ಸಾವು -ನೋವಿಗೆ ಕಾರಣವಾಯಿತು. ಅಂತರ ರಾಷ್ಟ್ರೀಯ ಸಂಬಂಧಗಳ ಮೇಲೂ ಹೆಚ್ಚು ಪ್ರಭಾವ ಬೀರಿತು.

### 110.4.1 ಜೀವಹಾನಿ

ಈ ಯುದ್ಧದಿಂದಾಗಿ ಲಕ್ಷಾಂತರ ಮಂದಿ ಸಾವನ್ನಪ್ಪಿದರು. ಲಕ್ಷಾಂತರ ಮಂದಿ ಶಾಶ್ವತವಾಗಿ ಅಂಗವಿಕಲರಾದರು. ರಷ್ಯಾಕ್ಕೆ ಸೇರಿದ್ದ ಎರಡು ಮಿಲಿಯನ್ ಜನ ಸಾವನ್ನಪಿದರು. ಜರ್ಮನಿಯಲ್ಲಿಯು ಕೂಡ ಎರಡು ಮಿಲಿಯನ್ ಜನ ಸಾವನ್ನಪ್ಪಿದರು. ಫ್ರಾನ್ಸ್‌ಗೆ ಸೇರಿದ $1\,{}^{1}/_{4}$ ಮಿಲಿಯನ್ ಸಾವನ್ನಪ್ಪಿದರು. ಅಷ್ಟೇ ಸಂಖ್ಯೆಯ ಜನ ಆಸ್ಟ್ರಿಯಾ-ಹಂಗೇರಿಯಾದಲ್ಲೂ ಮರಣ ಹೊಂದಿದರು. ಬ್ರಿಟಿನ್ ಒಂದು ಮಿಲಿಯನ್ ಸೈನಿಕರನ್ನು ಕಳೆದುಕೊಂಡಿತು. ಈ ಯುದ್ಧದಿಂದ ಇಡಿ ವಿಶ್ವದಲ್ಲಿ ಮರಣ ಹೊಂದಿದವರು ಹತ್ತು ಮಿಲಿಯನ್. ಇವರೆಲ್ಲರು ನಲವತ್ತು ವರ್ಷಗಳಿಗೂ ಕಡಿಮೆ ವಯಸ್ಸಿನವರು.

### 110.4.2 ಅರ್ಥವ್ಯವಸ್ಥೆಯ ಸ್ಥಾನಪಲ್ಲಟ

ಯುದ್ಧಕ್ಕೆ ಉಂಟಾದ ವೆಚ್ಚ ಎಲ್ಲಾ ರಾಷ್ಟ್ರಗಳನ್ನೊಳಗೊಂಡಂತೆ, 186 ಬಿಲಿಯನ್ ಡಾಲರ್‌ಗಳು. ಆಸ್ತಿಯ ನಷ್ಟ, ಹಡಗುಗಳ ನಾಶ, ಮತ್ತು ಸಾಮಾಗ್ರಿಗಳ ನಾಶ ಲೆಕ್ಕವಿಲ್ಲದಷ್ಟು ಯುದ್ಧವು ಆರ್ಥಿಕವಾಗಿ ಸುಭದ್ರತೆಯಿಂದ ಕೂಡಿದ್ದ ವ್ಯವಸ್ಥೆಯನ್ನು ಹಾಗೂ ಸಾಮಾಜಿಕ ಜೀವನನ್ನು ನಾಶಗೊಳಿಸಿತು. ಈ ಯೊದ್ಧವು ಪ್ರಪಂಚದ ಹೆಚ್ಚು ಜನರ ಜೀವನಾಂಶಕ್ಕೆ ತೊಂದರೆ ಉಂಟುಮಾಡಿತು. ವಿಶ್ವ ವ್ಯಾಪಾರದ ಮೇಲೆ ಮಹತ್ತರ ಪರಿಣಾಮ ಬೀರಿ ಆರ್ಥಿಕ ಜೀವನದಲ್ಲಿ ಅಲ್ಲೋಲ್ಲ ಕಲ್ಲೋಲ ಉಂಟಾಯಿತು. ಜನರ ಜೀವನದ

ಆರ್ಥಿಕ ಅಸ್ಥಿರತೆ ಉಂಟಾಯಿತು. ದೈಹಿಕವಾಗಿ ಸಂಪೂರ್ಣವಾಗಿ ನಿಶಕ್ತರಾಗಿದ್ದರು. ಮಾನಸಿಕ ಆಯೋಚನೆಯ ಶಕ್ತಿಯನ್ನು ಕಳೆದುಕೊಂಡಿದ್ದರು.

### 110.4.3. ಹಣದುಬ್ಬರ, ಸಾಲ ಹಾಗೂ ಯುದ್ಧ ಪರಿಹಾರದ ಸಮಸ್ಯೆಗಳು

ಯುದ್ಧೋತ್ತರ ಕಾಲದ ಪುನರ್ ನಿರ್ಮಾಣದ ಕೆಲಸ ದೊಡ್ಡ ಸಮಸ್ಯೆಯಾಗಿತ್ತು. ಎಲ್ಲ ರಾಷ್ಟ್ರಗಳಿಗೂ ಪುನರ್ ನಿರ್ಮಾಣದ ಕೆಲಸಕ್ಕೆ ಅಪಾರ ಹಣದ ಅವಶ್ಯಕತೆ ಇತ್ತು. ಸಾಲ ಎತ್ತುವ ಮೂಲಕ ಹಾಗೂ ಹಣದ ನೋಟುಗಳನ್ನು ಮುದ್ರಿಸುವ ಮೂಲಕ ಪುನರ್ ನಿರ್ಮಾಣದ ಕೆಲಸ ಪ್ರಾರಂಭಿಸಿದರು. ಆದರೆ ಅವಶ್ಯಕ ವಸ್ತುಗಳ ಕೊರತೆ ಹಣದುಬ್ಬರಕ್ಕೆ ಕಾರಣವಾಯಿತು. ಬೆಲೆಗಳ ಹಾಗೂ ಸಂಬಳದ ಮೇಲೆ ನಿಯಂತ್ರಣ ಹೇರಲಾಯಿತು. ಜೀವನಕ್ಕೆ ಸಂಬಳವನ್ನೇ ಅವಲಂಬಿಸಿದ್ದವರು ಹಾಗೂ ತಮ್ಮ ಉಳಿತಾಯದ ಮೇಲೆ ಜೀವನ ನಡೆಸುತ್ತಿದ್ದವರಿಗೆ ಬಲವಾದ ಪೆಟ್ಟು ಬಿತ್ತು. ಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ ಸಾಲ ನೀಡುತ್ತಿದ್ದ ರಾಷ್ಟ್ರಗಳು, ಯುದ್ಧದ ನಂತಕ ಸಾಲ ಪಡೆಯಬೇಕಾದ ರಾಷ್ಟ್ರಗಳಾದವು.

### 110.4.4 ನಾಲ್ಕು ಸಾಮ್ರಾಜ್ಯಗಳ ಪತನ

ಈ ಯುದ್ಧದಿಂದಾಗಿ ಯೂರೋಪಿನಲ್ಲಿ ನಾಲ್ಕು ಸಾಮ್ರಾಜ್ಯಗಳು ಪತನವಾದವು. ಆಸ್ಟ್ರಿಯ- ಹಂಗೇರಿಯ ಸಾಮ್ರಾಜ್ಯವನ್ನು ವಿಸರ್ಜಿಸಲಾಯಿತು. ಜರ್ಮನಿಯಲ್ಲಿ ಕೈಸರ್ ಎರಡನೆಯ ವಿಲಿಯಂನ ಆಳ್ವಿಕೆ ಕೊನೆಗೊಂಡ ವೀಮರ್ ಗಣರಾಜ್ಯ ಸ್ಥಾಪಿಸಲ್ಪಟ್ಟಿತು. ರಷ್ಯಾದಲ್ಲಿ ಝಾರರ ಆಳ್ವಿಕೆ ಕೊನೆಗೊಂಡು ಬೋಲ್ಶೆವಿಕ್‌ರು ಅಧಿಕಾರಕ್ಕೆ ಬಂದರು. 1922ರಲ್ಲಿ ತುರ್ಕಿ ಸುಲ್ತಾನೆಟ್ ಕೊನೆಗೊಂಡು ತುರ್ಕಿಯಲ್ಲಿ ಗಣರಾಜ್ಯ ಸ್ಥಾಪಿಸಲ್ಪಟ್ಟಿತು.

### 110.4.5. ಸಾಮಾಜಿಕ ಪರಿಣಾಮಗಳು

ಯುದ್ಧ ಪ್ರಾರಂಭವಾದಾಗ ಪುರುಷರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸ ಬೇಕಾಗಿದ್ದುದರಿಂದ ಅವರ ಸ್ಥಳಗಳಲ್ಲಿ ಸ್ತ್ರೀಯರು ಕೆಲಸ ಮಾಡಬೇಕಾದ ಪರಿಸ್ಥಿತಿ ಒದಗಿ ಬಂತು. ಕಾರ್ಖಾನೆಗಳಲ್ಲಿ ಅಂಗಡಿಗಳಲ್ಲಿ, ಕಛೇರಿಗಳಲ್ಲಿ ಮತ್ತು ಸ್ವಯಂ ಸೇವ ಸಂಸ್ಥೆಗಳಲ್ಲಿ, ಆಸ್ಪತ್ರೆಗಳಲ್ಲಿ ಮತ್ತು ಶಾಲೆಗಳಲ್ಲಿ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡತೊಡಗಿದರು. 1918ರಲ್ಲಿ ಇಂಗ್ಲೆಂಡಿನಲ್ಲಿ 30 ವರ್ಷ ವಯಸ್ಸನ್ನು ಮೀರಿದ್ದ ಎಲ್ಲ ಮಹಿಳೆಯರಿಗೂ ಮತಚಲಾಯಿಸುವ ಹಕ್ಕನ್ನು ನೀಡಲಾಯಿತು. ಒಂದನೆಯ ಮಹಾಯುದ್ಧದಿಂದಾಗಿ ಮಹಿಳೆಯರಿಗೆ ಉದ್ಯೋಗದ ಅವಕಾಶ ಹೆಚ್ಚಾಯಿತು.

### 110.4.6 ಸ್ವಯಂ ನಿರ್ಧಾರದ ತತ್ವದ ಮೂಲಕ ಅಸ್ತಿತ್ವಕ್ಕೆ ಬಂದ ರಾಜ್ಯಗಳು

ಜಾಗತಿಕ ಯುದ್ಧ ನಂತರ ಜನರು ತಮ್ಮ ಸ್ವಯಂ ನಿರ್ಧಾರದ ನಿರ್ಣಯದಿಂದಾಗಿ ಹಲವು ಹೊಸ ರಾಜ್ಯಗಳು ಉದಯಿಸಿದವು. ಪೋಲೆಂಡ್, ಫಿನ್‌ಲ್ಯಾಂಡ್, ಯುಗೊಸ್ಲಾವಿಯ, ಜೆಕೊಸ್ಲೊವಾಕಿಯ ಮೊದಲಾದ ರಾಜ್ಯಗಳು ಉದಯಿಸಿದವು. ಆಸ್ಟ್ರಿಯ -ಹಂಗೇರಿ ಎಂಬ ಸ್ವತಂತ್ರ ರಾಷ್ಟ್ರಗಳು ಉದಯಿಸಿದವು.

### 110.4.7 ಕೇಂದ್ರ ಬಣಗಳ(central powers) ಪತನ ಮತ್ತು ಹೊಸ ಶಕ್ತಿ ಸಮತೋಲನದ ಸ್ಥಾಪನೆ.

ಮೊದಲನೆಯ ಮಹಾಯುದ್ಧದಿಂದಾಗಿ ಜರ್ಮನಿ, ಆಸ್ಟ್ರಿಯ-ಹಂಗೇರಿ ಮತ್ತು ತುರ್ಕಿ ಸಾಮ್ರಾಜ್ಯಗಳು ಪತನವಾದವು. ಅದೇ ರೀತಿ ರಷ್ಯಾ ಸಾಮ್ರಾಜ್ಯವು ಕೊನೆಗೊಂಡಿತು. ಈ ಬೆಳವಣಿಗೆಗಳು ಯೂರೋಪಿನ ರಾಜ್ಯಗಳಲ್ಲಿ ಶಕ್ತಿ ಸಮತೋಲನಕ್ಕೆ ಸಂಬಂಧಿಸಿದಂತೆ ಬದಲಾವಣೆಗಳನ್ನು ಉಂಟುಮಾಡಿದವು. ಯುದ್ಧಕ್ಕೆ ಮುಂಚೆ ಇದ್ದ ಕೇಂದ್ರ ಯೂರೋಪಿನ ರಾಜ್ಯಗಳ ಪ್ರಾಬಲ್ಯ ಸದ್ಯಕ್ಕೆ ನಾಶವಾದಂತಾಯಿತು.

### 110.4.8. ಹೊಸ ಅಂತರ ರಾಷ್ಟ್ರೀಯ ಸಂಸ್ಥೆಯ ಉದಯ

ಅತ್ಯಂತ ಪ್ರಮುಖ ಅಂಶವೆಂದರೆ ಈ ಯುದ್ಧದಿಂದಾಗಿ ಒಂದು ಅಂತರ ರಾಷ್ಟ್ರೀಯ ಸಂಸ್ಥೆ ಉದಯಿಸಿದುದು.ಇದರ ಉದ್ದೇಶ ಪ್ರಪಂಚದಲ್ಲಿ ಯುದ್ಧವನ್ನು ತಡೆಗಟ್ಟಿ ಶಾಂತಿ ಹಾಗೂ ಸುಭದ್ರತೆ ಸ್ಥಾಪಿಸುವುದಾಗಿತ್ತು. ಈ ರೀತಿಯಾಗಿ ಲೀಗ್ ಆಫ್ ನೇಷನ್ಸ್ (ರಾಷ್ಟ್ರ ಸಂಘ ) ಪ್ರಪಂಚದಲ್ಲಿ ಮೊಟ್ಟ ಮೊದಲನೆಯದಾಗಿ ಅಸ್ತಿತ್ವಕ್ಕೆ ಬಂತು.



### 110.4.9 ಉಗ್ರ ರಾಷ್ಟ್ರೀಯ ವಾದದ ಉಗಮ.

ಮೊದಲನೆಯ ಜಾಗತಿಕ ಯುದ್ಧವು ಉಗ್ರ ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾಯಿತೆಂದು ಹೇಳಬಹುದು. ಏಕೆಂದರೆ ಜರ್ಮನಿ ಮತ್ತು ಇತರ ಸೋತ ರಾಷ್ಟ್ರಗಳೊಡನೆ ವಿಜಯಿ ರಾಷ್ಟ್ರಗಳು ಸೇಡಿನ ಮನೋಭಾವನೆಯಿಂದ ವರ್ತಿಸಿದವು. ಜರ್ಮನಿಯ ಪ್ರತಿನಿಧಿಗಳು ಶಾಂತಿ ಒಪ್ಪಂದದ ಸಮಯದಲ್ಲಿ ಎಷ್ಟೇ ಮನವಿ ಮಾಡಿಕೊಂಡರು ಮಾನವೀಯತೆಯ ದೃಷ್ಟಿಯಿಂದ ನೋಡಲಿಲ್ಲ. ಜರ್ಮನರು ಹೆಚ್ಚು ಅಪಮಾನಕರವಾದ ರೀತಿಯನ್ನು ಶಾಂತಿ ಒಪ್ಪಂದವನ್ನು ಮಾಡಿಕೊಂಡು ಎಲ್ಲ ಷರತ್ತುಗಳಿಗೂ ಸಹಿ ಹಾಕಬೇಕಾಯಿತು. ಆದ್ದರಿಂದ ಜರ್ಮನಿ ತನ್ನ ಸೇಡನ್ನು ತೀರಿಸಿಕೊಳ್ಳಲು ಅವಕಾಶಕ್ಕಾಗಿ ಕಾಯುತ್ತಿತ್ತು. ಹಿಟ್ಲರ್ ಅಧಿಕಾರಕ್ಕೆ ಬಂದ ಮೇಲೆ ಈ ಸೇಡನ್ನು ತೀರಿಸಿಕೊಳ್ಳಲು ನಿರ್ಧರಿಸಿದನು.

ಮೊದಲನೆಯ ಜಾಗತಿಕ ಯುದ್ಧ ಕೊನೆಗೊಂಡಿದುದು ಪುನಃ ಜನರಲ್ಲಿ ಆಶಾಕಿರಣ ಮೂಡಿತು. ಅವರು ಅಭಿವೃದ್ಧಿಯ ಕಡೆ ಗಮನ ಹರಿಸಿದರು.

## 110.5 ಸಂಕ್ಷಿಪ್ತ ಅವಲೋಕನ

ಆಧುನಿಕ ಪ್ರಪಂಚದ ಇತಿಹಾಸದಲ್ಲಿ ಮೊದಲನೆಯ ಜಾಗತಿಕ ಯುದ್ಧ ಒಂದು ಪ್ರಮುಖ ಘಟನೆ. ಅನೇಕ ಘಟನೆಗಳು ಈ ಯುದ್ಧಕ್ಕೆ ಕಾರಣವಾದವು. ಗುಪ್ತ ಒಪ್ಪಂದಗಳು, ಶಸ್ತ್ರಾಸ್ತ್ರ ಪೈಪೋಟಿ, ಆರ್ಥಿಕ ಪೈಪೋಟಿ, ಜರ್ಮನಿಯು ವಿಶ್ವಶಕ್ತಿಯಾಗಿ ಬೆಳೆಯಬೇಕೆಂಬ ಉತ್ಕಟಾಕಾಂಕ್ಷೆ ಪ್ರಮುಖ ಕಾರಣಗಳೆಂದು ಹೇಳಬಹುದು. ಆಸ್ಟ್ರಿಯಾದ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗ ಬೇಕಾಗಿದ್ದ ಫ್ರಾನ್ಸಿಸ್ ಫರ್ಡಿನೆಂಡ್‌ನನ್ನು ಕೊಲೆಮಾಡಿದುದು ತಕ್ಷಣದ ಕಾರಣವಾಗಿ ಪರಿಣಮಿಸಿತು. ಜರ್ಮನಿ, ಆಸ್ಟ್ರಿಯ-ಹಂಗೇರಿ, ಟರ್ಕಿ, ಬಲ್ಗೇರಿಯ ಒಂದು ಗುಂಪು. ಇವುಗಳ ವಿರುದ್ಧ ಫ್ರಾನ್ಸ್, ರಷ್ಯಾ, ಗ್ರೇಟ್ ಬ್ರಿಟನ್,ಅಮೇರಿಕ ಇನ್ನು ಅನೇಕ ರಾಷ್ಟ್ರಗಳು(ಒಟ್ಟಿಗೆ 30 ರಾಷ್ಟ್ರಗಳು) ಹೋರಾಟ ನಡೆಸಿದವು. ಯುದ್ಧವು ಅನೇಕ ಸ್ಥಳಗಳಲ್ಲಿ ನಡೆಯಿತು. ಪಶ್ಚಿಮ ಗಡಿಯಲ್ಲಿ ಫ್ರಾನ್ಸ್ ಮತ್ತು ಜರ್ಮನಿಯ ನಡುವೆ ಅನೇಕ ವರ್ಷಗಳವರೆಗೆ ಭೀಕರ ಹೋರಾಟ ನಡೆಯಿತು. ಪೂರ್ವದ ಗಡಿಯನ್ನು ರಷ್ಯಾವು ಜರ್ಮನಿ ಮತ್ತು ಆಸ್ಟ್ರಿಯ - ಹಂಗೇರಿಯ ಸೈನ್ಯಗಳ ವಿರುದ್ಧ ಹೋರಾಟ ನಡೆಸಿತು. ಆದರೆ ಅಂತಿಮವಾಗಿ ಅದು ಸೋಲನ್ನನುಭವಿಸಿತು. ಮೊದಲನೆಯ ಮಹಾಯುದ್ಧಕ್ಕೆ ಅಮೇರಿಕಾವು ಪ್ರವೇಶಿಸಿದ ನಂತರ ಯುದ್ಧವು ಅಂತಿಮ ಘಟ್ಟವನ್ನು ತಲುಪಿತು. ಅಮೇರಿಕಾ ಮಿತ್ರ ರಾಷ್ಟ್ರಗಳಿಗೆ ಧನಸಹಾಯ ಹಾಗೂ ಸೈನ್ಯದ ಸಹಾಯವನ್ನು ನೀಡಿ ಸಕ್ರಿಯವಾಗಿ ಯುದ್ಧದಲ್ಲಿ ಭಾಗವಹಿಸಿತು. ಅಂತಿಮವಾಗಿ ಜರ್ಮನಿ ಮತ್ತು ಅದರ ಮಿತ್ರ ರಾಷ್ಟ್ರಗಳು ಸೋಲನ್ನನುಭವಿಸಿದವು. 1918ರ ಅಂತ್ಯದ ವೇಳೆಗೆ ಯುದ್ಧ ಕೊನೆಗೊಂಡಿತು. ಈ ಯುದ್ಧದಿಂದಾಗಿ ಎಷ್ಟೋ ಮಿಲಿಯನ್ ಜನ ಸಾವನ್ನಪ್ಪಿದರು. ಅಷ್ಟೇ ಸಂಖ್ಯೆಯಲ್ಲಿ ಅಂಗವಿಕಲರಾದರು. ಅರ್ಥ ವ್ಯವಸ್ಥೆ ಸಂಪೂರ್ಣವಾಗಿ ಸ್ಥಾನ ಪಲ್ಲಟಗೊಂಡಿತು. ಬಹಳ ಮುಖ್ಯವಾದ ಪರಿಣಾಮವೆಂದರೆ ಪ್ರಪಂಚದಲ್ಲಿ ಯುದ್ಧವನ್ನು ತಡೆಗಟ್ಟಿ ಶಾಂತಿಯನ್ನು ಸ್ಥಾಪಿಸುವ ದೃಷ್ಟಿಯಿಂದ ಲೀಗ್ ಆಫ್ ನೇಷನ್ಸ್ (ರಾಷ್ಟ್ರ ಸಂಘ) ಅಸ್ತಿತ್ವಕ್ಕೆ ಬಂದಿದುದು.

## 110.6 ಮಾದರಿ ಪ್ರಶ್ನೆಗಳು

1. ಮೊದನೆಯ ಜಾಗತಿಕ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ
2. ಮೊದಲನೆಯ ಜಾಗತಿಕ ಯುದ್ಧದ ಪ್ರಮುಖ ಘಟನಾವಳಿಗಳ ಬಗ್ಗೆ ವಿವರಿಸಿ.
3. ಮೊದಲನೆಯ ಜಾಗತಿಕ ಯುದ್ಧದ ಪರಿಣಾಮಗಳನ್ನು ಚರ್ಚಿಸಿ.

## 110.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


Polland, **Short History of the Great War**

Arun Bhatta charjee **A History of Modern World (1914-1949)**

C.D.Hazen **Modern Europe Since (1789)**

P.C.Thomas **History of Europe (1789-1945)**

G.A.Craig **Europe Since 1815.**

## ಟಿಪ್ಪಣಿಗಳು

# ಘಟಕ - 111

## ಪ್ಯಾರಿಸ್ ಶಾಂತಿ ಸಮ್ಮೇಳನ ಮತ್ತು ಶಾಂತಿ ಒಪ್ಪಂದಗಳು

### ರಚನೆ


111.0 ಉದ್ದೇಶಗಳು

111.1 ಪೀಠಿಕೆ

111.2 ವರ್ಸೈಲ್ಸ್ ಒಪ್ಪಂದ (Treaty of Versailles)

111.2.1 ಪ್ರಾದೇಶಿಕ ಅಂಶಗಳು

111.2.2 ಸೈನ್ಯಕ್ಕೆ ಸಂಬಂಧಿಸಿದ ಅಂಶಗಳು

111.2.3 ಯುದ್ಧ ಪರಿಹಾರ ದ್ರವ್ಯ

111.2.4 ವರ್ಸೈಲ್ಸ್ ಒಪ್ಪಂದಕ್ಕೆ ಸಂಬಂಧಿಸಿದ ಅಭಿಪ್ರಾಯಗಳು

111.3 ಸೆಯಿಂಟ್ ಜರ್ಮೇನ್ ಒಪ್ಪಂದ (Treaty of Saint Germain)

111.4 ನೆಯುಲ್ಲಿ ಒಪ್ಪಂದ (Treaty of Neuilly)

111.5 ಟ್ರಿಯನಾನ್ ಒಪ್ಪಂದ (Treaty of Trianon)

111.6 ಸೆವರ್ಸ್ ಒಪ್ಪಂದ (Treaty of Sevres)

111.7 ಹೊಸ ರಾಜ್ಯಗಳು

111.8 ಪ್ಯಾರಿಸ್ ಸಮ್ಮೇಳನದ ವಿಮರ್ಶೆ

111.9 ಸಂಕ್ಷಿಪ್ತ ಅವಲೋಕನ

111.10 ಮಾದರಿ ಪ್ರಶ್ನೆಗಳು

111.11 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 111.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ತಿಳಿದುಕೊಳ್ಳುವ ಅಂಶಗಳೆಂದರೆ

* ಪ್ಯಾರಿಸ್‌ನಲ್ಲಿ ನಡೆದ ಶಾಂತಿ ಒಪ್ಪಂದದ ಸಮ್ಮೇಳನ
* ಜರ್ಮನಿಯೊಡನೆ ಮಾಡಿಕೊಂಡ ಒಪ್ಪಂದ
* ಆಸ್ಟ್ರಿಯಾದೊಡನೆ ಮಾಡಿಕೊಂಡ ಒಪ್ಪಂದ
* ಬಲ್ಗೇರಿಯಾದೊಡನೆ ಮಾಡಿಕೊಂಡ ಒಪ್ಪಂದ
* ತುರ್ಕಿಯೊಡನೆ ಮಾಡಿಕೊಂಡ ಒಪ್ಪಂದ
* ಹೊಸ ರಾಜ್ಯಗಳ ಉದಯ
* ಪ್ಯಾರಿಸ್ ಒಪ್ಪಂದದ ವಿಮರ್ಶೆ

## 111.1 ಪೀಠಿಕೆ

1918 ರ ನವೆಂಬರ್ ಹನ್ನೊಂದರಂದು ಜರ್ಮನಿ ನಿಯೋಗ ಯುದ್ಧ ನಿಲ್ಲಿಸಲು ಒಪ್ಪಂದ ಮಾಡಿಕೊಂಡಿತು. ಈ ರೀತಿಯಾಗಿ ಮೊದಲನೆಯ ಮಹಾಯುದ್ಧ ಕೊನೆಗೊಂಡಿತು. ಇದಾದ ನಂತರ 9 ವಾರಗಳಲ್ಲಿ ವಿಜಯಿ ರಾಷ್ಟ್ರಗಳು ಪ್ಯಾರಿಸ್‌ನಲ್ಲಿ 1919 ರ ಜನವರಿ ಹದಿನೆಂಟರಂದು ಶಾಂತಿ ಒಪ್ಪಂದ ಮಾಡಿಕೊಳ್ಳಲು ಸಭೆ ಸೇರಿದವು. ಒಂದು ವರ್ಷದವರೆಗೆ ಅನೇಕ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಫ್ರಾನ್ಸಿನ ಪ್ರಧಾನಮಂತ್ರಿ ಜಾರ್ಜ್ ಕ್ಲೆಮೆನ್‌ಸಿಯೊನನ್ನು ಸಮ್ಮೇಳನದ ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು. ಬಹುತೇಕ ವಿಜಯಿ ರಾಷ್ಟ್ರಗಳು ಜರ್ಮನಿಯೇ ಈ ಯುದ್ಧಕ್ಕೆ ಕಾರಣವಾಯಿತೆಂದೂ, ಆದ್ದರಿಂದ ಕಠಿಣ ಒಪ್ಪಂದವನ್ನೂ ಅದರ ಮೇಲೆ ಹೇರುವುದರ ಮೂಲಕ ಅದನ್ನು ಶಿಕ್ಷಿಸಬೇಕೆಂದು ವಾದಿಸಿದವು. ಶಾಂತಿ ಸಮ್ಮೇಳನದ ಚರ್ಚೆಯಲ್ಲಿ ಭಾಗವಹಿಸಲು ಜರ್ಮನಿಯನ್ನು ಆಹ್ವಾನಿಸಲಿಲ್ಲ.

ಅಧಿಕೃತವಾಗಿ 1919 ರ ಜನವರಿ ಹದಿನೆಂಟರಂದು ಮಿತ್ರ ರಾಷ್ಟ್ರಗಳ ಪ್ರತಿನಿಧಿಗಳ ಸಭೆಯು ಪ್ರಾರಂಭೋತ್ಸವವನು ವರ್ಸೆಲ್ಸ್‌ನ ಅರಮನೆಯಲ್ಲಿ ನೆರವೇರಿತು. ಇದೇ ಅರಮನೆಯಲ್ಲಿ ನಲವತ್ತೆಂಟು ವರ್ಷಗಳ ಹಿಂದೆ ಬಿಸ್ಮಾರ್ಕ್ ಫ್ರಾನ್ಸ್‌ನ್ನು ಸೋಲಿಸಿ ಜರ್ಮನ್ ಸಾಮ್ರಾಜ್ಯವನ್ನು ಘೋಷಿಸಿದ್ದನು. ಈ ಸಮ್ಮೇಳನದಲ್ಲಿ ಅನೇಕ ರಾಷ್ಟ್ರಗಳು ಭಾಗವಹಿಸಿದ್ದರು ಕೂಡ ಕೇವಲ ಕೆಲವು ಪ್ರಬಲ ವ್ಯಕ್ತಿಗಳು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡರು. ಅವರೆಂದರೆ ಫ್ರಾನ್ಸಿನ ಕ್ಲೆಮನ್ಸೂ, ಗ್ರೇಟ್ ಬ್ರಿಟನ್ನಿನ ಲಾಯಡ್ ಜಾರ್ಜ್. ಇಟಲಿಯ ಒರ್ಲಾಂಡೊ.

ಶಾಂತಿ ಸಮ್ಮೇಳನದಲ್ಲಿ ಐದು ಪ್ರಮುಖ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಜರ್ಮನಿಯೊಡನೆ ವರ್ಸೈಲ್ಸ್ ಒಪ್ಪಂದ, ಆಸ್ಟ್ರಿಯಾದೊಡನೆ ಸೆಯಿಂಟ್ ಜರ್ಮೇನ್, ಹಂಗೇರಿಯೊಡನೆ ಟ್ರಿಯನನ್ ಒಪ್ಪಂದ, ಬಲ್ಗೇರಿಯಾದೊಡನೆ ನೆಯುಲ್ಲಿ (Neuilly) ಒಪ್ಪಂದ ಮತ್ತು ತುರ್ಕಿಯೊಡನೆ ಸೆವೆರೆಸ್ (Sevres) ಒಪ್ಪಂದಗಳನ್ನು ಮಾಡಿಕೊಂಡರು. ವಿಜಯಿ ರಾಷ್ಟ್ರಗಳು ಸೋತ ರಾಷ್ಟ್ರಗಳೊಡನೆ ಯಾವುದೇ ವಿಷಯ ಚರ್ಚಿಸದೆ ಈ ಒಪ್ಪಂದಗಳನ್ನು ಹೇರಿದರು.

## 111.2 ವರ್ಸೈಲ್ಸ್ ಒಪ್ಪಂದ (Treaty of Versaills)

ಐದು ಒಪ್ಪಂದಗಳ ಪೈಕಿ ಜರ್ಮನಿಯೊಡನೆ ಮಾಡಿಕೊಂಡ ವರ್ಸೈಲ್ಸ್ ಒಪ್ಪಂದ ಬಹಳ ಮುಖ್ಯವಾದುದು. 1919 ರ ಜೂನ್ 28 ರಂದು ಮಿತ್ರ ರಾಷ್ಟ್ರಗಳು ಹಾಗೂ ಅವರ ಪರವಾಗಿದ್ದ ರಾಷ್ಟ್ರಗಳು ಜರ್ಮನಿಯೊಡನೆ ಈ ಒಪ್ಪಂದವನ್ನು ಮಾಡಿಕೊಂಡವು.

### *111.2.1 ಪ್ರಾದೇಶಿಕ ಅಂಶಗಳು*

ವರ್ಸೈಲ್ಸ್ ಒಪ್ಪಂದದಿಂದಾಗಿ ಜರ್ಮನಿ ಅನೇಕ ಪ್ರದೇಶಗಳನ್ನು ಕಳೆದುಕೊಂಡಿತು. ಅಲ್ಸೇಸ್ ಮತ್ತು ಲೊರೈನ್ ಪ್ರದೇಶಗಳನ್ನು ಫ್ರಾನ್ಸ್‌ಗೆ ಹಿಂದಿರುಗಿಸಲಾಯಿತು. 1871 ರ ಯುದ್ಧದಲ್ಲಿ ಜರ್ಮನಿಯು ಈ ಪ್ರದೇಶಗಳನ್ನು ಕಿತ್ತುಕೊಂಡಿತ್ತು. ಕಲ್ಲಿದ್ದಲು ಗಣಿಗಳಿಗೆ ಪ್ರಮುಖವೆನಿಸಿಕೊಂಡಿದ್ದ ಸಾರ್ ಕಣಿವೆಯನ್ನು (Saar Basin) ಜರ್ಮನಿಯು ಫ್ರಾನ್ಸ್‌ಗೆ ನೀಡಬೇಕಾಯಿತು. ಹದಿನೈದು ವರ್ಷಗಳ ಅವಧಿಗೆ ಈ ಗಣಿಗಳನ್ನು ನೀಡಲಾಯಿತು. ಜರ್ಮನಿಯು 1871 ರ ಯುದ್ಧದ ನಂತರ ಫ್ರಾನ್ಸ್‌ಗೆ ಸೇರಿದ್ದ ಅನೇಕ ಕಲ್ಲಿದ್ದಲ್ಲು

ಗಣಿಗಳನ್ನು ನಾಶ ಪಡಿಸಿತ್ತು. ಈ ನಷ್ಟವನ್ನು ಸರಿದೂಗಿಸಿಕೊಳ್ಳಲು ಫ್ರಾನ್ಸ್‌ಗೆ ಸಾರ್ ಕಣಿವೆಯನ್ನು ನೀಡಲಾಯಿತು. ಹದಿನೈದು ವರ್ಷಗಳ ನಂತರ ಮುಕ್ತವಾಗಿ ಚುನಾವಣೆ ನಡೆಸಿ ಜನರು ತಮ್ಮ ನಿರ್ಧಾರ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕಾಗಿತ್ತು.

1864 ರಲ್ಲಿ ಡೆನ್ಮಾರ್ಕ್‌ನೊಡನೆ ಯುದ್ಧ ಮಾಡಿ ಪ್ರಷ್ಯ ವಶಪಡಿಸಿಕೊಂಡಿದ್ದ ಶ್ಲೆಸ್ ವಿಗ್ ಪ್ರದೇಶವನ್ನು ಜನಾಭಿಪ್ರಾಯದ ಮೂಲಕ ನಿರ್ಧರಿಸಲಾಯಿತು. ಉತ್ತರ ಭಾಗದ ಜನರು ಡೆನ್ಮಾರ್ಕ್‌ನೊಡನೆ ಸೇರಿಸಿಕೊಳ್ಳಲು ತಮ್ಮ ಅಭಿಪ್ರಾಯ ವ್ಯಕ್ತಿಪಡಿಸಿದರು. ಇನ್ನುಳಿದ ಭಾಗದ ಜನರು ಜರ್ಮನಿಯೊಡನೆ ಸೇರಿಕೊಳ್ಳಲು ತಮ್ಮ ನಿರ್ಧಾರ ವ್ಯಕ್ತಪಡಿಸಿದರು. ಯೂಪೆನ್ ಮತ್ತು ಮಾಲ್ಮೇ ಪಟ್ಟಣಗಳನ್ನು ಬೆಲ್ಜಿಯಂಗೆ ನೀಡಲಾಯಿತು. ಮೆಮೆಲ್‌ನ್ನು ಲಿಥುವೇನಿಯಾಕ್ಕೆ ನೀಡಲಾಯಿತು. ಪೋಸೆನ್‌ನ ಬಹುಭಾಗ ಮತ್ತು ಪಶ್ಚಿಮ ಪ್ರಷ್ಯಾದ ಭಾಗಗಳನ್ನು ಪೋಲೆಂಡಿಗೆ ನೀಡಲಾಯಿತು. ಜರ್ಮನಿಯು ಸೈಲಿಸಿಯದ ಕೆಲವು ಭಾಗಗಳನ್ನು ಮತ್ತು ಪೂರ್ವ ಪ್ರಷ್ಯಾವನ್ನು ಪೋಲೆಂಡಿಗೆ ಆ ಪ್ರದೇಶಗಳ ಜನರು ಇಷ್ಟ ಪಟ್ಟರೆ ಬಿಟ್ಟುಕೊಡುವುದಾಗಿ ಜರ್ಮನಿ ತಿಳಿಸಿತು. ಜನಾಭಿಪ್ರಾಯವನ್ನು ಸಂಗ್ರಹಿಸಿದಾಗ 700,000 ಜನರು ಜರ್ಮನಿಯೊಂದಿಗೆ ಇರಲು ತಮ್ಮ ಇಚ್ಛೆ ವ್ಯಕ್ತಪಡಿಸಿದರು. 480,000 ಜನರು ಪೋಲೆಂಡಿನೊಂದಿಗೆ ಸೇರಿಕೊಳ್ಳಲು ಮತ ಚಲಾಯಿಸಿದರು. ಈ ಪ್ರದೇಶಗಳ ಜನರ ನಿರ್ಧಾರದಿಂದ ಪೋಲೆಂಡಿಗೆ ಹೆಚ್ಚು ಅಸಮಾಧಾನವಾಯಿತು. ಆದಾಗ್ಯೂ ಹೆಚ್ಚು ಪ್ರದೇಶಗಳ ಬೇಡಿಕೆಯನ್ನು ಪೋಲೆಂಡ್ ಇಟ್ಟಿತು. ಅಂತಿಮವಾಗಿ ಸೈಲಿಸಿಯವನ್ನು ಭಾಗ ಮಾಡಲು ನಿರ್ಧರಿಸಲಾಯಿತು. ಸೈಲಿಸಿಯದ 1/2 ಕ್ಕಿಂತ ಹೆಚ್ಚು ಭೂಭಾಗ ಹಾಗೂ ಅರ್ಧಕ್ಕಿಂತ ಹೆಚ್ಚು ಜನರನ್ನು ಜರ್ಮನಿಯ ಹಿಡಿತಕ್ಕೊಳಪಡಿಸಲಾಯಿತು. ಆದರೆ ಪೋಲೆಂಡಿಗೆ ಆರ್ಥಿಕವಾಗಿ ಹೆಚ್ಚು ಲಾಭ ಬರುವಂತಹ ಪ್ರದೇಶಗಳನ್ನು ನೀಡಲಾಯಿತು. ಡ್ಯಾನ್‌ಜಿಗ್‌ನ್ನು ಜರ್ಮನಿಯಿಂದ ಬೇರ್ಪಡಿಸಿ ಮುಕ್ತ ನಗರವೆಂದು ಸಾರಿ ಲೀಗ್‌ನ ಉಸ್ತುವಾರಿಗೆ ಒಪ್ಪಿಸಲಾಯಿತು. ಡ್ಯಾನ್‌ಜಿಗ್ ನಗರದಲ್ಲಿ ಪೋಲೆಂಡಿಗೆ ವಿಶೇಷ ಹಕ್ಕುಗಳನ್ನು ನೀಡಲಾಯಿತು. ಪೋಲೆಂಡ್ ಡ್ಯಾನ್‌ಜಿಗ್ ತಲುಪಲು ಪೊಮೆರೆನಿಮ ಮತ್ತು ಪೂರ್ವ ಪ್ರಷ್ಯಾದ ನಡುವೆ ಒಂದು ಚಿಕ್ಕ ಭೂಪ್ರದೇಶವನ್ನು ಬಿಟ್ಟುಕೊಡಲಾಯಿತು.

ಜರ್ಮನಿಯು ದೂರದೇಶಗಳಲ್ಲಿ ಹೊಂದಿದ್ದ ಹಲವು ಹಕ್ಕುಗಳನ್ನು ಕೂಡ ತ್ಯಜಿಸಬೇಕಾಯಿತು. ಜರ್ಮನಿಯು ಗುತ್ತಿಗೆಗೆ ಚೀನಾದಲ್ಲಿ ತೆಗೆದುಕೊಂಡಿದ್ದ ಕಿಯಚೌನನ್ನು ಜಪಾನ್‌ಗೆ ನೀಡಲಾಯಿತು. ಜರ್ಮನಿಯು ಷಾಂಟುಂಗ್‌ನ್ನು ಹೊಂದಿದ್ದ ಹಕ್ಕುಗಳನ್ನು ಜಪಾನ್‌ಗೆ ವರ್ಗಾಯಿಸಲಾಯಿತು. ಜರ್ಮನಿಯು ಹೊಂದಿದ್ದ ಸಮೋವ್‌ನ್ನು ನ್ಯೂಜಿಲ್ಯಾಂಡ್‌ಗೆ ನೀಡಲಾಯಿತು. ಜರ್ಮನಿಯು ಪಶ್ಚಿಮ ಆಫ್ರಿಕಾವನ್ನು ಬ್ರಿಟನ್ ಪಡೆದುಕೊಂಡಿತು. ಬ್ರಿಟನ್ ಮತ್ತು ಫ್ರಾನ್ಸ್‌ಗಳು ಕಾಮೆರೂನ್ ಮತ್ತು ಟೋಗೋಲ್ಯಾಂಡ್‌ಗಳನ್ನು ಹಂಚಿಕೊಂಡವು. ಅದೇ ರೀತಿ ಥೈಯ್‌ಲ್ಯಾಂಡ್, ಈಜಿಪ್ಟ್, ಮೊರಾಕ್ಕೊ ಮತ್ತು ಲಿಬಿರಿಯಾ ತನ್ನ ಹಕ್ಕುಗಳನ್ನು ಹಾಗೂ ಸವಲತ್ತುಗಳನ್ನು ಬಿಟ್ಟುಕೊಟ್ಟಿತು.

ಜರ್ಮನಿಯು ಪೋಲೆಂಡ್, ಜೆಕೊಸ್ಲೊವಾಕಿಯ ಮತ್ತು ಜರ್ಮನ್ ಆಸ್ಟ್ರಿಯಾಗಳಿಗೆ ಸ್ವಾತಂತ್ರ್ಯವನ್ನು ಮಾನ್ಯ ಮಾಡಿತು. ಬ್ರೆಸ್ಟಲಿಟೊ ವ್‌ಸ್ಕ್ ಮತ್ತು ಬುಖಾರೆಷ್ಟ್ ಒಪ್ಪಂದಗಳನ್ನು ಜರ್ಮನಿಯು ರದ್ದು ಪಡಿಸಿತು. ಪೂರ್ವ ಯೂರೋಪಿಗೆ ಸಂಬಂಧಿಸಿದಂತೆ ಮಿತ್ರ ರಾಷ್ಟ್ರಗಳು ತಮಗೆ ಇಷ್ಟಬಂದಂತೆ ತೀರ್ಮಾನ ತೆಗೆದುಕೊಳ್ಳಲು ಜರ್ಮನಿಯು ತನ್ನ ಒಪ್ಪಿಗೆ ನೀಡಿತು.

### *111.2.2 ಸೈನ್ಯಕ್ಕೆ ಸಂಬಂಧಿಸಿದ ಅಂಶಗಳು*

ಜರ್ಮನಿಯ ಸೈನಿಕ ಶಕ್ತಿಯನ್ನು ಸಂಪೂರ್ಣವಾಗಿ ನಾಶಪಡಿಸಲು ವರ್ಸೈಲ್ಸ್ ಒಪ್ಪಂದದಲ್ಲಿ ನಿರ್ಧರಿಸಲಾಯಿತು. ಯುವಕರು ಕಡ್ಡಾಯವಾಗಿ ಸೈನ್ಯದಲ್ಲಿ ಸೇವೆ ಸಲ್ಲಿಸುವುದನ್ನು ತೆಗೆದು ಹಾಕುವುದಾಗಿ ಜರ್ಮನಿಯು ಒಪ್ಪಿಕೊಂಡಿತು. ಜರ್ಮನಿಯ ಸೈನ್ಯದ ಶಕ್ತಿಯನ್ನು ಕೇವಲ ಒಂದು ಲಕ್ಷಕ್ಕೆ ಮಿತಿಗೊಳಿಸಲಾಯಿತು. ರೈನ್‌ನ ಪೂರ್ವಕ್ಕೆ ಇದ್ದ ಎಲ್ಲ ಕೋಟೆಗಳನ್ನು ನಾಶಪಡಿಸಲು ಜರ್ಮನಿಯು ಒಪ್ಪಿಕೊಂಡಿತು. ಜರ್ಮನಿಯ ನೌಕಾ ಬಲದ ಶಕ್ತಿಯನ್ನು ಕೇವಲ ಆರು ಯುದ್ಧ ನೌಕೆಗಳು, ಆರು ಲಘು ಕ್ರೂಸರ್ (ಸಮುದ್ರ ಪರ್ಯಟನ ನೌಕೆಗಳು) (Crusier) ಮತ್ತು ಹನ್ನೆರಡು ಟೋರ್ಪೆಡೊ ದೋಣಿಗಳನ್ನು ಮಾತ್ರ ಹೊಂದಲು ಜರ್ಮನಿಗೆ ಅನುಮತಿ ಕೊಡಲಾಯಿತು. ಸೈನಿಕ ಇಲ್ಲವೆ ನೌಕಾ ವಾಯುಪಡೆಯನ್ನು ಜರ್ಮನಿಯು ಹೊಂದುವ ಹಾಗಿರಲಿಲ್ಲ. ಹೆಲಿಗೊಲ್ಯಾಂಡ್‌ನ ಎಲ್ಲ ಕೋಟೆಗಳನ್ನು ನಾಶಪಡಿಸಬೇಕೆಂದು ತಿಳಿಸಲಾಯಿತು. ಎಲ್ಲ ರಾಷ್ಟ್ರಗಳಿಗೂ ಕೀಲ್ ಕಾಲುವೆಯನ್ನು ತೆಗೆಯಲು ಜರ್ಮನಿಯು ಒಪ್ಪಿಕೊಂಡಿತು. ಬಾಲ್ಟಿಕ್‌ನ ಹತ್ತಿರ ಯಾವ ಕೋಟೆಗಳನ್ನು ನಿರ್ಮಿಸಬಾರದು ಎಂಬ ಷರತ್ತು ಹೇರಲಾಯಿತು. ಜರ್ಮನಿಯು ಕೈಸರ್ ಎರಡನೆಯ ವಿಲಿಯಂ ಮತ್ತು ಇತರ ಯುದ್ಧ ಅಪರಾಧಿಗಳನ್ನು ವಿಚಾರಣೆಗೊಳಪಡಿಸಲು ಅನುಮತಿ ನೀಡಿತು. ಆದರೆ ಹಾಲೆಂಡ್ ವಿಲಿಯಂನನ್ನು ವಿಚಾರಣೆಗೆ ಒಪ್ಪಿಸಲು ನಿರಾಕರಿಸಿತು. ಆದ್ದರಿಂದ ಇನ್ನುಳಿದ ಅಪರಾಧಿಗಳ ವಿಚಾರಣೆಯನ್ನು ಕೈಬಿಡಲಾಯಿತು.

### *111.2.3 ಯುದ್ಧ ಪರಿಹಾರ ದ್ರವ್ಯ*

ಜರ್ಮನಿಯೇ ಮೊದಲನೆಯ ಮಹಾಯುದ್ಧಕ್ಕೆ ಕಾರಣವೆಂದು ಒಪ್ಪಿಕೊಳ್ಳುವಂತೆ ಒತ್ತಾಯಿಸಲಾಯಿತು. ಜರ್ಮನಿಯು ಮಿತ್ರ ರಾಷ್ಟ್ರಗಳ ದೇಶಗಳ ಸಾರ್ವಜನಿಕರ ಆಸ್ತಿ ಪಾಸ್ತಿಗೆ ಹಾನಿ ಮಾಡಿದುದರಿಂದ ಅದಕ್ಕೆ ಪರಿಹಾರ ನೀಡಬೇಕೆಂದು ಜರ್ಮನಿಗೆ ಆದೇಶಿಸಿದವು.

ತಕ್ಷಣವೆ ಮಿತ್ರರಾಷ್ಟ್ರಗಳಿಗೆ 5 ಬಿಲಿಯನ್ ಡಾಲರ್ ಪರಿಹಾರ ನೀಡಬೇಕೆಂದು ತಿಳಿಸಲಾಯಿತು. ಉಳಿದ ಪರಿಹಾರ ಹಣವನ್ನು ಪರಿಹಾರ ಸಮಿತಿಯು ನಿರ್ದೇಶಿಸಲಾಯಿತು. ಹಣದ ರೂಪದಲ್ಲಲ್ಲದೆ ವಸ್ತುಗಳ ರೂಪದಲ್ಲೂ ಪರಿಹಾರವನ್ನು ನೀಡಬೇಕಾಯಿತು. ಹಡಗುಗಳು, ರೈಲ್ವೆ ಉಪಕರಣಗಳು, ಗೋವುಗಳು, ಕಲ್ಲಿದ್ದಲ್ಲು, ಪುಸ್ತಕಗಳು ಮೊದಲಾದ ಸಾಮಾನು ಸರಂಜಾಮುಗಳನ್ನು ಜರ್ಮನಿಯು ನೀಡಿತು. ತಕ್ಷಣವೇ ಯುದ್ಧದ ಪರಿಹಾರ ಎಷ್ಟೆಂದು ನಿರ್ಧರಿಸಲಿಲ್ಲ. ಈ ಕೆಲಸವನ್ನು ಯುದ್ಧ ಪರಿಹಾ ಸಮಿತಿಗೆ ವಹಿಸಲಾಯಿತು. ಆದರೆ ಮಿತ್ರ ರಾಷ್ಟ್ರಗಳ ಉದ್ದೇಶ ಜರ್ಮನಿಯಿಂದ ಆದಷ್ಟು ಹೆಚ್ಚು ಪರಿಹಾರವನ್ನು ವಸೂಲಿ ಮಾಡುವ ಉದ್ದೇಶ ಹೊಂದಿದ್ದವು.

ವರ್ಸೈಲ್ಸ್ ಒಪ್ಪಂದದ ಅಂಶಗಳನ್ನು ಜರ್ಮನಿಯು ಈಡೇರಿಸುವವರೆಗೆ ಜರ್ಮನಿಯ ರೈನ್‌ನ ಪಶ್ಚಿಮ ಪ್ರದೇಶವನ್ನು ಮಿತ್ರರಾಷ್ಟ್ರಗಳ ಜಂಟಿಯಾಗಿ ಆಕ್ರಮಿಸಿಕೊಳ್ಳುವುದಾಗಿ ತಿಳಿಸಲಾಯಿತು. ಯಾವಾಗ ಜರ್ಮನಿಯು ಸಂಪೂರ್ಣವಾಗಿ ವರ್ಸೈಲ್ಸ್ ಒಪ್ಪಂದದ ಅಂಶಗಳನ್ನು ಜರ್ಮನಿ ಸಂಪೂರ್ಣವಾಗಿ ಈಡೇರಿಸುವುದೋ ಅನಂತರ ಮಿತ್ರ ರಾಷ್ಟ್ರಗಳು ರೈನ್ ಪ್ರದೇಶವನ್ನು ಬಿಟ್ಟು ಕೊಡುವುದಾಗಿ ತಿಳಿಸಿದರು.

### *111.2.4 ವರ್ಸೈಲ್ಸ್ ಒಪ್ಪಂದಕ್ಕೆ ಸಂಬಂಧಿಸಿದ ಅಭಿಪ್ರಾಯಗಳು*

ವರ್ಸೈಲ್ಸ್ ಒಪ್ಪಂದವು ಹೆಚ್ಚಿನ ಟೀಕೆಗೊಳಗಾಗಿದೆ. ಜರ್ಮನಿಯ ಮೇಲೆ ಮಿತ್ರ ರಾಷ್ಟ್ರಗಳು ಒಪ್ಪಂದವನ್ನು ಹೇರಿದ ರೀತಿ ಹಾಗೂ ಒಪ್ಪಂದದ ಕಠಿಣ ಅಂಶಗಳನ್ನು ಅನೇಕರು ಖಂಡಿಸಿದ್ದಾರೆ. ಒಪ್ಪಂದದ ಅಂಶಗಳನ್ನು ವಿಜಯಿ ರಾಷ್ಟ್ರಗಳು ಒಪ್ಪಿಕೊಳ್ಳುವಂತೆ ಜರ್ಮನಿಯ ನಿಯೋಗಕ್ಕೆ ತಿಳಿಸಿದವು. ಒಪ್ಪಂದದ ಕರಡು ಪ್ರತಿಯನ್ನು ನೀಡಿ ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸುವಂತೆ ಜರ್ಮನಿಯ ನಿಯೋಗಕ್ಕೆ ತಿಳಿಸಿದರು. ನಿಯೋಗವು ಅನೇಕ ಅಂಶಗಳ ಬಗ್ಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿತು. ಸ್ವಯಂ ನಿರ್ಧಾರದ ತತ್ವದ ಆಧಾರದ ಮೇಲೆ ಅದರ ಅಧೀನದಲ್ಲಿದ್ದ ಜನರು ಬಿಡುಗಡೆ ಹೊಂದುವುದು ಜರ್ಮನಿಯ ಅನಾನುಕೂಲಕ್ಕೆ ವಿಧಿಸಲಾಗಿದೆ ಎಂದು ಜರ್ಮನರು ತಿಳಿಸಿದರು.

ಜರ್ಮನಿಯನ್ನು ತುಳಿಯುವುದರ ಮೂಲಕ ಅಥವಾ ಅದನ್ನು ಗುಲಾಮಗಿರಿಗೆ ಒಳಪಡಿಸುವುದರ ಮೂಲಕ ಶಾಶ್ವತವಾಗಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಿಲ್ಲ ಎಂದು ಜರ್ಮನ್ನರು ಹೇಳಿದರು. ಹೊಸ ಶಾಂತಿ ಒಪ್ಪಂದ ನ್ಯಾಯ ಸಮ್ಮತವಾಗಿರಬೇಕು ಎಂದು ಹೇಳಿದರು. ಜರ್ಮನಿಯು ನ್ಯಾಯಬದ್ಧವಾಗಿ ವಸಾಹತುಗಳನ್ನು ಗಳಿಸಿಕೊಂಡಿದೆ ಮತ್ತು ಈ ವಸಾಹತುಗಳು ಜರ್ಮನಿಯ ಕೈಗಾರಿಕೆಗಳಿಗೆ ಅತ್ಯವಶ್ಯಕವಾಗಿದೆ ಎಂದು ಜರ್ಮನ್ ನಿಯೋಗ ತಿಳಿಸಿತು. ಜರ್ಮನಿಯ ನಿಯೋಗ ಯುದ್ಧ ಪರಿಹಾರ ದ್ರವ್ಯಕ್ಕೆ ಸಂಬಂಧಿಸಿದಂತೆಯೂ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ತಕ್ಷಣವೇ ಜರ್ಮನಿಯನ್ನು ಲೀಗ್‌ನ ಸದಸ್ಯನಾಗುವುದಕ್ಕೆ ಅವಕಾಶ ನೀಡದೆ ಇದ್ದುದ್ದಕ್ಕೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರು. ಆದರೆ ವಿಜಯಿ ರಾಷ್ಟ್ರಗಳು ಜರ್ಮನಿಯ ಈ ವಿರೋಧಗಳಿಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಅನಂತರ ಅಲ್ಪ ಸ್ವಲ್ಪ ಬದಲಾವಣೆಗಳನ್ನೊಳಗೊಂಡ ಪರಿಷ್ಕೃತ ಒಪ್ಪಂದದ ಶಾಂತಿ ಒಪ್ಪಂದದ ಪ್ರತಿಯನ್ನು ಜರ್ಮನಿಯ ನಿಯೋಗಕ್ಕೆ ನೀಡಿ ಒಪ್ಪಿಕೊಳ್ಳಲು ಹೇಳಲಾಯಿತು. ಜರ್ಮನಿಯ ಬೆಂಬಲಕ್ಕೆ ಯಾರು ಇಲ್ಲದೆ ಇದ್ದುದರಿಂದ ವಿಧಿಯಿಲ್ಲದೆ ಈ ಶಾಂತಿ ಒಪ್ಪಂದಕ್ಕೆ ಜರ್ಮನಿಯ ಪ್ರಧಾನ ಮಂತ್ರಿಯು ತನ್ನ ಒಪ್ಪಿಗೆ ನೀಡಿದನು.

ಬ್ರಿಟಿಷ್ ಪಾರ್ಲಿಮೆಂಟಿಗೆ ಈ ಒಪ್ಪಂದವನ್ನು ಮಂಡಿಸುವಾಗ ಪ್ರಧಾನ ಮಂತ್ರಿ ಲಾಯ್ಡ್ ಜಾರ್ಜ್ ಈ ರೀತಿ ಹೇಳಿದನು. ಒಪ್ಪಂದದ ಅಂಶಗಳು ಅನ್ಯಾಯದಿಂದ ಕೂಡಿವೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಯುದ್ಧದ ಕಾರಣಕ್ಕೆ ಜರ್ಮನಿಯೆ ಜವಾಬ್ದಾರಿ ಎಂಬುದು ನ್ಯಾಯ ಸಮ್ಮತವಾಗಿದೆ. ಜರ್ಮನಿಯ ಮೇಲೆ ವಿಧಿಸಿರುವ ಕೆಲವು ಅಂಶಗಳು ಕ್ರೂರವಾಗಿವೆ. ಆದರೆ ಜರ್ಮನಿಯ ಕೃತ್ಯಗಳು ಕೂಡ ಅಷ್ಟೇ ಭಯಾನಕವಾಗಿವೆ ಎಂದು ಲಾಯ್ಡ್ ಜಾರ್ಜ್ ತನ್ನ ವಾದವನ್ನು ಮಂಡಿಸಿದನು. ಆಕಸ್ಮಿಕವಾಗಿ ಯುದ್ಧದಲ್ಲಿ ಜರ್ಮನಿಯು ಜಯಗಳಿಸಿದ್ದರೆ ಫಲಿತಾಂಶಗಳು ಇನ್ನೂ ಭಯಾನಕವಾಗಿರುತ್ತಿದ್ದವು ಎಂದು ಲಾಯ್ಡ್ ಜಾರ್ಜ್ ಹೇಳಿದನು.

ವರ್ಸೈಲ್ಸ್ ಒಪ್ಪಂದವು ಕೂಡ ಸ್ವಯಂ ನಿರ್ಧಾರ ತತ್ವವನ್ನು ತತ್ವಶಃ ಅನುಸರಿಸಲಿಲ್ಲ. ಈ ತತ್ವವೇ ಶಾಂತಿ ಒಪ್ಪಂದದ ತಳಹದಿಯಾಗಿರಬೇಕೆಂದು ಅಧ್ಯಕ್ಷ ವಿಲ್ಸನ್ನನು ಹೇಳಿದ್ದನು. ಈ ತತ್ವದ ಆಧಾರದ ಮೇಲೆ ಯುಗೊಸ್ಲೊವಿಯ, ಜೆಕೊಸ್ಲೊವಾಕಿಯದಂತಹ ಸ್ವತಂತ್ರ ರಾಷ್ಟ್ರಗಳು ಉದಯಿಸಿದವು. ಆದರೆ ಈ ತತ್ವವನ್ನು ಜರ್ಮನ್ ಜನಾಂಗಕ್ಕೆ ಅನುಸರಿಸಲಿಲ್ಲ. ಪಶ್ಚಿಮ ಪ್ರಷ್ಯ ಮತ್ತು ಪೋಸೆನ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜರ್ಮನ್ನರು ಪೋಲೆಂಡಿನ ವಶದಲ್ಲಿ ಉಳಿದುಕೊಂಡರು. ಬೋಹಿಮಿಯಾದ ಹೆಚ್ಚಿನ ಸಂಖ್ಯೆಯ ಜನರು ಸ್ಲಾವರ ಹಿಡಿತಕ್ಕೊಳಪಟ್ಟರು. ಅದೇ ರೀತಿ ಡಾಲ್ಮೇಷಿಯಾದಲ್ಲಿ ಸ್ಲಾವರು ಇಟಲಿಯ ಅಧೀನಕ್ಕೊಳಪಟ್ಟರು. ಜರ್ಮನ್ - ಆಸ್ಟ್ರಿಯವು ಜರ್ಮನಿಯೊಂದಿಗೆ ವಿಲೀನವಾಗುವುದನ್ನು ನಿಷೇಧಿಸಿದುದು ಕೂಡ ಸ್ವಯಂ ನಿರ್ಧಾರದ ತತ್ವವನ್ನು ಉಲ್ಲಂಘಿಸಿದಂತಾಯಿತು.

ಒಪ್ಪಂದದ ಆರ್ಥಿಕ ಅಂಶಗಳು ಜರ್ಮನಿಗೆ ಈಡೇರಿಸಲು ಅಸಾಧ್ಯವೆನಿಸುವಷ್ಟರ ಮಟ್ಟಿಗೆ ಇದ್ದವು. ಈ ಅಂಶಗಳು ಸಂಪೂರ್ಣವಾಗಿ ಜರ್ಮನಿಯ ಆರ್ಥಿಕ ಪರಿಸ್ಥಿತಿಯನ್ನೂ ಹದಗೆಡಿಸಿದವು. ಜರ್ಮನಿಯು ತನ್ನ ಸಂಪದ್ಭರಿತ ಗಣಿ ಪ್ರದೇಶಗಳನ್ನು

ಕಳೆದುಕೊಂಡಿದುದರ ಜೊತೆಗೆ ವಸಾಹತುಗಳನ್ನು ಕೂಡ ಕಳೆದು ಕೊಂಡಿತು. ಇದರ ಜೊತೆಗೆ ತನ್ನ ಶಕ್ತಿ ಮೀರಿ ಯುದ್ಧ ಪರಿಹಾರ ಹಣವನ್ನೂ ಮಿತ್ರ ರಾಷ್ಟ್ರಗಳಿಗೆ ನೀಡಬೇಕಾಯಿತು.

ಹೆಚ್ಚು ನಿಷ್ಠುರ ಹಾಗೂ ಅಪಮಾನಕರವಾದ ಶಾಂತಿ ಒಪ್ಪಂದ ಎರಡನೆಯ ಮಹಾಯುದ್ಧಕ್ಕೆ ಕಾರಣವಾಯಿತು. ಜರ್ಮನಿಯು ಈ ಒಪ್ಪಂದವನ್ನು ಕಿತ್ತೊಗೆಯಲು ಒಂದು ಸದಾವಕಾಶಕ್ಕಾಗಿ ಕಾಯುತ್ತಿತ್ತು. ಕ್ವಿನ್ಸಿ ಹೋ "ಶಾಂತಿ ಒಪ್ಪಂದವನ್ನು ಮಾಡಿಕೊಂಡಿದ್ದ ರೀತಿ ಭವಿಷ್ಯದಲ್ಲಿ ಶಾಂತಿಯು ಅಸಾಧ್ಯ ಎನ್ನುವಷ್ಟರ ಮಟ್ಟಿಗಿತ್ತು" ಎಂಬುದಾಗಿ ಹೇಳಿದ್ದಾರೆ. ವರ್ಸೈಲ್ಸ್ ಒಪ್ಪಂದ ಎಷ್ಟರ ಮಟ್ಟಿಗೆ ಅಂತರ ರಾಷ್ಟ್ರೀಯ ಸಂಬಂಧಗಳ ಮೇಲೆ ಪ್ರಭಾವ ಬೀರಿತ್ತೆಂದರೆ ಮುಂದೆ ಎರಡು ದಶಕಗಳ ಕಾಲ ಸಂಭವಿಸಿದ ಘಟನೆಗಳೆಲ್ಲವು ಈ ಒಪ್ಪಂದದ ಅಂಶಗಳಿಂದಲೇ ಉದ್ಭವಿಸಿದವು.

## 111.3 ಸೇಂಟ್ ಜರ್ಮೇನ್ ಒಪ್ಪಂದ

ಮಿತ್ರ ರಾಷ್ಟ್ರಗಳು ಸೇಂಟ್ ಜರ್ಮೇನ್ ಒಪ್ಪಂದವನ್ನು ಆಸ್ಟ್ರಿಯಾದೊಡನೆ ಮಾಡಿಕೊಂಡವು. ಈ ಒಪ್ಪಂದ ಆಸ್ಟ್ರೊ- ಹಂಗೇರಿಯನ್ ಸಾಮ್ರಾಜ್ಯವನ್ನು ವಿಸರ್ಜಿಸಿತು. ಆಸ್ಟ್ರಿಯ ಗಣರಾಜ್ಯ ಅಸ್ತಿತ್ವಕ್ಕೆ ಬಂತು. ಆಸ್ಟ್ರಿಯಾದ ಹಿಡಿತದಲ್ಲಿದ್ದ ವಿವಿಧ ರಾಷ್ಟ್ರೀಯತೆಗೆ ಸೇರಿದ್ದ ಪ್ರಜೆಗಳು ಸ್ವಯಂ ನಿರ್ಧಾರದ ತತ್ವವನ್ನನುಸರಿಸಿ ಪ್ರತ್ಯೇಕ ಸ್ವತಂತ್ರ ರಾಜ್ಯಗಳಾಗಿ ಉದಯಿಸಿದವು. ಹಂಗೇರಿ, ಜೆಕೊಸ್ಲೊವಾಕಿಯಾ, ಪೋಲೆಂಡ್ ಮತ್ತು ಯುಗೊಸ್ಲೊವಿಯ, ದೇಶಗಳ ಸ್ವಾತಂತ್ರ್ಯವನ್ನು ಆಸ್ಟ್ರಿಯ ಮಾನ್ಯ ಮಾಡಿತು. ಆಸ್ಟ್ರೀಯ-ಹಂಗೇರಿ ಸಾಮ್ರಾಜ್ಯದ ಆಳ್ವಿಕೆಗೊಳಪಟ್ಟಿದ್ದ ಅನೇಕ ಪ್ರದೇಶಗಳನ್ನು ಬೇರೆ ರಾಜ್ಯಗಳಿಗೆ ಹಾಗೂ ಹೊಸದಾಗಿ ಅಸ್ತಿತ್ವಕ್ಕೆ ಬಂದ ರಾಜ್ಯಗಳಿಗೆ ಬಿಟ್ಟು ಕೊಡಬೇಕಾಯಿತು. ಇಟಲಿಗೆ ಬ್ರೆನ್ನರ್ ಕಣಿವೆಯ (Brenner) ವರೆಗೆ ದಕ್ಷಿಣ ಟಿರೊಲ್ (Somon Jisol) ನ್ನು, ಟ್ರಿಯೆಸ್ಟ (Trieste), ಇಸ್ಟ್ರಿಯ (Istria), ಟ್ರೆನ್‌ಟಿನೊ (trentinon)ಮತ್ತು ಡಾಲ್ಮೇಷಿಯಾದ ಕೆಲವು ದ್ವೀಪಗಳನ್ನು (Daemetian islands) ಆಸ್ಟ್ರಿಯ ಬಿಟ್ಟುಕೊಟ್ಟಿತು. ಜೆಕೊಸ್ಲೊವಾಕಿಯಾಕ್ಕೆ ಬೊಹಿಮಿಯ, ಮೊರೆವಿಯ, ಆಸ್ಟ್ರಿಯಾದ ಒಂದು ಭಾಗ (lower Austria), ಸಂಪೂರ್ಣವಾಗಿ ಆಸ್ಟ್ರಿಯನ್ ಸೈಲೇಸಿಯ, (Austrian Silesia) ಪ್ರದೇಶಗಳನ್ನು ಆಸ್ಟ್ರಿಯ ನೀಡಿತು. ಪೋಲೆಂಡ್ ಆಸ್ಟ್ರಿಯನ್ ಗೆಲಿಷಿಯಾವನ್ನು ಪಡೆಯಿತು. ರುಮೇನಿಯವು ಬುಕೊವಿನವನ್ನು ಪಡೆಯಿತು. ಯುಗೋಸ್ಲೊವಿಯವು ಬೋಸ್ನಿಯ ಹರ್ಜೆಗೋವಿನ ಮತ್ತು ಡಾಲ್ಮೇಷಿಯನ್ ತೀರ ಪ್ರದೇಶಗಳನ್ನು ಪಡೆಯಿತು. ಆಸ್ಟ್ರಿಯಾಕ್ಕೆ ಯಾವುದೇ ಬಂದರುಗಳು ಇಲ್ಲದಂತಾಯಿತು. ಅದರ ಸೈನ್ಯವನ್ನು 30,000 ಕ್ಕೆ ಇಳಿಸಲಾಯಿತು. ಜರ್ಮನಿಯ ರೀತಿಯೆ ಆಸ್ಟ್ರಿಯಾವು ಕೂಡ ಹೆಚ್ಚು ಯುದ್ಧ ಪರಿಹಾರ ದ್ರವ್ಯವನ್ನು ಮಿತ್ರರಾಷ್ಟ್ರಗಳಿಗೆ ನೀಡಬೇಕಾಯಿತು.

## 111.4 ನೆಯುಲ್ಲಿ ಒಪ್ಪಂದ (Treaty of Neuilly)

ನೆಯುಲ್ಲಿ ಒಪ್ಪಂದವನ್ನು 1919 ರ ನವೆಂಬರ್ ಇಪ್ಪತ್ತೇಳರಂದು ಬಲ್ಗೇರಿಯಾದೊಡನೆ ಮಾಡಿಕೊಳ್ಳಲಾಯಿತು. ಈ ಒಪ್ಪಂದದ ಮೂಲಕ ಬಲ್ಗೇರಿಯಾದ ಪಶ್ಚಿಮ ಭಾಗವನ್ನು ಯುಗೋಸ್ಲೊವಿಯಾಕ್ಕೆ ನೀಡಲಾಯಿತು. ಪಶ್ಚಿಮ ಥ್ರೇಸ್ ಹಾಗೂ ಏಜಿಯನ್ ತೀರ ಪ್ರದೇಶಗಳನ್ನು ಗ್ರೀಸ್‌ಗೆ ನೀಡಲಾಯಿತು. ಆದಾಗ್ಯೂ ಬಲ್ಗೇರಿಯ ಏಜಿಯನ್ ಸಮುದ್ರಕ್ಕೆ ಹೋಗಲು ಅವಕಾಶ ಕಲ್ಪಿಸಿಕೊಡಲಾಯಿತು. ಬಲ್ಗೇರಿಯಾದ ಸೈನ್ಯದ ಸಂಖ್ಯೆಯನ್ನು 33,000ಕ್ಕೆ ಇಳಿಸಲಾಯಿತು. ಅದರ ನೌಕಾಬಲವನ್ನು ಸಂಪೂರ್ಣವಾಗಿ ನಾಶಗೊಳಿಸಲಾಯಿತು. ಯುದ್ಧ ಪರಿಹಾರ ಹಣವನ್ನು 9 ಮಿಲಿಯನ್ ಡಾಲರ್‌ಗಳಿಗೆ ನಿಗಧಿ ಪಡಿಸಲಾಯಿತು. ಈ ಒಪ್ಪಂದದಿಂದಾಗಿ ಬಲ್ಗೇರಿಯ 2,750 ಚದರ ಮೈಲಿಗಳನ್ನು ಕಳೆದುಕೊಂಡಿದುದಲ್ಲದೆ 3,00,000 ಜನರನ್ನು ಕಳೆದುಕೊಂಡಿತು. ಈ ಯುದ್ಧದಿಂದಾಗಿ ಬಲ್ಗೇರಿಯ ಬಾಲ್ಕನ್ ರಾಜ್ಯಗಳ ಪೈಕಿ ಹೆಚ್ಚು ದುರ್ಬಲ ರಾಜ್ಯವಾಗಿ ಪರಿವರ್ತಿತಗೊಂಡಿತು.

## 111.5 ಟ್ರಿಯನಾನ್ ಒಪ್ಪಂದ (Treaty of Trianon)

1920 ರ ಜೂನ್ ನಾಲ್ಕರಂದು ಹಂಗೇರಿಯಾದೊಡನೆ ಟ್ರಿಯನಾನ್ ಒಪ್ಪಂದವೇರ್ಪಟ್ಟಿತು. ಹಂಗೇರಿಯದಲ್ಲಿ ಉಂಟಾದ ರಾಜಕೀಯ ಗೊಂದಲಮಯ ಪರಿಸ್ಥಿತಿಯಿಂದಾಗಿ ಮಿತ್ರ ರಾಷ್ಟ್ರಗಳು ಅದರೊಡನೆ ಒಪ್ಪಂದ ಮಾಡಿಕೊಳ್ಳುವುದು ತಡವಾಯಿತು. ಈ ಒಪ್ಪಂದದಿಂದಾಗಿ ಒಂದು ಸ್ವತಂತ್ರ ಹಂಗೇರಿ ರಾಜ್ಯ ಉದಯಿಸಿತು. ಟ್ರಾನ್ಸಿಲ್‌ವೇನಿಯವನ್ನು ರುಮೇನಿಯಾಕ್ಕೆ ನೀಡಿತು. ಯುಗೊಸ್ಲಾವಿಯವು ಕ್ರೊಷಿಯ-ಸ್ಲೊವೆನಿಯವನ್ನು ಪಡೆಯಿತು. ಜೆಕೊಸ್ಲೊವಾಕಿಯವು ಸ್ಲೊವೆಕಿಯಾವನ್ನು ಪಡೆಯಿತು. ಬರ್ಗೇನ್ ಲ್ಯಾಂಡ್ ಅಥವಾ ಪಶ್ಚಿಮ ಹಂಗೇರಿಯಾವನ್ನು ಆಸ್ಟ್ರಿಯಾಕ್ಕೆ ನೀಡಲಾಯಿತು. ಹಂಗೇರಿಯಾದ ಸೈನ್ಯದ ಸಂಖ್ಯೆಯನ್ನು 35,000 ಕ್ಕೆ ಮಿತಿಗೊಳಿಸಲಾಯಿತು. ಹಂಗೇರಿಯಾ ಕೂಡ ಒಂದನೆಯ ಜಾಗತಿಕ ಯುದ್ಧಕ್ಕೆ ಕಾರಣವೆಂದು ಪರಿಗಣಿಸಲಾಯಿತು ಮತ್ತು ಯುದ್ಧ ಪರಿಹಾರವನ್ನು ನೀಡಬೇಕೆಂದು ತೀರ್ಮಾನಿಸಲಾಯಿತು. ಈ ಒಪ್ಪಂದವು ಕೂಡ ಕಠಿಣ ಒಪ್ಪಂದವೆಂದು ಅಭಿಪ್ರಾಯ ಮಾಡಲಾಗಿದೆ. ಈ ಒಪ್ಪಂದ ಅಂಶಗಳು ಪ್ರಾದೇಶಿಕವಾಗಿ ಹಂಗೇರಿಯನ್ನು ಯುದ್ಧ ಪೂರ್ವದ 1/3 ಭಾಗದಷ್ಟಕ್ಕೆ ಇಳಿಸಿದವು. ಸುಮಾರು ಶೇ. 40 ರಷ್ಟು ಜನಸಂಖ್ಯೆಯನ್ನು ಕಳೆದುಕೊಂಡಿತು.

## 111.6 ಸೆವರ್ಸ್ ಒಪ್ಪಂದ (Treaty of Sevres)

ಮಿತ್ರ ರಾಷ್ಟ್ರಗಳ ಒಳ ಜಗಳದಿಂದ ಹಾಗೂ ತುರ್ಕಿಯಲ್ಲಿ ಎರಡು ಸರ್ಕಾರಗಳು ಅಸ್ತಿತ್ವದಲ್ಲಿದ್ದುದರಿಂದ ತುರ್ಕಿಯೊಡನೆ ಒಪ್ಪಂದ ಮಾಡಿಕೊಳ್ಳುವುದು ತಡವಾಯಿತು. ಕಾನ್ಸ್ಟ್ಯಾಂಟಿನೋಪಲ್‌ನಲ್ಲಿ ಸುಸ್ತಾನನು ಆಳ್ವಿಕೆ ನಡೆಸುತ್ತಿದ್ದನು. ಅಂಗೊರಾದಲ್ಲಿ ಮುಸ್ತಫ್ ಕೆಮಲ್ ಪಾಷಾನು ಅಧಿಕಾರದಲ್ಲಿದ್ದನು. ಅಂತಿಮವಾಗಿ 1920 ರ ಆಗಸ್ಟ್ ತಿಂಗಳಲ್ಲಿ ಒಂದು ಒಪ್ಪಂದ ನಡೆಯಿತು. ಈ ಒಪ್ಪಂದದ ಪ್ರಕಾರ ಅರಬ್ ರಾಜ್ಯವಾದ ಹಿಜಾಜ್ (Arab State of Hejaz) ಕೆಂಪು ಸಮುದ್ರದ ಪೂರ್ವಕ್ಕಿದ್ದ ಪ್ರದೇಶ ಮತ್ತು ಅರ್ಮೇನಿಯ ಸ್ವತಂತ್ರ ರಾಜ್ಯಗಳೆಂದು ಘೋಷಿಸಲಾಯಿತು. ಆದರೆ ಪ್ಯಾಲೆಸ್ಟೀನ್, ಮೆಸಪೊಟೋಮಿಯ, ಟ್ರಾನ್ಸ್-ಜೋರ್ಡಾನಿಯ ಪ್ರದೇಶಗಳು ಬ್ರಿಟನ್ನಿನ ಮ್ಯಾಂಡೇಟ್‌ಗಳಾದವು. ಸಿರಿಮಾವು ಫ್ರಾನ್ಸಿನ ಮ್ಯಾಂಡೇಟ್ ಪ್ರದೇಶವಾಯಿತು. ಸೈರಿಸಿಯ ಫ್ರಾನ್ಸಿನ ಪ್ರಭಾವಕ್ಕೊಳಪಟ್ಟ ಪ್ರದೇಶವೆಂದೂ ಮತ್ತು ಅನಟೋರಿಯ ಪ್ರದೇಶವು ಇಟಲಿಯ ಪ್ರಭಾವಕ್ಕೊಳಪಟ್ಟ ಪ್ರದೇಶವೆಂದೂ ಘೋಷಿಸಲ್ಪಟ್ಟವು. ಸ್ಮಿರ್ನ(Smyrna), ಥ್ರೇಸ್, ಏಡ್ರಿಯನೋಪಲ್, ಗಲ್ಲಿಪೊಲಿ ಮತ್ತು ಏಜಿಯನ್ ದ್ವೀಪಗಳನ್ನು ಗ್ರೀಸ್‌ಗೆ ನೀಡಲಾಯಿತು. ಜಲಸಂಧಿಗಳನ್ನು (Dondanelles and Bosphorus) ಅಂತರ ರಾಷ್ಟ್ರೀಯ ಹಿಡಿತಕ್ಕೊಳಪಡಿಸಿ ಎಲ್ಲ ರಾಷ್ಟ್ರಗಳ ನೌಕೆಗಳು ಮುಕ್ತವಾಗಿ ಸಂಚರಿಸಲು ಅವಕಾಶ ಮಾಡಿಕೊಡಲಾಯಿತು.

## 111.7 ಹೊಸ ರಾಷ್ಟ್ರಗಳು

ಪ್ಯಾರಿಸ್ ಸಮ್ಮೇಳನದಲ್ಲಿ ನಡೆದ ಶಾಂತಿ ಒಪ್ಪಂದಗಳ ಫಲವಾಗಿ ಅನೇಕ ಹೊಸ ರಾಷ್ಟ್ರಗಳು ಅಥವಾ ವಿಸ್ತಾರಗೊಂಡ ರಾಷ್ಟ್ರಗಳು ಉದಯಿಸಿದವು. ಇವುಗಳು ಜರ್ಮನ್ ಸಾಮ್ರಾಜ್ಯ ಹಾಗೂ ಆಸ್ಟ್ರೋ-ಹಂಗೇರಿಯನ್ ಸಾಮ್ರಾಜ್ಯಗಳ ಪತನದಿಂದಾಗಿ ಅಸ್ತಿತ್ವಕ್ಕೆ ಬಂದವು. ರಷ್ಯಾದ ಸಾಮ್ರಾಜ್ಯದ ಪತನವು ಕೂಡ ಕಾರಣವಾಯಿತು. ಪ್ಯಾರಿಸ್‌ನ ಒಪ್ಪಂದದಿಂದಾಗಿ ಉದಯಿಸಿದ ಬಹಳ ಮುಖ್ಯವಾದ ರಾಜ್ಯವೆಂದರೆ ಪೋಲೆಂಡ್. ಹದಿನೆಂಟನೆಯ ಶತಮಾನದಲ್ಲಿ ಪೋಲೆಂಡನ್ನು ಮೂರು ಪ್ರಬಲ ರಾಜ್ಯಗಳಾದ ಆಸ್ಟ್ರಿಯ-ಪ್ರಷ್ಯ ಮತ್ತು ರಷ್ಯ ವಿಭಾಗ ಮಾಡಿಕೊಂಡಿದ್ದವು. ಹಳೆಯ ಪೋಲೆಂಡಿನ ಪುನರುಜ್ಜೀವನಕ್ಕೋಸ್ಕರ ರಷ್ಯ ತನಗೆ ಸೇರಿದ್ದ ರಷ್ಯನ್ ಪೋಲೆಂಡ್‌ನ್ನು ಹಿಂದಿರುಗಿಸಿತು. ಜರ್ಮನಿಯು ಪೋಸನ್ ಮತ್ತು ಪಶ್ಚಿಮ ಪ್ರಷ್ಯವನ್ನು ನೀಡಿತು ಮತ್ತು ಆಸ್ಟ್ರಿಯ ಗೆಲೀಷಿಯಾವನ್ನು ನೀಡಿತು. ಪೋಲಿಷ್ ಕಾರಿಡಾರ್ (Polish corridor) ಪೋಲೆಂಡಿಗೆ ಬಾಲ್ಟಿಕ್ ಸಮುದ್ರಕ್ಕೆ ಹೋಗುವ ಅವಕಾಶವನ್ನು ಒದಗಿಸಿಕೊಟ್ಟಿತು. ಜರ್ಮನಿಯಿಂದ ಪೋಲೆಂಡ್ ಡ್ಯಾನ್‌ಜಿಗ್ ಬಂದರನ್ನು ಪಡೆಯಿತು. ಅದನ್ನು ಮುಕ್ತ ನಗರವನ್ನಾಗಿ ಪರಿವರ್ತಿಸಲಾಯಿತು. ಸುಮಾರು 1,50,000ಚದರ ಮೈಲಿಗಳಷ್ಟು ವಿಸ್ತಾರವಾದ ಹಾಗೂ 30ಮಿಲಿಯನ್ ಜನಸಂಖ್ಯೆಯುಳ್ಳ ಒಂದು ವಿಶಾಲವಾದ ಪೋಲೆಂಡ್ ರಾಜ್ಯ ಸ್ಥಾಪಿತವಾಯಿತು. ಆದರೆ ಅದು ಯುದ್ಧದಿಂದಾಗಿ ಸಂಪೂರ್ಣವಾಗಿ ಜರ್ಜರಿತವಾಗಿತ್ತು.

ಇನ್ನುಳಿದ ರಾಜ್ಯಗಳೆಂದರೆ ಫಿನ್‌ಲ್ಯಾಂಡ್, ಲಿಥೆಯೆನಿಯ ಎಸ್ಟೋನಿಯ ಮತ್ತು ಲಾಟ್ವಿಯ (ಬಾಲ್ಟಿಕ್ ರಾಜ್ಯಗಳು) ಸರ್ಬಿಯ ಕ್ರೊಷಿಯ, ಮಾಂಟಿನಿಸ್ರೊ, ಸ್ಲೊವೇನಿಯ, ಡಾಲ್ಮೆಷಿಯ, ಸೋಸ್ನಿಯ ಮತ್ತು ಹರ್ಜಿಗೋವಿರ್ನಗಳನ್ನು ಪಡೆಯಿತು. ಸರ್ಬಿಯ ಯುಗೋಸ್ಲಾವಿಯ ಎಂಬ ಹೊಸ ಹೆಸರನ್ನು ಪಡೆಯಿತು.

## 111.8 ಪ್ಯಾರಿಸ್ ಸಮ್ಮೇಳನದ ವಿಮರ್ಶೆ

ಪ್ಯಾರಿಸ್ ಶಾಂತಿ ಸಮ್ಮೇಳನವು ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಯಶಸ್ವಿಯಾಗಲಿಲ್ಲ. ಆದರೆ ಅದು ರಾಜಕೀಯ ಚೌಕಟ್ಟನ್ನು ಸ್ಥಾಪಿಸಿತು ಹಾಗೂ ಪ್ರಾದೇಶಿಕ ಸಮಸ್ಯೆಗಳನ್ನು ಬಗೆಹರಿಸಿತು ರಾಷ್ಟ್ರೀಯತೆಯ ಆಧಾರದ ಮೇಲೆ ಯೂರೋಪಿನ ಭೂಪಟವನ್ನು ಪುನರ್ ರಚಿಸಲು ಪ್ರಯತ್ನ ನಡೆಸಿತು. ವಿವಿಧ ರಾಷ್ಟ್ರೀಯ ಸ್ವಯಂ-ನಿರ್ಣಯ ತತ್ವದ ಆಧಾರದ ಮೇಲೆ ವಿವಿಧ ಸಾಮ್ರಾಜ್ಯಗಳಲ್ಲಿದ್ದ ಜನರನ್ನು ಮುಕ್ತಗೊಳಿಸಿದರು. ಪ್ರಾದೇಶಿಕ ಸಮಸ್ಯೆಗಳನ್ನು ಬಗೆಹರಿಸುವಾಗಲು ಈ ತತ್ವವನ್ನು ಅನುಸರಿಸಲಾಯಿತು. ಆದರೆ ಈ ತತ್ವಗಳನ್ನು ಅನುಷ್ಠಾನಕ್ಕೆ ತರುವಾಗ ಹಲವು ರಾಷ್ಟ್ರಗಳಿಗೆ ಅನ್ವಯಿಸಲಿಲ್ಲ (ಜರ್ಮನಿ) ಆದಾಗ್ಯೂ ಹೊಸ ಯುರೋಪಿನ ಭೂಪಟ ರಚನೆಯು ಹಳೆಯ ಸಾಮ್ರಾಜ್ಯಕ್ಕಿಂತ ನ್ಯಾಯ ಸಮ್ಮತವಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಭವಿಷ್ಯದಲ್ಲಿ ಜರ್ಮನಿಯಿಂದ ಬರತಕ್ಕ ಅಪಾಯವನ್ನು ಕೊನೆಗೊಳಿಸಲು ಪ್ರಯತ್ನ ನಡೆಸಿತು. ಆದರೆ ಈ ಶಾಂತಿ ಸಮ್ಮೇಳನ ಈ ದಿಶೆಯಲ್ಲಿ ಯಶಸ್ವಿಯಾಗಲಿಲ್ಲ. ಪ್ರಾರಂಭದಿಂದಲೂ ಜರ್ಮನರು ಶಾಂತಿ ಒಪ್ಪಂದ ಅಂಶಗಳನ್ನು ಗೌರವಿಸಿ ಅದರಂತೆ ನಡೆದುಕೊಳ್ಳುವುದರ ಬದಲು ತಿರಸ್ಕಾರದಿಂದ ನೋಡಿದರು. ಏಕೆಂದರೆ ವರ್ಸೈಲ್ಸ್ ಒಪ್ಪಂದದ ಅನೇಕ ಅಂಶಗಳು ಅನ್ಯಾಯದಿಂದ ಕೂಡಿದ್ದವು ಹಾಗೂ ಈಡೇರಿಸಲು ಸಾಧ್ಯವಾಗದಷ್ಟರ ಮಟ್ಟಿಗೆ ಇದ್ದವು. ವಿಜಯಿ ರಾಷ್ಟ್ರಗಳು ಜರ್ಮನಿಯ ಹೊಸ ಗಣರಾಜ್ಯದೊಡನೆ ಸಹೃದತೆಯಿಂದ ನಡೆದುಕೊಳ್ಳಬೇಕಾಯಿತು. ಈ ಶಾಂತಿ ಒಪ್ಪಂದ ಉದ್ದೇಶಿಸಿದಂತೆ ಯುದ್ಧವನ್ನು ಮುಕ್ತಾಯ ಮಾಡುವುದರ ಬದಲು ಮತ್ತೊಂದು ಯುದ್ಧಕ್ಕೆ ಎಡೆಮಾಡಿಕೊಟ್ಟಿತು. ಶಾಂತಿ ಒಪ್ಪಂದವು ಅನೇಕ ಲೋಪದೋಷಗಳಿಂದ ಕೂಡಿತ್ತು.

## 111.9 ಸಂಕ್ಷಿಪ್ತ ಅವಲೋಕನ

ಮೊದಲನೆಯ ಜಾಗತಿಕ ಯುದ್ಧವು ಕೊನೆಗೊಂಡ ನಂತರ ಶಾಂತಿ ಸಮ್ಮೇಳನವು 1919 ರಲ್ಲಿ ನಡೆಯಿತು. ಈ ಶಾಂತಿ ಸಮ್ಮೇಳನದಲ್ಲಿ ಅನೇಕ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಜರ್ಮನಿಯು ವರ್ಸೈಲ್ಸ್ ಒಪ್ಪಂದವನ್ನು ವಿಜಯಿ ರಾಷ್ಟ್ರಗಳೊಂದಿಗೆ ಮಾಡಿಕೊಂಡಿತು. ಆಸ್ಟ್ರಿಯಾದೊಡನೆ ಸೆಯಿಂಟ್ ಜರ್ಮೈನ್ ಒಪ್ಪಂದವೇರ್ಪಟ್ಟಿತು. ಬಲ್ಗೇರಿಯವು ನೆಯುಲ್ಲಿ ಒಪ್ಪಂದವನ್ನು ಮಾಡಿಕೊಂಡಿತು. ಟ್ರಿಯನನ್ ಒಪ್ಪಂದವು ಹಂಗೇರಿಯೊಡನೆ ಏರ್ಪಟ್ಟಿತು. ಸೆವರ್ಸ್ ಒಪ್ಪಂದವನ್ನು ಟರ್ಕಿಯು ಗೆದ್ದ ರಾಷ್ಟ್ರಗಳೊಡನೆ ಮಾಡಿಕೊಂಡಿತು. ಪ್ಯಾರಿಸ್‌ನಲ್ಲಿ ಮಾಡಿಕೊಂಡ ಒಪ್ಪಂದಗಳನ್ನು ಕಟುವಾಗಿ ಟೀಕಿಸಲಾಗಿದೆ. ವರ್ಸೈಲ್ಸ್ ಒಪ್ಪಂದವನ್ನು ಜರ್ಮನಿಗೆ ಅಪಮಾನ ಮಾಡಲೆಂದೇ ಅಷ್ಟೊಂದು ಕಠಿಣವಾದ ಅಂಶಗಳನ್ನು ಹೇರಲಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ. ಈ ಅಂಶಗಳು ಅಂತಿಮವಾಗಿ ಎರಡನೆಯ ಜಾಗತಿಕ ಯುದ್ಧಕ್ಕೆ ಕಾರಣವಾದವೆಂಬುದು ಇತಿಹಾಸಕಾರರ ಅಭಿಪ್ರಾಯ.

## 111.10 ಮಾದರಿ ಪ್ರಶ್ನೆಗಳು

1. ವರ್ಸೈಲ್ಸ್ ಒಪ್ಪಂದ ಮುಖ್ಯ ಅಂಶಗಳನ್ನು ವಿವರಿಸಿ. ಅವುಗಳು ಎಷ್ಟರ ಮಟ್ಟಿಗೆ ಎರಡನೆಯ ಜಾಗತಿಕ ಯುದ್ಧಕ್ಕೆ ಕಾರಣವಾದವು.
2. ಪ್ಯಾರಿಸ್ ಒಪ್ಪಂದವನ್ನು ಕುರಿತು ವಿಮರ್ಶಾತ್ಮಕವಾಗಿ ಬರೆಯಿರಿ.

## 111.10 ಮಾದರಿ ಪ್ರಶ್ನೆಗಳು


1. G.A. Craig : Europe Since 1815
2. C.D. Hazen : Modern Europe since 1789
3. J.A.R. Marriot : A History of Europe


ಪ್ರೊ. ಶಿವಣ್ಣ

# ಟಿಪ್ಪಣಿಗಳು

# ಘಟಕ - 112

## 1917 ರ ರಷ್ಯಾದ ಕ್ರಾಂತಿ

*ರಚನೆ*

112.0 ಉದ್ದೇಶಗಳು

112.1 ಪೀಠಿಕೆ

112.2 ರಷ್ಯಾದ ಕ್ರಾಂತಿಗೆ ಕಾರಣಗಳು

- 112.2.1 ಝಾರರ ಆಡಳಿತ
- 112.2.2 ದಾರಿದ್ರ್ಯದಿಂದ ಕೂಡಿದ್ದ ರೈತರ ಮತ್ತು ಕಾರ್ಮಿಕ ವರ್ಗದವರ ದುಸ್ಥಿತಿ
- 112.2.3 ಬರಹಗಾರರ ಪಾತ್ರ
- 112.2.4 ನಿಹಿಲಿಸ್ಟರ ಪ್ರಭಾವ
- 112.2.5 ಆಡಳಿತದಲ್ಲಿ ರಾಣಿ ಮತ್ತು ರಾಸ್‌ಪುಟಿನ್‌ರವರ ಹಸ್ತಕ್ಷೇಪದ ದುಷ್ಪರಿಣಾಮ
- 112.2.6 ರಷ್ಯ ಯುದ್ಧಗಳಲ್ಲಿ ಅನುಭವಿಸಿದ ಅಪಜಯಗಳಿಂದಾದ ಪರಿಣಾಮಗಳು
- 112.2.7 ಕ್ರಾಂತಿಗೆ ತಕ್ಷಣದ ಕಾರಣ

112.3 1917 ರ ಫೆಬ್ರವರಿ ಕ್ರಾಂತಿ

- 112.3.1 ಕ್ರಾಂತಿಯ ಪ್ರಾರಂಭ
- 112.3.2 ಡೂಮಾದ ಪಾತ್ರ
- 112.3.3 ಕಾರ್ಮಿಕರ ಮತ್ತು ಸೈನಿಕರ ಸೋವಿಯತ್‌ಗಳ ಸ್ಥಾಪನೆ
- 112.3.4 ಎರಡನೆಯ ನಿಕೊಲಸ್‌ನು ಸಿಂಹಾಸನ ತ್ಯಜಿಸಿದುದು ಝಾರನ ಆಳ್ವಿಕೆಯ ಅಂತ್ಯ

112.4 ಹಂಗಾಮಿ ಸರ್ಕಾರ (Provisional Government)

- 112.4.1 ಹಂಗಾಮಿ ಸರ್ಕಾರದ ಸಮಸ್ಯೆಗಳು
- 112.4.2 ದ್ವಿಅಧಿಕಾರದ ಅಂತ್ಯ (End of Dual Potoes)
- 112.4.3 ಕಾರ್ನಿಲಾವ್ ಪ್ರಕರಣ

112.5 ಅಕ್ಟೋಬರ್ ಕ್ರಾಂತಿ ಅಥವಾ ಬೋಲ್ಷೆವಿಕ್ ಕ್ರಾಂತಿ

- 112.5.1 ಪೆಟ್ರೊಗ್ರಾಡ್‌ನಲ್ಲಿ ಅಕ್ಟೋಬರ್ ಕ್ರಾಂತಿ
- 112.5.2 ಲೆನಿನ್‌ನ ನೀತಿ ಮತ್ತು ಸೋವಿಯತ್‌ಗಳ ಸಭೆ
- 112.5.3 ಬೋಲ್ಷೆವಿಕ್‌ರನ್ನು ಪದಚ್ಯುತಿಗೊಳಿಸಲು ಕೆರೆನ್‌ಸ್ಕಿಯ ಹೋರಾಟ

112.5.4 ಮಾಸ್ಕೋದಲ್ಲಿ ಕ್ರಾಂತಿ

112.5.5 ಬೋಲ್ಷೆವಿಕ್‌ರ ಪ್ರಾರಂಭಿಕ ಸಮಸ್ಯೆಗಳು

112.5.6 ಬೋಲ್ಷೆವಿಕ್‌ರ ಹೊಸ ಕಾನೂನುಗಳು

112.5.7 ಬ್ರೆಸ್ಟ್ ಲಿಟೋವಸ್ಕ್ ಒಪ್ಪಂದ

112.5.8 ಶಾಸನಸಭೆಗೆ ಚುನಾವಣೆ ಹಾಗೂ ಚುನಾಯಿತ ಶಾಸನ ಸಭೆಯ ವಿಸರ್ಜನೆ

112.5.9 1918 ರ ಸೋವಿಯತ್ ರಾಜ್ಯಾಂಗ

112.6 ಆಂತರಿಕ ಯುದ್ಧ

112.7 ಸಂಕ್ಷಿಪ್ತ ಅವಲೋಕನ

112.8 ಮಾದರಿ ಪ್ರಶ್ನೆಗಳು

112.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 112.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ಈ ಕೆಳಕಂಡ ಅಂಶಗಳನ್ನು ಅರಿತುಕೊಳ್ಳುವಿರಿ.

* 1917 ರ ರಷ್ಯಾದ ಕ್ರಾಂತಿಗೆ ಕಾರಣಗಳು
* ಫೆಬ್ರವರಿ ಕ್ರಾಂತಿಯ ಪ್ರಾಮುಖ್ಯತೆ
* ರಾಜತ್ವದ ಆಳ್ವಿಕೆಯ ಅಂತ್ಯ
* ಹಂಗಾಮಿ ಸರ್ಕಾರದ ಸಾಧನೆಗಳು
* ಅಕ್ಟೋಬರ್ ಅಥವಾ ಬೋಲ್ಷೆವಿಕ್ ಕ್ರಾಂತಿಯ ಪ್ರಾರಂಭ
* ಪೆಟ್ರೋಗ್ರಾಡ್ ಮತ್ತು ಮಾಸ್ಕೊದಲ್ಲಿ ಬೊಲ್ಷೆವಿಕ್‌ನ ಅಧಿಕಾರದ ಸ್ಥಾಪನೆ
* ರಷ್ಯಾದಲ್ಲೆಲ್ಲಾ ಬೋಲ್ಷೆವಿಕ್ ಕ್ರಾಂತಿಯ ಹರಡುವಿಕೆ
* ಕ್ರಾಂತಿಯಲ್ಲಿ ಲೆನಿನ್, ಟ್ರಾಟ್‌ಸ್ಕಿ, ಟಾಲ್‌ಸ್ಟಾಯ್ ಮೊದಲಾದವರ ಪಾತ್ರ
* ಸೋವಿಯತ್‌ಗಳ ಮಹಾಸಭೆ ಹಾಗೂ ಲೆನಿನ್ ಪತನ
* ಕೆರೆನ್‌ಸ್ಕಿಯ ಪತನ
* ಬೋಲ್ಷೆವಿಕ್‌ರಿಗೆ ಎದುರಾದ ಸಮಸ್ಯೆಗಳು
* ಬೋಲ್ಷೆವಿಕರ್‌ರು ಹೊರಡಿಸಿದ ಹೊಸ ಕಾನೂನುಗಳು
* ಬೋಲ್ಷೆವಿಕ್‌ರು ಮೊದಲನೆಯ ಮಹಾಯುದ್ಧವನ್ನು ಅಂತ್ಯಗೊಳಿಸಿ ಜರ್ಮನಿಯೊಡನೆ ಮಾಡಿಕೊಂಡ ಬ್ರೆಸ್ಟ್ ಲಿಟೋವೆಸ್ಕ್ ಒಪ್ಪಂದ
* 1918 ರಲ್ಲಿ ಹೊಸ ರಾಜ್ಯಾಂಗ ರಚಿಸಲು ಕೈಗೊಂಡ ಕ್ರಮಗಳು - ರಷ್ಯಾವನ್ನು R.S.F.S.R. ಎಂದು ನಾಮಕರಣ ಮಾಡಿದುದರ ಬಗ್ಗೆ
* ಆಂತರಿಕ ಯುದ್ಧದ ಪ್ರಾರಂಭ ಅಥವಾ ಬೋಲ್ಷೆವಿಕ್‌ರು ಮತ್ತು ಬಂಡವಾಳಶಾಯಿಗಳ ನಡುವಣ ಹೋರಾಟ
* 1921 ರ ಒಳಗೆ ಆಂತರಿಕ ಯುದ್ಧದ ಅಂತ್ಯ ರಷ್ಯಾದಲ್ಲಿ ಶಾಂತಿಯ ಸ್ಥಾಪನೆ
* ರಷ್ಯಾವನ್ನು (RSFSR) U.S.S.R ಎಂದು 1922 ರಲ್ಲಿ ನಾಮಕರಣ ಮಾಡಿದುದರ ಬಗ್ಗೆ

## 112.2 ರಷ್ಯಾದ ಕ್ರಾಂತಿಗೆ ಕಾರಣಗಳು

ರಷ್ಯಾದ 1917 ರ ಕ್ರಾಂತಿಯು ಫ್ರಾನ್ಸಿನ ಮಹಾಕ್ರಾಂತಿಯ ರೀತಿಯೆ ಪ್ರಂಪಚದ ಆಧುನಿಕ ಇತಿಹಾಸದ ಬಹುಮುಖ್ಯವಾದ ಘಟನೆಗಳಲ್ಲೊಂದಾಗಿದೆ. ರಷ್ಯಾದಲ್ಲಿ ಕ್ರಾಂತಿಯು ಒಂದನೆಯ ಜಾಗತಿಕ ನಡೆಯುತ್ತಿದ್ದ ಸಮಯದಲ್ಲೇ ಪ್ರಾರಂಭವಾಯಿತು. ಈ ಯುದ್ಧದಲ್ಲಿ ರಷ್ಯ ಅಪಮಾನಕರವಾದ ಸೋಲನ್ನನುಭವಿಸಿತು. ಆದರೆ ಈ ಅಪಜಯವೇ ಈ ಕ್ರಾಂತಿಗೆ ಕಾರಣವೆಂದು ಹೇಳಲು ಸಾಧ್ಯವಿಲ್ಲ. ಈ ಕ್ರಾಂತಿಗೆ ತಲತಲಾಂತರದಿಂದ ಬೆಳೆದು ಬಂದಿದ್ದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳೇ ಕಾರಣವೆಂದು ಹೇಳಬಹುದು. ಆದರೆ ಒಂದನೆಯ ಮಹಾಯುದ್ಧ ಈ ವ್ಯವಸ್ಥೆಗಳ ಪರಿಸ್ಥಿತಿ ಹದಗೆಡುವುದಕ್ಕೆ ಕಾರಣವಾಯಿತು. ಯಾವುದೇ ಒಂದು ಪ್ರಬಲ ಕಾರಣಕ್ಕಿಂತ ಅನೇಕ ಕಾರಣಗಳು ಒಟ್ಟಿಗೆ ಈ ಕ್ರಾಂತಿಗೆ ಕಾರಣವೆಂದು ವಿವರಿಸಬಹುದು. ಆದ್ದರಿಂದ ಈ ಅನೇಕ ಕಾರಣಗಳ ಬಗ್ಗೆ ಚರ್ಚಿಸುವುದು ಅವಶ್ಯಕವಾಗಿದೆ.

### 112.2.1 ಝಾರರ ಆಡಳಿತ

ಝಾರ್‌ಗಳ ಆಡಳಿತ ವೈಖರಿಯು ಕೂಡ ರಷ್ಯಾದ ಕ್ರಾಂತಿಗೆ ಒಂದು ಪ್ರಮುಖ ಕಾರಣವಾಯಿತು. ಝಾರ್‌ಗಳು ನಿರಂಕುಶ ಆಡಳಿತ ನಡೆಸಿ ರಷ್ಯಾದ ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳಿಗೆ ಯಾವ ರೀತಿಯಾದ ಕ್ರಮಗಳನ್ನು ಕೈಗೊಳ್ಳಲಿಲ್ಲ. ಅವರು ನಿರಂಕುಶ ಪ್ರಭುಗಳಾಗಿ ಆಡಳಿತ ನಡೆಸಿದುದೇ ರಷ್ಯಾದ ಮುನ್ನಡೆಗೆ ಧಕ್ಕೆ ಉಂಟಾಯಿತು. ಯಾವ ಝಾರನು ಕೂಡ ರಷ್ಯಾದಲ್ಲಿ ಸುಧಾರಣೆಗಳನ್ನು ತರಲು ಪ್ರಯತ್ನಿಸಲಿಲ್ಲ. ಅವರಿಗೆ ಜನತೆಯ ಏಳಿಗೆ ಬೇಕಾಗಿರಲಿಲ್ಲ. ಅವರಿಗೆ ಅವರ ನಿರಂಕುಶ ಆಡಳಿತ ಮುಂದುವರಿದರೆ ಸಾಕಾಗಿತ್ತು. ಪೀಟರ್ ಮಹಾಶಯ ಮತ್ತು ಎರಡನೆಯ ಅಲೆಕ್ಸಾಂಡರ್ ಮಾತ್ರ ಅನೇಕ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಪ್ರಯತ್ನಪಟ್ಟರು. ಆದರೆ ಈ ಸುಧಾರಣೆಗಳು ಸಾಕಾಗಲಿಲ್ಲ. ಜನರು ಕ್ರಾಂತಿಕಾರ ಬದಲಾವಣೆಗಳನ್ನು ನಿರೀಕ್ಷಿಸುತ್ತಿದ್ದರು. ಝಾರರ ನಿರಂಕುಶ ಆಡಳಿತದಿಂದ ಜನರು ಬೇಸತ್ತಿದ್ದರು. ಅವರ ವರ್ತನೆಗೆ ಕಡಿವಾಣ ಹಾಕಲು ಯಾವುದೇ ಹೆಚ್ಚು ಅಧಿಕಾರ ಹೊಂದಿದ್ದ ಪ್ರತಿನಿಧಿ ಸಭೆ ಇರಲಿಲ್ಲ. ಸ್ಟೇಟ್ ಕೌನ್ಸಿಲ್ ಮತ್ತು ಡೂಮಗಳಿದ್ದುದು ಕೂಡ ಹೆಸರಿಗೆ ಮಾತ್ರ.

ಮಂತ್ರಿಗಳು ಮತ್ತು ಅಧಿಕಾರಿಗಳು ಝಾರರ ಸೇವಕರಂತೆ ಕೆಲಸ ನಿರ್ವಹಿಸುತ್ತಿದ್ದರು. ಅವರು ಬಡಜನತೆಯ ಆಶೋತ್ತರಗಳನ್ನು ಬದಿಗೊತ್ತಿ ಝಾರನ ಆದೇಶದಂತೆ ತಮ್ಮ ಕೆಲಸ ನಿರ್ವಹಿಸುತ್ತಿದ್ದರು. ಜನರಿಗೆ ಯಾವ ರೀತಿಯಾದ ಸ್ವಾತಂತ್ರ್ಯ ಇರಲಿಲ್ಲ. ಯಾರಾದರೂ ಝಾರನ ಆಡಳಿತವನ್ನು ವಿರೋಧಿಸಿದರೆ ಅಂತಹವರಿಗೆ ಗಲ್ಲು ಶಿಕ್ಷೆ ಗಡಿಪಾರು ಅಥವಾ ಸೆರೆಮನೆಗೆ ತಳ್ಳಲಾಗುತ್ತಿತ್ತು. ಇಪ್ಪತ್ತನೆಯ ಶತಮಾನದ ವೇಳೆಗೆ ಯುರೋಪಿನ ಬಹುತೇಕ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಆದರೆ ರಷ್ಯಾದಲ್ಲಿ ಇನ್ನೂ ನಿರಂಕುಶ ಪ್ರಭುತ್ವ ಹೆಚ್ಚು ಪ್ರಬಲವಾಗಿತ್ತು.

ಕೊನೆಯ ಝಾರ್‌ಗಳ ಆಳ್ವಿಕೆ ಕಾಲದಲ್ಲಿ ನಿರಂಕುಶ ಪ್ರಭುತ್ವ ರಷ್ಯಾದಲ್ಲಿ ಪರಕಾಷ್ಠತೆಯನ್ನು ಮುಟ್ಟಿತು. ಅದರಲ್ಲೂ ವಿಶೇಷವಾಗಿ ಮೂರನೆಯ ಅಲೆಕ್ಸಾಂಡರ್ ಮತ್ತು ಎರಡನೆಯ ನಿಕೊಲಸ್ ನಿರೀಕ್ಷೆಗೂ ಮೀರಿದ ರೀತಿಯಲ್ಲಿ ನಿರಂಕುಶ ಪ್ರಭುಗಳಾಗಿ ವರ್ತಿಸಿದರು. ಅವರು ಕಾಲಧರ್ಮಕ್ಕೆ ವಿರುದ್ಧವಾಗಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರು. ಇವರೀರ್ವರು ಹೆಚ್ಚು ದಬ್ಬಾಳಿಕೆಯಿಂದ ವರ್ತಿಸಿ ಕ್ರೂರವಾಗಿ ನಡೆದುಕೊಂಡರು. ಅವರು ಪ್ರಜಾಪ್ರಭೂತ್ವದ ಕಡು ವಿರೋಧಿಗಳಾಗಿದ್ದರು. ಆದರೆ ಜನತೆ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಹಾತೊರೆದರು. ಪ್ರಜಾಪ್ರಭುತ್ವದ ಸ್ಥಾಪನೆಗೆ ಹೋರಾಟ ನಡೆಸುತ್ತಿದ್ದವರನ್ನು ಸೆರೆಮನೆಗೆ ಕಳುಹಿಸಿದರು. ವಿಶ್ವವಿದ್ಯಾನಿಲಯಗಳ ಸ್ವಯಂ ಅಧಿಕಾರವನ್ನು ಕಿತ್ತುಹಾಕಲಾಯಿತು. ಪತ್ರಿಕೆಗಳ ಸ್ವಾತಂತ್ರ್ಯವನ್ನು ಕಡಿತಗೊಳಿಸಿ ನಿರ್ಬಂಧ ಹೇರಲಾಯಿತು. ಹಾಗೂ ನಿಯತಕಾಲಿಕೆಗಳನ್ನು, ವಿದ್ಯಾರ್ಥಿ ಸಂಘಗಳನ್ನು ನಿಷೇಧಿಸಲಾಯಿತು. ಸರ್ಕಾರ ವಿರೋಧಿ ಪತ್ರಿಕೆಗಳನ್ನು ಪ್ರಕಟ ಮಾಡದಂತೆ ಕ್ರಮ ಕೈಗೊಳ್ಳಲಾಯಿತು. ಧಾರ್ಮಿಕ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದವರಿಗೆ ಸರ್ಕಾರ ಕಿರುಕುಳ ಕೊಡಲು ಪ್ರಾರಂಭಿಸಿತು. ಕ್ರಾಂತಿಯು ಪ್ರಾರಂಭವಾಗುವುದಕ್ಕೆ ಮುಂಚೆ ನಿರಂಕುಶ ಪ್ರಭುತ್ವ ಇನ್ನೂ ಹೆಚ್ಚು ಸತ್ವದಿಂದ ಕೂಡಿತ್ತು. ಭ್ರಷ್ಟಾಚಾರ, ಅಸಮರ್ಥತೆ, ಸ್ವಾರ್ಥ, ಅಧಿಕಾರಿಗಳಲ್ಲಿ ತುಂಬಿ ತುಳುಕಾಡುತ್ತಿತ್ತು. ಎರಡನೆಯ ನಿಕೊಲಸ್‌ನ ರಾಣಿ ಅಲೆಕ್ಸಾಂಡ್ರ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತ ಹದಗೆಡುವುದಕ್ಕೆ ಕಾರಣಳಾದಳು.

### 112.2.2 ದಾರಿದ್ರ್ಯದಿಂದ ಕೂಡಿದ್ದ ರೈತರ ಮತ್ತು ಕಾರ್ಮಿಕ ವರ್ಗದವರ ಸ್ಥಿತಿ

ರೈತರ ಮತ್ತು ಕಾರ್ಮಿಕರ ದಾರಿದ್ರ್ಯ ಸ್ಥಿತಿಗತಿಗಳು 1917 ರ ಕ್ರಾಂತಿಗೆ ಕಾರಣವಾದ ಮತ್ತೊಂದು ಪ್ರಬಲ ಅಂಶ. ರಷ್ಯಾದಲ್ಲಿ ಇಪ್ಪತ್ತನೆಯ ಶತಮಾನ ಪ್ರಾರಂಭವಾದರೂ ರೈತರ ಜೀವನ ಮಟ್ಟದಲ್ಲಿ ಯಾವ ಬದಲಾವಣೆಯು ಕಾಣಲಿಲ್ಲ. ಊಳಿಗಮಾನ್ಯ ಪದ್ಧತಿ ರಷ್ಯಾದಲ್ಲಿ ಮುಂದುವರಿಯಿತು. ಶ್ರೀಮಂತರು ರೈತರ ಶೋಷಣೆಯನ್ನು ಮುಂದುವರಿಸಿದರು. ಮೂರನೆಯ ಒಂದು ಭಾಗದಷ್ಟು ರೈತರು ಯಾವ ಭೂಮಿಯನ್ನು ಹೊಂದಿರಲಿಲ್ಲ. ವ್ಯವಸಾಯಕ್ಕೆ ಬೇಕಾದ ಉಪಕರಣಗಳು ಕೂಡ ಇರಲಿಲ್ಲ. ಕೆಲವು ರೈತರು ಹೊಂದಿದ್ದ ಭೂಮಿಯು ಕೂಡ ಸಣ್ಣ ಪ್ರಮಾಣದ್ದಾಗಿತ್ತು. ಬಡ ರೈತರು ತಾವು ಬೆಳೆದುದರಲ್ಲಿ ಅರ್ಧ ಭಾಗವನ್ನು ಶ್ರೀಮಂತರಿಗೆ ಕೊಡಬೇಕಾಗಿತ್ತು. ವ್ಯವಸಾಯ ಪದ್ಧತಿಯಲ್ಲಿಯೂ ಯಾವ ಬದಲಾವಣೆ ಉಂಟಾಗಿರಲಿಲ್ಲ. ಗುಲಾಮಗಿರಿಯನ್ನು ತೊಡೆದುಹಾಕಲು 1861 ರಲ್ಲೇ ಒಂದು ಶಾಸನವನ್ನು ಹೊರಡಿಸಿದ್ದರು ಕೂಡ ಅದು ಸಂಪೂರ್ಣವಾಗಿ ರಷ್ಯಾದಲ್ಲಿ ಕೊನೆಗೊಂಡಿರಲಿಲ್ಲ. ಇನ್ನೂ ಅಧಿಕ ಸಂಖ್ಯೆಯಲ್ಲಿ ಗುಲಾಮರು ಇದ್ದರು. ಸ್ಟೋಲಿಪಿನ್ನನ ಭೂ ಸುಧಾರಣೆಗಳು ಕೂಡ ರೈತರ ಸ್ಥಿತಿಗಳಲ್ಲಿ ಹೆಚ್ಚಿನ ಸುಧಾರಣೆಯನ್ನು ತರುವುದರಲ್ಲಿ ಯಶಸ್ವಿಯಾಗಲಿಲ್ಲ.

ಕಾರ್ಮಿಕ ವರ್ಗದವರ ಸ್ಥಿತಿಗತಿಯು ಕೂಡ ಅಷ್ಟೇ ಚಿಂತಾಜನಕವಾಗಿತ್ತು. ಕೈಗಾರಿಕಾಕರಣದಿಂದಾಗಿ ಅನೇಕ ಕಾರ್ಖಾನೆಗಳು ಪ್ರಾರಂಭವಾದವು. ಅನೇಕ ರೈತರು ಹಳ್ಳಿಗಳಿಂದ ವಲಸೆ ಬಂದು ಕಾರ್ಖಾನೆಗಳಲ್ಲಿ ದುಡಿಯಲು ಪ್ರಾರಂಭಿಸಿದರು. ಯುರೋಪಿನ ರಾಷ್ಟ್ರಗಳೊಡನೆ ಹೋಲಿಸಿದಾಗ ಕೈಗಾರಿಕೆಗಳ ಉತ್ಪತ್ತಿ ತುಂಬಾ ಕಡಿಮೆ ಇತ್ತು. ಕೈಗಾರಿಕೆಯ ಉತ್ಪಾದನೆಯಲ್ಲಿ ಹಿಂದುಳಿದ್ದುದು ರಷ್ಯಾದ ಸೈನಿಕ ದುರ್ಬಲತೆಗೂ ಕಾರಣವಾಯಿತು. ಕೈಗಾರಿಕೋದ್ಯಮಿಗಳು ಕಡಿಮೆ ಸಂಬಳ ನೀಡುವುದರ ಮೂಲಕ ಹಾಗೂ ಹೆಚ್ಚು

ಗಂಟೆಗಳ ಕಾಲ ದುಡಿಸಿಕೊಳ್ಳುವುದರ ಮೂಲಕ ಶೋಷಣೆಗೊಳಪಡಿಸಿದರು. ಕಾರ್ಮಿಕರಿಗೆ ಯಾವ ರೀತಿಯಾದ ರಕ್ಷಣೆಯೂ ಇರಲಿಲ್ಲ. ಆರೋಗ್ಯಕರವಲ್ಲದ ಪರಿಸ್ಥಿತಿಯಲ್ಲಿ ಅವರು ಕೆಲಸ ಮಾಡಬೇಕಾಗಿತ್ತು. ಕೊಳೆಗೇರಿಗಳಲ್ಲಿ ಅವರು ವಾಸಮಾಡಬೇಕಾಗಿತ್ತು. ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಹೋರಾಟ ನಡೆಸುವುದಕ್ಕೆ ಯಾವುದೇ ಕಾರ್ಮಿಕ ಸಂಘಗಳನ್ನು ಸ್ಥಾಪಿಸಿಕೊಳ್ಳುವ ಅಧಿಕಾರವಿರಲಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಕೂಡಿದ್ದ ಕಾರ್ಮಿಕರು ದೊಡ್ಡ ದೊಡ್ಡ ನಗರಗಳು ಮತ್ತು ಪಟ್ಟಣಗಳಲ್ಲಿ ವಾಸಮಾಡುತ್ತಿದ್ದರು. ಇನ್ನೊಂದು ರೀತಿ ಕಾರ್ಮಿಕ ವರ್ಗದವರಿಗೆ ಹಾಗೂ ಬೋಲ್ಶೆವಿಕ್‌ರಿಗೆ ಅನುಕೂಲವೇ ಆಯಿತು. ಕ್ರಾಂತಿಯ ಸಮಯದಲ್ಲಿ ಒಗ್ಗಟ್ಟಾಗಿ ಹೋರಾಟ ನಡೆಸಲು ಅನುಕೂಲವಾಯಿತು. ಬೋಲ್ಶೆವಿಕ್‌ರ ಹೋರಾಟ ಮಾಡಲು ಅನುಕೂಲವಾಯಿತು. ಪೆಟ್ರೋಗ್ರಾಡ್ ಒಂದರಲ್ಲೇ ಲಕ್ಷಾಂತರ ಮಂದಿ ಕೆಲಸಗಾರರಿದ್ದುದರಿಂದ ಹಂಗಾಮಿ ಸರ್ಕಾರವನ್ನು ಉರುಳಿಸುವುದಕ್ಕೆ ಬೋಲ್ಶೆವಿಕ್‌ರಿಗೆ ಅನುಕೂಲವಾಯಿತು.

### *112.2.3 ಬರಹಗಾರರ ಪಾತ್ರ*

ಫ್ರಾನ್ಸಿನ ಮಹಾಕ್ರಾಂತಿಯ ರೀತಿಯಲ್ಲಿಯೇ 1917 ರ ರಷ್ಯಾದ ಕ್ರಾಂತಿಯಲ್ಲಿಯು ಕೂಡ ಬರಹಗಾರರು ಜನರನ್ನು ಪ್ರೇರೇಪಿಸಿ ಕ್ರಾಂತಿಗೆ ಧುಮುಕುವಂತೆ ಮಾಡಲು ಕಾರಣರಾದರು. ಸರ್ಕಾರದ ಭ್ರಷ್ಟಾಚಾರ, ನಿರಂಕುಶ ಆಡಳಿತ ಮತ್ತು ದಬ್ಬಾಳಿಕೆಯ ಬಗ್ಗೆ ಲೇಖನಗಳನ್ನು ಬರೆದು ಪ್ರಕಟಿಸಿದರು. ಅಂದಿನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿದ್ದ ಲೋಪದೋಷಗಳ ಬಗ್ಗೆ ತಮ್ಮ ಬರಹಗಳ ಮೂಲಕ ಸಾರ್ವಜನಿಕರ ಗಮನವನ್ನು ಸೆಳೆದರು. ಟಾಲ್‌ಸ್ಟಾಯ್, ಮ್ಯಾಕ್ಸಿಮ್‌ಗಾರ್ಕಿ, ಟರ್ಗನೇವ್ ರೈತರ ಕರ್ಮಕಾಂಡವನ್ನು ಮತ್ತು ಸಾಮಾಜಿಕ ಜೀವನದ ಲೋಪದೋಷಗಳನ್ನು ತಮ್ಮ ಗ್ರಂಥಗಳಲ್ಲಿ ಚಿತ್ರಿಸಿದರು. ಆದರೆ ಸಮಾಜವಾದದ ಪಿತಾಮಹನೆನಿಸಿರುವ ಕಾರ್ಲ್ ಮಾರ್ಕ್ಸ್‌ನ ಗ್ರಂಥಗಳು ಕ್ರಾಂತಿಕಾರರಿಗೆ ಹೆಚ್ಚು ಸ್ಫೂರ್ತಿ ನೀಡಿದವು. ಕ್ರಿ.ಶ. 1853 ರಲ್ಲಿ ಮಾರ್ಕ್ಸ್ ರಾಜಕೀಯ ಜೀವನದಿಂದ ನಿವೃತ್ತಿ ಹೊಂದಿ ಲಂಡನ್‌ಗೆ ತೆರಳಿ ಅಲ್ಲಿಯ ಬ್ರಿಟಿಷ್ ಮ್ಯೂಸಿಯಂನ ಗ್ರಂಥಾಲಯದಲ್ಲಿ ಅಧ್ಯಯನ ಮತ್ತು ಬರವಣಿಗೆಯನ್ನು ಮುಂದುವರಿಸಿದನು. ಸುಮಾರು ಒಂದು ದಶಕದ ಬಗ್ಗೆ ಅಧ್ಯಯನ ನಡೆಸಿ ತನ್ನದೇ ಆದ ಅಭಿಪ್ರಾಯವನ್ನು ರೂಪಿಸಿಕೊಂಡನು. 1867 ರಲ್ಲಿ ಬಂಡವಾಳಕ್ಕೆ ಸಂಬಂಧಪಟ್ಟ ಹಾಗೆ ಮೊದಲ ಸಂಪುಟವನ್ನು ಹೊರತಂದನು. ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಉಳಿದ ಎರಡು ಗ್ರಂಥಗಳನ್ನು ರಚಿಸಲು ತನ್ನ ಜೀವಿತದ ಉಳಿದ ಕಾಲವನ್ನು ಮುಡುಪಾಗಿಟ್ಟನು. ಅವನ ಮರಣಾನಂತರ ಏಂಜೆಲ್ಸ್ ಈ ಗ್ರಂಥಗಳನ್ನು ಪ್ರಕಟಿಸಿದನು. ಈ ಮೂಲ ಗ್ರಂಥಗಳು 'ಬಂಡವಾಳಶಾಹಿ' ಪದ್ಧತಿಗೆ ಸಂಬಂಧಪಟ್ಟವುಗಳಾಗಿದ್ದವು. ಅವನು ಆರ್ಥಿಕ ಪದ್ದತಿ ಮತ್ತು ಆಧುನಿಕ ಬಂಡವಾಳ ಪದ್ಧತಿಯ ಬಗ್ಗೆ ಹೆಚ್ಚು ವಿವರಣೆಯನ್ನು ಈ ಗ್ರಂಥಗಳಲ್ಲಿ ತಿಳಿಸಿದ್ದಾನೆ. ಮುಖ್ಯವಾಗಿ ಕಾರ್ಲ್ ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ರಷ್ಯನ್ನರ ಮೇಲೆ ಹೆಚ್ಚು ಪ್ರಭಾವ ಬೀರಿತು. ಲೆನಿನ್, ಸ್ಟಾಲಿನ್, ಟ್ರಾಟ್ಸ್ಕಿಯವರು ಈ ಗ್ರಂಥದಿಂದ ಹೆಚ್ಚು ಪ್ರಭಾವಿತಗೊಂಡರು. ಈ ಗ್ರಂಥದಲ್ಲಿ ಕಾರ್ಲ್‌ಮಾರ್ಕ್ಸ್ ಬಂಡವಾಳಶಾಹಿ ಪದ್ಧತಿಯಿಂದ ಉಂಟಾಗುತ್ತಿದ್ದ ಕೆಡಕುಗಳನ್ನು ಮತ್ತು ಬಂಡವಾಳಶಾಹಿಗಳು ಯಾವ ರೀತಿ ಶ್ರಮಜೀವಿಗಳನ್ನು ಶೋಷಣೆ ಮಾಡುತ್ತಾರೆ ಎಂಬುದನ್ನು ಚೆನ್ನಾಗಿ ವಿವರಿಸಿರುವನು. ಅವನು ಬಂಡವಾಳ ಮತ್ತು ಶ್ರಮದ ಮಧ್ಯೆ ಒಂದು ವರ್ಗ ಸೃಷ್ಟಿಯಾಗುವುದೆಂದು ನುಡಿದನು. ಅದೇ ಪ್ರೊಲಿಟೇರಿಯಟ್ (Proletariat) ಅಥವಾ ಶ್ರಮ ಜೀವಿಗಳ ವರ್ಗ ಎಂದು ಹೇಳಿದನು. ಅವನು ಬಂಡವಾಳಶಾಹಿ ಪದ್ಧತಿ ಆಧಾರದ ಮೇಲೆ ನಿಂತಿರುವ ಸಮಾಜವನ್ನು ನಿರ್ಮೂಲ ಮಾಡಿ ಶ್ರಮಜೀವಿಗಳ ಸರ್ವಾಧಿಕಾರತ್ವವನ್ನು ಸ್ಥಾಪಿಸಲಾಗುವುದೆಂದು ಹೇಳಿದನು.

ರಷ್ಯಾದ ಕ್ರಾಂತಿಯ ಶಿಲ್ಪಿ ಲೆನಿನ್ ಕಾರ್ಲ್ ಮಾರ್ಕ್ಸ್‌ನ ಉತ್ಸಾಹಪೂರಿತ ಅನುಯಾಯಿಯಾಗಿದ್ದನು. ಆದರೆ ಲೆನಿನ್‌ನ ಕ್ರಾಂತಿಗೆ ಮಾರ್ಗದರ್ಶಕವಾಗಿ ಯಾವ ಪುಸ್ತಕವೂ ಇರಲಿಲ್ಲ. ಮಾರ್ಕ್ಸ್ ಒಂದು ತತ್ವ ನೀಡಿದನು. ಆದರೆ ಇಡೀ ಮಾರ್ಕ್ಸ್ ಸಿದ್ಧಾಂತವನ್ನು ರಷ್ಯಾದಲ್ಲಿ ಜಾರಿಗೆ ತರುವುದು ಸಾಧ್ಯವಿರಲಿಲ್ಲ. ಆದುದರಿಂದ ಮಾರ್ಕ್ಸ್‌ನ ಸಿದ್ಧಾಂತಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ರಷ್ಯಾದ ಸಮಾಜಕ್ಕೆ ಹೊಂದುವಂತೆ ಅಳವಡಿಸಿಕೊಂಡನು. ಮಾರ್ಕ್ಸ್ ಕಾರ್ಮಿಕರಲ್ಲಿ ವರ್ಗದ ಬೆಳವಣಿಗೆಗೆ ಹೆಚ್ಚು ಮಹತ್ವ ನೀಡಿದನು. ಆದರೆ ಲೆನಿನ್ ಪಕ್ಷದ ರಚನೆಗೆ ಹೆಚ್ಚು ಮಹತ್ವ ನೀಡಿದನು. ಲೆನಿನ್ ಒಂದು ಸುವ್ಯವಸ್ಥಿತ ಮತ್ತು ಸಮರ್ಥ ಪಕ್ಷವಿಲ್ಲದೆ ಕ್ರಾಂತಿಯು ಸಾಧ್ಯವಾಗುವುದಿಲ್ಲವೆಂದು 1902 ರಲ್ಲಿ ತನ್ನ ಅಭಿಪ್ರಾಯವನ್ನು ಪ್ರಕಟಿಸಿದನು. 'What is to be done' (ಏನು ಮಾಡಬೇಕಾಗಿದೆ) ಎಂಬ ಲಘು ಗ್ರಂಥವನ್ನೂ ಲೆನಿನ್ ರಚಿಸಿದನು. ಈ ಗ್ರಂಥದಲ್ಲಿ ರಾಜಕೀಯದಲ್ಲಿ ಹೆಚ್ಚು ಅನುಭವ ಹೊಂದಿದ್ದ ಪಕ್ಷದ ಸದಸ್ಯರಿಗೆ ಶ್ರಮಜೀವಿಗಳನ್ನು ಸಂಘಟಿಸುವಂತೆ ತಿಳಿಸಿದನು. ಅವನ ಮತ್ತೊಂದು ಪುಸ್ತಕ 'State and Revolution' (ರಾಜ್ಯ ಮತ್ತು ಕ್ರಾಂತಿ) ಕ್ರಾಂತಿಗೆ ಒಂದು ಮಾರ್ಗದರ್ಶವಾಯಿತು.

ಲಿಯೊ ಟಾಲ್‌ಸ್ಟಾಯ್ ಅವರ ಯುದ್ಧ ಮತ್ತು ಶಾಂತಿ (War and Peace) ಪುನರುತ್ಥಾನ (Resurrection) ಅನ್ನಾ ಕರೇನಿನ ಪ್ರಮುಖ ಗ್ರಂಥಗಳು. ಸಮರ ಮತ್ತು ಶಾಂತಿ 1866 ರಲ್ಲಿ ರಚಿತವಾಯಿತು. ಈ ಗ್ರಂಥ ಮುಖ್ಯವಾಗಿ 5 ಕುಟುಂಬಗಳ (ಅಥವಾ ಐದು ಪಂಗಡಗಳ) ಜೀವನದ ಬಗ್ಗೆ ವಿವರಿಸುತ್ತದೆ. ಅವರುಗಳ ನಡುವಿನ ಹೋರಾಟವನ್ನು ವಿವರಿಸಿರುವನು. ಟಾಲ್‌ಸ್ಟಾಯ್ ಅವರ ಮತ್ತೊಂದು ಅಮೂಲ್ಯ ಕೃತಿ 'ಅನ್ನಕರೇನಿನ' ಒಬ್ಬ ಸ್ತ್ರೀಯ ಬಗ್ಗೆ ಮತ್ತು ಅವಳು ಅದೋಗತಿಗಿಳಿದಾಗ ಸಮಾಜ ಹೇಗೆ

ನೋಡುತ್ತದೆ ಎಂಬುದನ್ನು ವಿವರಿಸಿರುವನು. ಸಮಾಜ ಅವಳನ್ನು ಕೆಟ್ಟ ದೃಷ್ಟಿಯಿಂದ ನೋಡಿದರೂ ಟಾಲ್‌ಸ್ಟಾಯ್ ಮಾತ್ರ ಕರುಣೆಯಿಂದ ಅವಳ ಜೀವನದ ಬಗ್ಗೆ ಮರುಕಪಟ್ಟಿದ್ದಾರೆ.

### 112.2.4 ನಿಹಿಲಿಸ್ಟರ ಪ್ರಭಾವ (Influence Nihilists)

ಮೈಕೇಲ್ ಬಕುನಿನ ಕ್ರಾಂತಿಕಾರ ಸಿದ್ಧಾಂತಗಳಿಗೆ ಯುರೋಪಿನಲ್ಲಿ ಪ್ರಸಿದ್ಧಿಯಾಗಿದ್ದ ವ್ಯಕ್ತಿ. ಅವನ ಅನುಯಾಯಿಗಳನ್ನು ನಿಹಿಲಿಸ್ಟರು ಎಂದು ವಿವರಿಸಲಾಗಿದೆ. ಯಾವುದು ಕೂಡ ಸಮಾಜದಲ್ಲಿ ಇದ್ದ ಹಾಗೆ ಇರಬಾರದೆಂಬ ವಾದ ಇವರದಾಗಿತ್ತು. ಆದ್ದರಿಂದ ಇವರನ್ನು ನಿಹಿಲಿಸ್ಟರು ಎಂದು ಕರೆಯಲಾಯಿತು. ಝಾರನ ಪ್ರಗತಿ ವಿರೋಧಿ ನೀತಿಗಳು ರಷ್ಯಾದ ಜನತೆಗೆ ಆಶಾಭಂಗ ಮತ್ತು ವ್ಯಥೆಯನ್ನು ತಂದವು. ಇಂತಹ ನೀತಿಗಳಿಂದ ಆಶಾಭಂಗ ಹೊಂದಿದ್ದ ಪ್ರಾಜ್ಞರು ವಿನಾಶಕಾರಕ ವಿಮರ್ಶಾತ್ಮಕರಾದರು. ಅವರು ಉಗ್ರಗಾಮಿಗಳಾಗಿದ್ದರು. ಅವರು ಮಾನವನಿಗೆ ಸಂಬಂಧಪಟ್ಟ ಸಂಸ್ಥೆಗಳನ್ನು ತರ್ಕಬದ್ಧವಾಗಿ ಅಳೆಯಲು ಪ್ರಾರಂಭಿಸಿದರು. ಅವರಿಗೆ ರಷ್ಯಾದಲ್ಲಿದ್ದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳು ಅವರು ಅನುಸರಿಸಿದ ಅಳತೆಗೋಲಿಗೆ ಸರಿಯಾಗಿರಲಿಲ್ಲ. ಆದುದರಿಂದ ಈ ಹಳೆಯ ವ್ಯವಸ್ಥೆಗಳನ್ನು ನಾಶಗೊಳಿಸಿ ಅವುಗಳ ಮೇಲೆ ಹೊಸ ವ್ಯವಸ್ಥೆಗಳನ್ನು ತರಬೇಕೆಂದು ವಾದಿಸಿದರು. ಅವರ ಪ್ರಕಾರ ಝಾರನ ಆಡಳಿತವನ್ನು ಕೊನೆಗೊಳಿಸಿ ಹೊಸ ವ್ಯವಸ್ಥೆಯನ್ನನು ರಷ್ಯಾದಲ್ಲಿ ಸ್ಥಾಪಿಸಬೇಕೆಂದು ಹೇಳಿದರು. ಆದ್ದರಿಂದ ಇವರಿಗೆ ನಿಹಿಲಿಸ್ಟರು ಎಂಬ ಹೆಸರು ಬಂದಿತು. ಅವರು ಹಳೆಯ ವ್ಯವಸ್ಥೆಯ ಅವಶೇಷಗಳ ಮೇಲೆ ಶ್ರಮಜೀವಿಗಳ ಸಾಮ್ರಾಜ್ಯವನ್ನು ಕಟ್ಟಬೇಕೆಂದು ಹೇಳಿದರು. ಆದುದರಿಂದ ಸರ್ಕಾರ ಇವರನ್ನು ಬಹಳ ಅಪಾಯಕಾರಿ ವ್ಯಕ್ತಿಗಳೆಂದು ಘೋಷಿಸಿತು. ಅವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಅನೇಕರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಲಾಯಿತು. ಅನೇಕರನ್ನು ಕೊಲ್ಲಲಾಯಿತು. ಉಳಿದ ಕೆಲವು ಮಂದಿ ವಿದೇಶಗಳಿಗೆ ಪಲಾಯನ ಮಾಡಿದರು. ಆದರೆ ನಿಹಿಲಿಸ್ಟರರು ವಿದೇಶಗಳಿಂದಲೇ ತಮ್ಮ ಚಟುವಟಿಕೆಗಳನ್ನು ಝಾರನ ವಿರುದ್ಧ ಮುಂದುವರಿಸಿದರು.

### 112.2.5 ಆಡಳಿತದಲ್ಲಿ ರಾಣಿ ಮತ್ತು ರಾಸ್‌ಪುಟಿನ್‌ರವರ ಹಸ್ತಕ್ಷೇಪದ ದುಷ್ಪರಿಣಾಮ

ಫ್ರಾನ್ಸಿನ ಮೇರಿ ಆಂಟಿಯೋನೆಟ್ ರೀತಿಯೆ ರಷ್ಯಾದ ಎರಡನೆಯ ನಿಕೊಲಸ್‌ನ ರಾಣಿ ಅಲೆಕ್ಸಾಂಡ್ರ ಆಡಳಿತದಲ್ಲಿ ಹಸ್ತಕ್ಷೇಪ ನಡೆಸಿದುದು ಕೂಡ ಪರಿಸ್ಥಿತಿಯು ಹದಗೆಡಲು ಕಾರಣವಾಯಿತು. ಝಾರನು ಮಂತ್ರಿಗಳ ವಿರೋಧವನ್ನು ಕಡೆಗಣಿಸಿ ಒಂದನೆಯ ಮಹಾಯುದ್ಧದ ಮುಖ್ಯ ಸೇನಾಪತಿಯ ಕೆಲಸವನ್ನು ವಹಿಸಿಕೊಂಡನು. ಆದರೆ ಝಾರನಿಗೆ ಯುದ್ಧ ನಿರ್ವಹಣೆಯ ಕಾರ್ಯದಲ್ಲಿ ಸಾಕಷ್ಟು ಅನುಭವವಿರಲಿಲ್ಲ. ಸೇನೆಯ ನಾಯಕತ್ವವನ್ನು ವಹಿಸಿಕೊಂಡಿದುದು ಯುದ್ಧ ಕಾಲದಲ್ಲಿ ಈತನು ಮಾಡಿದ ಮತ್ತೊಂದು ತಪ್ಪು. ಝಾರನು ಸೈನ್ಯದ ಮುಂದಾಳತ್ವವನ್ನು ವಹಿಸಿಕೊಂಡರು ಕೂಡ ರಷ್ಯಾದ ಸೈನ್ಯ ಯಶಸ್ಸನ್ನು ಪಡೆಯಲಿಲ್ಲ. ಆದರೆ ಇದೇ ವೇಳೆಗೆ ಝಾರನಿಗೆ ರಾಜಧಾನಿಯನ್ನು ನಡೆಯುತ್ತಿದ್ದ ಘಟನೆಗಳ ಬಗ್ಗೆ ಅರಿವೇ ಇರಲಿಲ್ಲ. ಅವನ ಮಂತ್ರಿಗಳ ಕಾರ್ಯನಿರ್ವಹಣೆ ಮತ್ತು ರಾಜಕೀಯ ಬೆಳವಣಿಗೆಗಳ ಬಗ್ಗೆ ಅವನಿಗೆ ಸರಿಯಾದ ಮಾಹಿತಿ ಆಗಿಂದಾಗ್ಗೆ ದೊರಕುತ್ತಿರಲಿಲ್ಲ. ಝಾರನು ಯುದ್ಧದಲ್ಲಿ ನಿರತನಾಗಿದ್ದಾಗ ಅವನ ರಾಣಿ ಮತ್ತು ರಾಸ್‌ಪುಟಿನ್ ಆಡಳಿತ ನಿರ್ವಹಣೆಯ ಅಧಿಕಾರವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದನು. ರಾಸ್‌ಪುಟಿನ್‌ನು ರಾಣಿಯ ಮೇಲೆ ಹೆಚ್ಚು ಪ್ರಭಾವ ಬೀರಿದನು. ರಾಸ್‌ಪುಟಿನ್‌ನ ಮಾತು ರಾಣಿಗೆ ವೇದ ವಾಕ್ಯವಾಗಿತ್ತು. ಸಾಮ್ರಾಜ್ಯದ ಅನೇಕ ಮುಖ್ಯ ವಿಷಯಗಳ ಬಗ್ಗೆ ರಾಸ್‌ಪುಟಿನ್‌ನು ನಿರ್ಧಾರ ತೆಗೆದುಕೊಳ್ಳುತ್ತಿದ್ದನು. ಅವನು ವಶೀಕರಣ ವಿದ್ಯೆಯಲ್ಲಿ ಹೆಚ್ಚು ಅನುಭವ ಹೊಂದಿದ್ದನು. ಆದ್ದರಿಂದ ರಾಣಿ ಸಂಪೂರ್ಣವಾಗಿ ಮಾರುಹೋಗಿದ್ದಳು. ಆದರೆ ಅವನು ನಡೆಸುತ್ತಿದ್ದ ವ್ಯವಹಾರ ಶ್ರೀಮಂತರಿಗಾಗಲಿ ಅಥವಾ ಜನತೆಗಾಗಲಿ ಹಿಡಿಸಲಿಲ್ಲ. ಅವನು ಅವಿದ್ಯಾವಂತನಾದರೂ ಆಸ್ಥಾನದಲ್ಲಿ ಅವನಿಗೆ ದೊರಕಿದ ಸ್ಥಾನಮಾನಗಳು ಯಾರಿಗೂ ದೊರಕಲಿಲ್ಲ. ರಷ್ಯಾದ ರಾಜಕೀಯ ಸೂತ್ರವನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದನು. ಅವನು ಶಿಫಾರಸ್ಸು ಮಾಡಿದವರಿಗೆ ಮಂತ್ರಿ ಪದವಿ ಯಿಂದ ಹಿಡಿದು ಜವಾನನ ಕೆಲಸದವರೆಗೂ ಕೆಲಸ ಸಿಗುತ್ತಿತ್ತು. ಆಡಳಿತದಲ್ಲಿ ಅವನ ಅತಿಯಾದ ಹಸ್ತ ಕ್ಷೇಪದಿಂದಾಗಿ ಶ್ರೀಮಂತರು ಬೇಸರಗೊಂಡರು. ಆದುದರಿಂದ ಹೇಗಾದರೂ ಮಾಡಿ ಕೊಲೆ ಮಾಡಬೇಕೆಂದು ತೀರ್ಮಾನಿಸಿದರು. ಅನೇಕ ಸಂಚುಗಳನ್ನು ಹೂಡಿ ಅಂತಿಮವಾಗಿ ಅವನನ್ನು ಕೊಲೆ ಮಾಡಲಾಯಿತು. ಈ ಘಟನೆಯಿಂದ ರಾಣಿಯು ತುಂಬಾ ವ್ಯಾಕುಲಳಾದಳು. ಆದರೆ ಈ ವೇಳೆಗೆ ರಷ್ಯಾದ ಆಡಳಿತ ಯಂತ್ರ ದುರಸ್ತಿಗೊಳಿಸಿದಷ್ಟು ಹದಗೆಟ್ಟಿತ್ತು. ಅವನ ಕೊಲೆಯಿಂದ ರಷ್ಯಾದ ಆಡಳಿತಕ್ಕೆ ಯಾವ ಉಪಯೋಗವು ಆಗಲಿಲ್ಲ. ಈ ವೇಳೆಗೆ ರಷ್ಯಾದಲ್ಲಿ ಕ್ರಾಂತಿಯ ಕಿಡಿ ಎದ್ದಿತ್ತು.

### 112.2.6 ರಷ್ಯಾ ಯುದ್ಧಗಳಲ್ಲಿ ಅನುಭವಿಸಿದ ಅಪಜಯಗಳಿಂದಾದ ಪರಿಣಾಮಗಳು

ರಷ್ಯ ಅನುಭವಿಸಿದ ಅನೇಕ ಅಪಜಯಗಳು ರಷ್ಯಾದ ಜನತೆಯ ಸ್ಥೈರ್ಯದ ಮೇಲೆ ಗಂಭೀರ ಪರಿಣಾಮ ಬೀರಿದವು. ಈ ಅಪಜಯಗಳು ಸರ್ಕಾರದ ಪ್ರತಿಷ್ಠೆಯನ್ನು ಕುಗ್ಗಿಸಿದವು. ಜನರು ಸರ್ಕಾರದಲ್ಲಿ ನಂಬಿಕೆ ಕಳೆದುಕೊಳ್ಳುವುದಕ್ಕೆ ಕಾರಣವಾದವು. ರಷ್ಯ ಅನಾವಶ್ಯಕವಾಗಿ ಕೈಗೊಂಡ ಯುದ್ಧಗಳಾಗಿದ್ದವು. 1854-56 ರಲ್ಲಿ ನಡೆದ ಕ್ರಿಮಿಯಾ ಯುದ್ಧದಲ್ಲಿ ರಷ್ಯ ಭಾರಿ ಸೋಲನ್ನನುಭವಿಸಿತು. ಆ ಯುದ್ಧದಿಂದ ರಷ್ಯ ಚೇತರಿಸಿಕೊಳ್ಳಬೇಕಾದರೆ ಅದಕ್ಕೆ ಎಷ್ಟೋ ವರ್ಷಗಳು ಬೇಕಾದವು. ಅನೇಕ ವರ್ಷಗಳವರೆಗೆ ತನ್ನ ವಿಸ್ತರಣಾ

ನೀತಿಯನ್ನು ಮುಂದುವರಿಸಲು ಯುದ್ಧ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಬರ್ಲಿನ್ ಸಮ್ಮೇಳನದ ನಂತರ ಬಾಲ್ಕನ್ ರಾಜ್ಯಗಳ ಕಡೆ ತನ್ನ ವಿಸ್ತರಣಾ ನೀತಿಯನ್ನು ತ್ಯಜಿಸಿ, ದೂರ ಪ್ರಾಚ್ಯದ ಕಡೆ ತನ್ನ ಗಮನ ಹರಿಸಿತು. ದೂರ ಪ್ರಾಚ್ಯದಲ್ಲಿ ಕೊರಿಯಾ ವಿಷಯಕ್ಕೆ ಸಂಬಂಧಿಸಿದಂತೆ ರಷ್ಯಾವು ಜಪಾನಿನ ಮೇಲೆ ಯುದ್ಧ ಮಾಡಬೇಕಾಯಿತು. ಕೊರಿಯಾದ ಮೇಲೆ ರಷ್ಯ ತನ್ನ ಸಂಪೂರ್ಣ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನ ಪಟ್ಟಿತು. ಆದರೆ ರಷ್ಯಾದ ಈ ನೀತಿಯನ್ನು ಜಪಾನ್ ವಿರೋಧಿಸಿತು. 1904-05 ರಲ್ಲಿ ನಡೆದ ರಷ್ಯಾ-ಜಪಾನ್ ಯುದ್ಧದಲ್ಲಿ ರಷ್ಯ ಹೆಚ್ಚು ಅಪಮಾನಕರವಾದ ಅಪಜಯವನ್ನು ಅನುಭವಿಸಿತು. ಏಷ್ಯಾದ ಒಂದು ಸಣ್ಣ ರಾಷ್ಟ್ರ ಯುರೋಪಿನ ಒಂದು ಬೃಹತ್ ರಾಷ್ಟ್ರವನ್ನು ಸೋಲಿಸಿತು. ಈ ಸೋಲಿಗೆ ಸರ್ಕಾರದ ನೀತಿಗಳೆ ಕಾರಣವಾದವು. ಈ ಅಪಜಯ ಮತ್ತು ರಷ್ಯ ಎದುರಿಸುತ್ತಿದ್ದ ಅನೇಕ ಸಮಸ್ಯೆಗಳಿಂದಾಗಿ 1905 ರಲ್ಲಿ ರಷ್ಯಾದಲ್ಲಿ ಕ್ರಾಂತಿ ತಲೆದೋರಿತು. ಆದರೆ ಈ ಕ್ರಾಂತಿಯನ್ನು ಝಾರನು ಹೇಗೋ ಅಡಗಿಸಿ ತನ್ನ ಅಧಿಕಾರವನ್ನು ಉಳಿಸಿಕೊಂಡನು. ಆದರೆ ರೀತಿ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್‌ನ ಪರವಾಗಿ ಒಂದನೆಯ ಜಾಗತಿಕ ಯುದ್ಧದಲ್ಲಿ ಭಾಗವಹಿಸಬೇಕಾಯಿತು.

### *112.2.7 ಕ್ರಾಂತಿಗೆ ತಕ್ಷಣದ ಕಾರಣ*

ಒಂದನೆಯ ಜಾಗತಿಕ ಯುದ್ಧದಲ್ಲಿ ರಷ್ಯ ಪ್ರಾರಂಭದಲ್ಲಿ ಗೆಲುವು ಸಾಧಿಸಿದರೂ, ಅಂತಿಮವಾಗಿ ಜರ್ಮನಿ ಮತ್ತು ಆಸ್ಟ್ರಿಯಾ-ಹಂಗೇರಿಯಾದ ಕೈಯಲ್ಲಿ ಸೋಲನ್ನನುಭವಿಸಿ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. 1917 ರ ವೇಳೆಗೆ ರಷ್ಯಾದ ಹಲವು ಭಾಗಗಳನ್ನು ಜರ್ಮನಿ ಮತ್ತು ಆಸ್ಟ್ರಿಯಾ-ಹಂಗೇರಿಯ ಸೈನಿಕರು ಗೆದ್ದುಕೊಂಡರು. ರಷ್ಯಾದ ಸೈನಿಕರು ಎಲ್ಲಾ ಕಡೆಯು ಸೋತು ಹಿಂದಿರುಗಿದರು. ರಷ್ಯಾದ ಸೈನಿಕರಿಗೆ ಯುದ್ಧ ಮುಂದುವರಿಸುವಷ್ಟು ಶಕ್ತಿ ಇರಲಿಲ್ಲ. ರಷ್ಯಾದಲ್ಲಿ ಸಮಸ್ಯೆಗಳು ಬಗೆಹರಿಸಲಾರದಷ್ಟರ ಮಟ್ಟಿಗೆ ಬೆಳೆದವು. ಸೈನ್ಯಕ್ಕೆ ಬೇಕಾದ ಯುದ್ಧ ಸಾಮಾಗ್ರಿಗಳನ್ನು ಹಾಗೂ ಆಹಾರವನ್ನು ನಿಗಧಿತ ವೇಳೆಯಲ್ಲಿ ಸರಬರಾಜು ಮಾಡುವಷ್ಟು ಸಾಮರ್ಥ್ಯಕ್ಕೆ ಇರಲಿಲ್ಲ. ರಷ್ಯಾದ ನಗರ ಮತ್ತು ಪಟ್ಟಣಗಳಲ್ಲಿ ನಾಗರೀಕರಿಗೆ ಆಹಾರ ಪದಾರ್ಥಗಳು ದೊರಕದಾದವು. ಝಾರನಿಗೆ ಈ ಆರ್ಥಿಕ ಬಿಕ್ಕಟ್ಟನ್ನು ಎದುರಿಸುವ ಸಾಮರ್ಥ್ಯ ಇರಲಿಲ್ಲ. ಎಲ್ಲಾ ಕಡೆಯು ಆಹಾರದ ಅಭಾವ ಉಂಟಾಯಿತು. ಜನರು ದಂಗೆ ಎದ್ದರು. ಝಾರನ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ರೀತಿಯಾಗಿ ಒಂದನೆಯ ಮಹಾಯುದ್ಧವು ರಷ್ಯಾದ ಕ್ರಾಂತಿಗೆ ಒಂದು ಬಹುಮುಖ್ಯ ಹಾಗೂ ತಕ್ಷಣದ ಕಾರಣವಾಯಿತು.

## 112.3 1917 ರ ಫೆಬ್ರುವರಿ ಕ್ರಾಂತಿ

1917 ರಲ್ಲಿ ರಷ್ಯಾದಲ್ಲಿ ಎರಡು ಕ್ರಾಂತಿಗಳು ಉಂಟಾದವು. ಮೊದಲನೆಯ ಕ್ರಾಂತಿಯು 1917 ರ ಫೆಬ್ರುವರಿಯಲ್ಲಿ ನಡೆಯಿತು. ಎರಡನೆಯ ಕ್ರಾಂತಿಯು ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ನಡೆಯಿತು. ಈ ಕ್ರಾಂತಿಗಳ ಬಗ್ಗೆ ಚರ್ಚೆ ನಡೆಸುವಾಗ ಎರಡು ಕ್ರಾಂತಿಗಳ ನಿಕರ ತಾರೀಖು ಮತ್ತು ತಿಂಗಳುಗಳ ಬಗ್ಗೆ ಚರ್ಚೆ ನಡೆಸುವುದು ಅವಶ್ಯಕ. ಯುರೋಪಿನ ಗ್ರಿಗೋರಿಯನ್ ಕ್ಯಾಲೆಂಡರ್ ಪ್ರಕಾರ ರಷ್ಯಾದಲ್ಲಿ ಮೊದಲನೆ ಕ್ರಾಂತಿ ಮಾರ್ಚಿ ಒಂಬತ್ತರಿಂದ ಹನ್ನೆರಡರವರೆಗೆ ನಡೆಯಿತು. ಎರಡನೆಯ ಕ್ರಾಂತಿ 1917 ರ ನವೆಂಬರ್ ಏಳರಂದು ಪ್ರಾರಂಭವಾಯಿತು. ಆದರೆ ಇತಿಹಾಸದಲ್ಲಿ ಈ ಎರಡು ಕ್ರಾಂತಿಗಳು ಫೆಬ್ರುವರಿ ಮತ್ತು ಅಕ್ಟೋಬರ್ ಕ್ರಾಂತಿಗಳೆಂದೇ ಪ್ರಸಿದ್ಧಿಯಾಗಿವೆ. ಇದಕ್ಕೆ ಕಾರಣವೇನೆಂದರೆ ರಷ್ಯ ಅಂದು ಬಳಸುತ್ತಿದ್ದ ಕ್ಯಾಲೆಂಡರ್ ಜೂಲಿಯನ್ ಕ್ಯಾಲೆಂಡರ್. ಗ್ರಿಗೋರಿಯನ್ ಕ್ಯಾಲೆಂಡರ್ ಮತ್ತು ಜೂಲಿಯನ್ ಕ್ಯಾಲೆಂಡರ್‌ಗೂ ಇರುವ ವ್ಯತ್ಯಾಸ ಕೇವಲ ಹದಿಮೂರು ದಿನಗಳು ಮಾತ್ರ.

### *112.3.1 ಕ್ರಾಂತಿಯ ಪ್ರಾರಂಭ*

1916 ರ ಡಿಸೆಂಬರ್ ಹದಿನಾರರಂದು ರಾಸ್‌ಪುಟಿನ್‌ನ ಹತ್ಯೆಯಾದುದು ಮುಂದೆ ಬರತಕ್ಕ ಕ್ರಾಂತಿಗೆ ಸೂಚನೆ ನೀಡಿದಂತಾಯಿತು. ಪ್ರತಿದಿನವೂ ರಷ್ಯಾದಲ್ಲಿ ಪರಿಸ್ಥಿತಿ ದಿನೆ ದಿನೆ ಹದಗೆಡಲು ಪ್ರಾರಂಭಿಸಿತು. ಸರ್ಕಾರದ ವಿರುದ್ಧ ಜನರ ಅತೃಪ್ತಿ ಮತ್ತು ಕೋಪ ಹೆಚ್ಚಾಗಲು ಪ್ರಾರಂಭಿಸಿತು. ಅನೇಕ ಕಾರ್ಖಾನೆಗಳಲ್ಲಿ ಕಾರ್ಮಿಕರು ಚಳುವಳಿಯನ್ನು ಪ್ರಾರಂಭಿಸಿದರು. ಆಹಾರದ ಅಭಾವ ಸರ್ವೆ ಸಾಮಾನ್ಯವಾಗಿತ್ತು. 1917 ರ ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ಆಹಾರಕ್ಕಾಗಿ ಚಳುವಳಿಗಳು ಕಾಣಿಸಿಕೊಂಡವು. ಸ್ತ್ರೀಯರನ್ನೊಳಗೊಂಡಂತೆ ಸಾವಿರಾರು ಮಂದಿ ಪೆಟ್ರೋಗ್ರಾಡ್ ನಗರದಲ್ಲಿ ಆಹಾರದ ಕೊರತೆ ಮತ್ತು ಕಲ್ಲಿದ್ದಲು ಅಭಾವದಿಂದಾಗಿ ಬೀದಿಗಿಳಿದು ಚಳುವಳಿ ಪ್ರಾರಂಭಿಸಿದರು. ಈ ರೀತಿಯ ಚಳುವಳಿಗೆ ಝಾರನ ಪಕ್ಷದವರು ಕಾರಣರಾಗಿರಲಿಲ್ಲ. ಆರ್ಥಿಕ ಸಮಸ್ಯೆಯಿಂದಾಗಿ ಜನರು ಬೇಸತ್ತು ದಂಗೆ ಎದ್ದರು. ಈ ಚಳುವಳಿಗಳನ್ನು ನಿಯೋಜಿಸಿರಲಿಲ್ಲ. ಈ ರೀತಿಯಾಗಿ ಫೆಬ್ರುವರಿಯಲ್ಲಿ ಕ್ರಾಂತಿ ರಷ್ಯಾದಲ್ಲಿ ಪ್ರಾರಂಭವಾಯಿತು.

### *112.3.2 ಡೂಮಾದ ಪಾತ್ರ*

ಝಾರನು ಅರೆಮನಸ್ಸಿನಿಂದ ಡೂಮ ಸಮಾವೇಶಗೊಳ್ಳಲು ಒಂದು ಆಜ್ಞೆಯನ್ನು ಫೆಬ್ರುವರಿ 27 ರಂದು ಹೊರಡಿಸಿದನು. ಡೂಮಾದ ಸದಸ್ಯರು ಫೆಬ್ರುವರಿ ಕ್ರಾಂತಿಯಿಂದಾಗಿ ಹಾಗೂ ಆರ್ಥಿಕ ಸಮಸ್ಯೆಗಳನ್ನು ಎದುರಿಸಲಾಗದ ಸರ್ಕಾರದ ವಿರುದ್ಧ

ಕೋಪೋದ್ರಿಕ್ತರಾಗಿದ್ದರು. ಸೋಸಿಯಲಿಸ್ಟ್ ರೆವುಲೂಷನರಿ ಪಕ್ಷದ ನಾಯಕನಾಗಿದ್ದ ಕೆರೆನ್‌ಸ್ಕಿಯು ರಷ್ಯಾವನ್ನು ಈ ಬಿಕ್ಕಟ್ಟಿನಿಂದ ಪಾರು ಮಾಡಲು ಝಾರನನ್ನೇ ವಜಾ ಮಾಡಬೇಕೆಂದು ಹೇಳಿದನು. ಈ ಮಾತನ್ನು ಕೇಳಿದ ರಾಣಿಯ ಕೆರೆನ್‌ಸ್ಕಿಯೊಬ್ಬ ದೇಶದ್ರೋಹಿ ಅವನನ್ನು ನೇತುಹಾಕಬೇಕೆಂದು ಹೇಳಿದಳು. ಆದರೆ ಝಾರನ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ. ಆದರೆ ಡೂಮನನ್ನು ವಿಸರ್ಜಿಸಿ ಝಾರನು ಒಂದು ಆಜ್ಞೆಯನ್ನು ಹೊರಡಿಸಿದನು. ಆದರೆ ಡೂಮಾದ ಸದಸ್ಯರು ಈ ಆಜ್ಞೆಯನ್ನು ವಿರೋಧಿಸಿ ತಮ್ಮದೇ ಆದ ತೀರ್ಮಾನಗಳನ್ನು ತೆಗೆದುಕೊಳ್ಳಲು ನಿರ್ಧರಿಸಿದರು. ಡೂಮ ರಷ್ಯಾದ ಪರಿಸ್ಥಿತಿಯನ್ನು ನಿಭಾಯಿಸಲು ಎಲ್ಲಾ ಪಕ್ಷಗಳ ಸದಸ್ಯರುಗಳನ್ನೊಳಗೊಂಡಂತೆ ಒಂದು ಪ್ರಾಂತೀಯ ಸಮಿತಿಯನ್ನು ನೇಮಕ ಮಾಡಿತು. ಪ್ರಾಂತೀಯ ಸಮಿತಿಯು ಸ್ವತಃ ಅಧಿಕಾರದ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡು ರಷ್ಯಾದಲ್ಲೆಲ್ಲ ಶಾಂತಿಯನ್ನು ಸ್ಥಾಪಿಸಲು ಪ್ರಯತ್ನ ನಡೆಸಿತು.

### *112.3.3 ಕಾರ್ಮಿಕರ ಮತ್ತು ಸೈನಿಕರ ಸೋವಿಯತ್‌ಗಳ ಸ್ಥಾಪನೆ*

ಫೆಬ್ರವರಿ 27 ನೆಯ ತಾರೀಖು ಸೈನಿಕರು ದಂಗೆ ಎದ್ದರು ಮತ್ತು ಕ್ರಾಂತಿಯಲ್ಲಿ ಭಾಗವಹಿಸಿದರು. ಅವರು ಕ್ರಾಂತಿಕಾರರ ಮೇಲೆ ಗುಂಡು ಹಾರಿಸಲು ನಿರಾಕರಿಸಿದರು. ಮೂಲತಃ ಪೆಟ್ರೊಗ್ರಾಡ್‌ನ ಕಾರ್ಮಿಕರು ತಮ್ಮ ಪ್ರತಿನಿಧಿಗಳಿಂದ ಕೂಡಿದ್ದ (ಡೆಪ್ಯೂಟಿಗಳು) ಸೋವಿಯತ್‌ನ್ನು ಸ್ಥಾಪಿಸಿದರು. ಮೇಲಿನ ಅಂಶಗಳಿಂದ ತಿಳಿದು ಬರುವುದೇನೆಂದರೆ ಸ್ವಯಂ ಆಗಿ ನೇಮಕಗೊಂಡ ಎರಡು ಸಂಘಟನೆಗಳು ಅಸ್ತಿತ್ವಕ್ಕೆ ಬಂದಿತು. ಒಂದನೆಯದು ಡೂಮದಿಂದ ನೇಮಕಗೊಂಡ ಪ್ರಾಂತೀಯ ಸಮಿತಿ ಮತ್ತೊಂದು ಕಾರ್ಮಿಕರ ಮತ್ತು ಸೈನಿಕರ ಸೋವಿಯತ್. ಈ ಎರಡು ಸಂಘಟನೆಗಳು ಫೆಬ್ರವರಿ ಕ್ರಾಂತಿಯಲ್ಲಿ ಸಕ್ರಿಯ ಪಾತ್ರ ವಹಿಸಿದವು.

### *112.3.4 ಎರಡನೆಯ ನಿಕೊಲಸ್‌ನು ಸಿಂಹಾಸನ ತ್ಯಜಿಸಿದುದು ಹಾಗೂ ಝಾರನ ಆಳ್ವಿಕೆಯ ಅಂತ್ಯ*

ಡೂಮಾದ ಸದಸ್ಯರು ಎರಡನೆಯ ನಿಕೊಲಸ್‌ನ ಮೇಲೆ ಸಿಂಹಾಸನವನ್ನು ತ್ಯಜಿಸುವಂತೆ ಒತ್ತಾಯ ಮಾಡಿದರು. ಝಾರನ ಪರ ಹೋರಾಟ ನಡೆಸುವಂತ ವಿಧೇಯ ಸೈನಿಕರಿರಲಿಲ್ಲ. ಅವರೆಲ್ಲರೂ ಕ್ರಾಂತಿಯಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಎಲ್ಲಾ ದಂಡನಾಯಕರುಗಳು ಕೂಡ ಸಿಂಹಾಸನವನ್ನು ತ್ಯಜಿಸುವಂತೆ ಸಲಹೆ ನೀಡಿದರು. ಅಂತಿಮವಾಗಿ ಮಾರ್ಚ್ ಎರಡನೆಯ ತಾರೀಖು ತನ್ನ ಸಹೋದರ ಗ್ರಾಂಡ್ ಡ್ಯೂಕ್ ಮೈಕೆಲ್‌ನ ಪರ ಸಿಂಹಾಸನ ತ್ಯಜಿಸಿದನು. ಆದರೆ ಅವನು ಕೂಡ ಝಾರನಾಗಲು ಇಷ್ಟಪಡಲಿಲ್ಲ. ಈ ರೀತಿಯಾಗಿ ರೋಮ್‌ನೊವ ಸಂತತಿಯ ಆಳ್ವಿಕೆ ಕೊನೆಗೊಂಡಿತು. ಎರಡನೆಯ ನಿಕೊಲಸ್ ಮತ್ತು ಇನ್ನುಳಿದ ರಾಜಮನೆತನದ ಸದಸ್ಯರನ್ನು ಬಂಧಿಸಲಾಯಿತು.

## 112.4 ಹಂಗಾಮಿ ಸರ್ಕಾರ (Provisionl Government)

1917 ರ ಮಾರ್ಚ್ ತಿಂಗಳಲ್ಲಿ ರಾಜತ್ವದ ಆಳ್ವಿಕೆ ಕೊನೆಗೊಂಡ ಮೇಲೆ ಡೂಮಾದ ಪ್ರಾಂತೀಯ ಸಮಿತಿಯು ರಷ್ಯಾದ ಆಳ್ವಿಕೆ ನಡೆಸಲು ಒಂದು ಹಂಗಾಮಿ ಸರ್ಕಾರವನ್ನು ನೇಮಕ ಮಾಡಿತು. ಈ ಹಂಗಾಮಿ ಸರ್ಕಾರವು ಅಕ್ಟೋಬರ್ ತಿಂಗಳಲ್ಲಿ ಬೋಲ್ಷೆವಿಕ್‌ರು ಅಧಿಕಾರಕ್ಕೆ ಬರುವವರೆಗೂ ಅಧಿಕಾರದಲ್ಲಿ ಮುಂದುವರಿಯಿತು. ಹಂಗಾಮಿ ಸರ್ಕಾರದ ಮಂತ್ರಿಮಂಡಲದಲ್ಲಿ ರಷ್ಯ ಸಮಾಜದ ಎಲ್ಲ ವರ್ಗದವರಿಗೆ ಪ್ರಾತಿನಿಧ್ಯ ಕೊಟ್ಟು ನೇಮಕ ಮಾಡಿಕೊಳ್ಳಲಾಯಿತು. ಜೆಮ್‌ಸ್ಟೊವ್‌ಗಳ ಯೂನಿಯನ್ ಅಧ್ಯಕ್ಷನಾಗಿದ್ದ ಪ್ರಿನ್ಸ್ ಜಾರ್ಜ್ ಲ್ವೊವ್‌ನನ್ನು ಪ್ರಧಾನಮಂತ್ರಿ ಹಾಗೂ ಒಳಾಡಳಿತದ ಮಂತ್ರಿಯನ್ನಾಗಿ ನೇಮಕ ಮಾಡಲಾಯಿತು. ಪೆಟ್ರೊಗ್ರಾಡ್‌ನ ಸೋವಿಯತ್‌ನ ಉಪಾಧ್ಯಕ್ಷನಾಗಿದ್ದ ಕೆರೆನ್‌ಸ್ಕಿಯೊಬ್ಬನೆ ಸೋವಿಯತ್‌ನ ಪರವಾಗಿ ಮಂತ್ರಿಮಂಡಲಕ್ಕೆ ಸೇರಿದವನಾಗಿದ್ದನು.

### *112.4.1 ಹಂಗಾಮಿ ಸರ್ಕಾರದ ಸಮಸ್ಯೆಗಳು*

ಹಂಗಾಮಿ ಸರ್ಕಾರವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಈ ಸಮಸ್ಯೆಗಳು ಅದರ ಶಕ್ತಿ ಮೀರಿದಂತಹ ಸಮಸ್ಯೆಗಳಾಗಿದ್ದವು. ಮೊದಲನೆಯ ಮಹಾಯುದ್ಧ ಇನ್ನೂ ಮುಂದುವರಿದಿತ್ತು. ರಷ್ಯಾದ ಸೈನಿಕರು ಅನೇಕ ಸ್ಥಳಗಳಲ್ಲಿ ಸೋಲನ್ನನುಭವಿಸಿ ಹಿಮ್ಮೆಟ್ಟಿದ್ದರು. ರಷ್ಯಾದ ಸೈನಿಕರಿಗೆ ಬೇಕಾದ ಶಸ್ತ್ರಾಸ್ತ್ರ ಮತ್ತು ಆಹಾರವನ್ನು ಒದಗಿಸಿಕೊಡಬೇಕಾಗಿತ್ತು. ಆದರೆ ಇದು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ ಇಡಿ ರಷ್ಯಾದಲ್ಲೆಲ್ಲ ಆಹಾರದ ಕೊರತೆಯಿಂದಾಗಿ ಅಶಾಂತಿ ತಾಂಡವವಾಡುತ್ತಿತ್ತು. ಖಜಾನೆ ಬರಿದಾಗಿತ್ತು. ಕಾರ್ಮಿಕರು ಹೆಚ್ಚಿನ ಸಂಬಳಕ್ಕಾಗಿ ಬೇಡಿಕೆ ಇತ್ತರು. ರೈತರು ಭೂಮಿಯ ಒಡೆತನಕ್ಕಾಗಿ ಹೋರಾಟ ಪ್ರಾರಂಭಿಸಿದರು. ಸೈನಿಕರು ಯುದ್ಧದಿಂದ ಬೇಸತ್ತು ಯುದ್ಧವನ್ನು ಮುಂದುವರಿಸಲು ಸಾಧ್ಯವಾಗದೆ ಅದರ ಅಂತ್ಯಕ್ಕಾಗಿ ಹಾತೊರೆಯುತ್ತಿದ್ದರು.

ಮತ್ತೊಂದು ಪ್ರಮುಖ ಸಮಸ್ಯೆ ಎಂದರೆ ಪೆಟ್ರೊಗ್ರಾಡ್‌ನಲ್ಲಿ ಕಾರ್ಮಿಕರ ಮತ್ತು ಸೈನಿಕರ ಸೋವಿಯತ್‌ನ ಕಾರ್ಯ ವೈಖರಿ. ಸೋವಿಯತ್ ಹಂಗಾಮಿ ಸರ್ಕಾರಕ್ಕೆ ಬೆಂಬಲ ನೀಡಲು ಒಪ್ಪಿಕೊಂಡಿತು. ಆದರೆ ಈ ಬೆಂಬಲವನ್ನು ಪಡೆಯ ಬೇಕಾದರೆ ಸೋವಿಯತ್‌ನ ಬೇಡಿಕೆಗಳನ್ನು ಈಡೇರಿಸಬೇಕಾಗಿತ್ತು. ಬಹುಮುಖ್ಯವಾದ ಬೇಡಿಕೆ ಎಂದರೆ ಎಲ್ಲಾ ರೀತಿಯ ಸ್ವಾತಂತ್ರ್ಯಗಳನ್ನು ನೀಡುವುದು ಹಾಗೂ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಸ್ಥಾಪಿಸುವುದು. ಹಂಗಾಮಿ ಸರ್ಕಾರದ ರೀತಿಯೇ ಸೋವಿಯತ್ ಕೂಡ ತನ್ನ ಅಧಿಕಾರ ಚಲಾಯಿಸಲು

ಪ್ರಾರಂಭಿಸಿತು. ಇದರ ಪರಿಣಾಮವಾಗಿ ರಷ್ಯಾದಲ್ಲಿ ದ್ವಿಸರ್ಕಾರ ಅಥವಾ ಎರಡು ಸಂಘಟನೆಗಳ ಹಿಡಿತಕ್ಕೆ ರಷ್ಯಾದ ಆಡಳಿತ ಒಳಪಟ್ಟಿತು. ಈ ಎರಡು ಸಂಘಟನೆಗಳ ಸಂಬಂಧ ಸೌಹಾರ್ದಯುತವಾದ ಸಂಬಂಧವಾಗಿರಲಿಲ್ಲ. ಎರಡು ಸಂಘಟನೆಗಳ ಅಧಿಕಾರದ ಬಗ್ಗೆ ಒಂದು ನಿದರ್ಶನವನ್ನು ಮಂಡಿಸಬಹುದು. ಸೈನಿಕರು ಮತ್ತು ಕಾರ್ಮಿಕರ ಸೋವಿಯತ್‌ನ ಅಪ್ಪಣೆ ಇಲ್ಲದೆ ಹಂಗಾಮಿ ಸರ್ಕಾರದ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದರು. ಇಂತಹ ನಿರ್ಧಾರಕ್ಕೆ ಹಂಗಾಮಿ ಸರ್ಕಾರ ಮಣಿಯಲೇಬೇಕಾಯಿತು. ಫೆಬ್ರವರಿ ಕ್ರಾಂತಿಯು ಪ್ರಾರಂಭವಾದ ಎಂಟು ತಿಂಗಳವರೆಗೆ ಈ ಎರಡು ಸಂಘಟನೆಗಳು ತಮ್ಮ ಅಧಿಕಾರವನ್ನು ಹಂಚಿಕೊಂಡು ಆಡಳಿತವನ್ನು ನಡೆಸಿದರು. ಆದರೆ ಬಹಳ ಬೇಗನೆ, ಭೂಮಿಯನ್ನು ಹಂಚುವ ವಿಷಯಕ್ಕೆ ಸಂಬಂಧಿಸಿದಂತೆ, ಕೈಗಾರಿಕೆಗಳ ಸಂಘಟನೆಯ ಬಗ್ಗೆ ಹಾಗೂ ಯುದ್ಧವನ್ನು ಮುಂದುವರಿಸುವುದರ ಬಗ್ಗೆ ಹಂಗಾಮಿ ಸರ್ಕಾರ ಮತ್ತು ಸೋವಿಯತ್‌ನ ನಡುವೆ ಭಿನ್ನಾಭಿಪ್ರಾಯಗಳು ತಲೆದೋರಿದವು.

### 112.4.2 *ದ್ವಿಅಧಿಕಾರದ ಅಂತ್ಯ (End of Dual Power)*

ಒಂದನೆಯ ಮಹಾಯುದ್ಧವನ್ನು ಮುಂದುವರಿಸುವುದರ ಬಗ್ಗೆ ಹಂಗಾಮಿ ಸರ್ಕಾರದ ಮಂತ್ರಿ ಮಂಡಲದಲ್ಲೇ ಭಿನ್ನಾಭಿಪ್ರಾಯಗಳಿದ್ದವು. ಯುದ್ಧ ಮಂತ್ರಿ ಗುಚ್ಕೋವ್ ಮತ್ತು ವಿದೇಶಾಂಗ ಮಂತ್ರಿ ಮಿಲಿಯುಕೊವ್ ಯುದ್ಧವನ್ನು ಮುಂದುವರಿಸಬೇಕೆಂಬ ಅಭಿಪ್ರಾಯ ಹೊಂದಿದ್ದರು. ಆದರೆ ಪ್ರಧಾನಮಂತ್ರಿ ಲೊವ್ ಮತ್ತು ಕೆರೆನ್‌ಸ್ಕಿ ಯುದ್ಧವನ್ನು ಕೊನೆಗೊಳಿಸಿ ಶಾಂತಿ ಒಪ್ಪಂದ ಮಾಡಿಕೊಳ್ಳಲು ಕಾತುರರಾಗಿದ್ದರು. ಇಂತಹ ಒಳಜಗಳದ ಪರಿಸ್ಥಿತಿಯನ್ನು ಸದುಪಯೋಗ ಪಡಿಸಿಕೊಂಡು ಕಾರ್ಮಿಕರು ಮತ್ತು ಸೈನಿಕರು ಗುಚ್ಕೋವ್ ಮತ್ತು ಮಿಲಿಯುಕೊವ್ ರಾಜೀನಾಮೆ ನೀಡುವಂತೆ ಮಾಡಿದರು. ಹಂಗಾಮಿ ಸರ್ಕಾರದಲ್ಲಿ ಉಂಟಾದ ಈ ಬಿಕ್ಕಟ್ಟನ್ನು ಪುನಃ ಮಂತ್ರಿ ಮಂಡಲದ ಪುನರ್‌ರಚನೆಯ ಮೂಲಕ ಸರಿಪಡಿಸಲಾಯಿತು. ಪ್ರಧಾನಮಂತ್ರಿ ಮೇ ಹದಿನೆಂಟರಂದು ಹಂಗಾಮಿ ಸರ್ಕಾರದ ಸದಸ್ಯರು ಮತ್ತು ಸೋವಿಯತ್‌ನ ಸದಸ್ಯರನ್ನೊಳಗೊಂಡಂತೆ ಒಂದು ಸಮ್ಮಿಶ್ರ ಸರ್ಕಾರವನ್ನು ರಚಿಸುವುದಾಗಿ ಪ್ರಕಟಿಸಿದನು. ಇದರ ಪ್ರಕಾರ ಹೊಸ ಮಂತ್ರಿ ಮಂಡಲದಲ್ಲಿ 9 ಮಂದಿ ಲಿಬರಲ್ಸ್ ಮತ್ತು ಸೋವಿಯತ್‌ನಿಂದ ಮಂದಗಾಮಿ ಸೋಷಿಯಲಿಸ್ಟರು ಇದ್ದರು. ಈ ರೀತಿಯಾಗಿ ದ್ವಿ ಅಧಿಕಾರವನ್ನು ಕೊನೆಗೊಳಿಸಲಾಯಿತು.

ಆದರೆ ಪ್ರಧಾನಮಂತ್ರಿ ಲ್ವೊವ್ (Lvov) ಅನೇಕ ಸಮಸ್ಯೆಗಳಿಂದಾಗಿ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಗಲಿಲ್ಲ. ಗೆಲಿಷಿಯಾದಲ್ಲಿ ರಷ್ಯಾದ ಸೈನ್ಯ ಹೀನಾಯ ಸೋಲನ್ನನುಭವಿಸಿತು. ಈ ಮಧ್ಯೆ ಬೋಲ್ಷೆವಿಕ್‌ರ ದಂಗೆಗಳು ಮುಂದುವರಿದವು. ಅವನ ರಾಜೀನಾಮೆಯ ನಂತರ ಕೆರೆನ್‌ಸ್ಕಿಯು ಪ್ರಧಾನ ಮಂತ್ರಿಯಾದನು. ಈತನು ಎರಡನೆಯ ಸಮ್ಮಿಶ್ರ ಸರ್ಕಾರವನ್ನು ರಚಿಸಿದನು. ಆದರೆ ಹೊಸ ಸಮ್ಮಿಶ್ರ ಸರ್ಕಾರವು ಕೂಡ ಜನರ ಆಶೋತ್ತರಗಳನ್ನು ಈಡೇರಿಸಲು ವಿಫಲವಾಯಿತು. ಜನರಿಗೆ ಶಾಂತಿ ಬೇಕಾಗಿತ್ತು ಯುದ್ಧವನ್ನು ಕೊನೆಗೊಳಿಸಬೇಕಾಗಿತ್ತು ಆದ್ದರಿಂದ ಹಂಗಾಮಿ ಸರ್ಕಾರ ಜನರ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವಿಫಲವಾಯಿತು. ಅಕ್ಟೋಬರ್ ಕ್ರಾಂತಿಯಿಂದಾಗಿ ಬೋಲ್ಷೆವಿಕ್‌ರು ಹಂಗಾಮಿ ಸರ್ಕಾರವನ್ನು ಅಂತ್ಯಗೊಳಿಸಿದರು.

### 112.4.3 *ಕಾರ್ನಿಲಾವ್ ಪ್ರಕರಣ (Kornilov Affair)*

ಕೆರೆನ್‌ಸ್ಕಿಯು ಲೆ.ಜೆ. ಕಾರ್ನಿಲಾವ್‌ನನ್ನು ಸೈನ್ಯದ ಮಹಾದಂಡನಾಯಕನನ್ನಾಗಿ ನೇಮಿಸಿದನು. ಕೆರೆನ್‌ಸ್ಕಿಯ ಅನುಮತಿ ಪಡೆದು ಸೈನ್ಯಕ್ಕೆ ಸಂಬಂಧಿಸಿದಂತೆ ಹಲವು ಸುಧಾರಣೆಗಳನ್ನು ಹೊರಡಿಸಿದನು. ಆದರೆ ಕಾರ್ನಿಲಾವ್ ಕೆರೆನ್‌ಸ್ಕಿಯ ವಿರುದ್ಧವೇ ತಿರುಗಿಬಿದ್ದನು. ಅವನು ಹಂಗಾಮಿ ಸರ್ಕಾರವನ್ನು ಪದಚ್ಯುತಿಗೊಳಿಸಲು ಪ್ರಯತ್ನ ನಡೆಸುತ್ತಿದ್ದ ಗುಂಪಿನೊಡನೆ ಸೇರಿಕೊಂಡನು. ಕೆರೆನ್‌ಸ್ಕಿಯನ್ನು ಕಡೆಗಣಿಸಿ ತಾನೇ ನಾಯಕನಂತೆ ನಡೆದುಕೊಳ್ಳಲು ಪ್ರಾರಂಭಿಸಿದನು. ಕಾರ್ನಿಲ್ ಲಾವ್ ಆಗಸ್ಟ್ 26 ರಂದು ಪೆಟ್ರೊಗಾಡ್‌ನ ಸೋವಿಯತ್‌ನ ಮೇಲೆ ಹಿಡಿತ ಸಾಧಿಸಲು ಒಂದು ಸೈನ್ಯವನ್ನು ಕಳುಹಿಸಿಕೊಟ್ಟನು. ತಕ್ಷಣವೇ ಕೆರೆನ್‌ಸ್ಕಿಯು ಕಾರ್ನಿಲಾವ್‌ನನ್ನು ದಂಡನಾಯಕ ಹುದ್ದೆಯಿಂದ ವಜಾ ಮಾಡಿದನು. ಆದರೆ ಕಾರ್ನಿಲಾವ್ ಅದನ್ನು ಧಿಕ್ಕರಿಸಿ ಮುಂದುವರಿದನು. ಇಂತಹ ಸಮಯದಲ್ಲಿ ರೈಲ್ವೆಯ ಕೆಲಸಗಾರರು ಮತ್ತು ಹಲವು ಸೈನಿಕರು ಕಾರ್ನಿಲಾವ್‌ನನ್ನು ಮತ್ತು ಅವನ ಸೈನ್ಯ ಪೆಟ್ರೊಗ್ರಾಡ್ ತಲುಪದಂತೆ ತಡೆಹಿಡಿದರು. ಅನಂತರ ಕಾರ್ನಿಲಾವ್ ಮತ್ತು ಅವನ ಬೆಂಬಲಿಗರನ್ನು ಬಂಧಿಸಲಾಯಿತು.

ಕಾರ್ನಿಲಾವ್ ಪ್ರಕರಣ ಬೋಲ್ಷೆವಿಕ್‌ರಿಗೆ ವರದಾನವಾಯಿತು. ಹಂಗಾಮಿ ಸರ್ಕಾರದ ದುರ್ಬಲತೆ ಅರಿವಾಯಿತು. ಈ ಪ್ರಕರಣದ ನಂತರ ಬೋಲ್ಷೆವಿಕ್‌ರು ತಮ್ಮ ಸ್ಥಾನಮಾನವನ್ನು ಬಲಪಡಿಸಿಕೊಳ್ಳಲು ಅನುಕೂಲವಾಯಿತು.

## 112.5 ಅಕ್ಟೋಬರ್ ಕ್ರಾಂತಿ ಅಥವಾ ಬೋಲ್ಷೆವಿಕ್ ಕ್ರಾಂತಿ

ಕಾರ್ನಿಲಾವ್ ಪ್ರಕರಣದ ನಂತರ ಬೋಲ್ಷೆವಿಕ್‌ರು ಹೆಚ್ಚು ಪ್ರಾಬಲ್ಯಕ್ಕೆ ಬಂದರು. ಅವರು ರಾಜಾರೋಷವಾಗಿ ಯಾವ ಕ್ರಮವನ್ನು ಕೂಡ ಕೈಗೊಳ್ಳಬಹುದಿತ್ತು. ಕೆಂಪು ಸ್ವಯಂ ಸೇವಕ ದಳ (Red guards) ವನ್ನು ಬಲಪಡಿಸಲು ಕ್ರಮ ಕೈಗೊಂಡರು. ಶಸ್ತ್ರಾಸ್ತ್ರಗಳನ್ನು ಪಡೆದುಕೊಂಡರು. ಪೆಟ್ರೋಗ್ರಾಡ್ ಸೋವಿಯತ್‌ನ ಅಧ್ಯಕ್ಷನಾಗಿದ್ದ ಟ್ರಾಟ್ಸ್‌ಕಿಯು ಈ ದಿಶೆಯಲ್ಲಿ ಪ್ರಮುಖ ಪಾತ್ರ ವಹಿಸಿದನು.

ಫಿನ್ ಲ್ಯಾಂಡಿನಲ್ಲಿ ಅಡಗಿಕೊಂಡಿದ್ದ ಲೆನಿನ್, ರಷ್ಯಾದಲ್ಲಿದ್ದ ಬೋಲ್ಷೆವಿಕ್‌ರ ಮೇಲೆ ಹೆಚ್ಚು ಒತ್ತಡ ಬೀರಿ ಅಧಿಕಾರವನ್ನು ಕಿತ್ತುಕೊಳ್ಳುವಂತೆ ಹೇಳಿದನು. ಸೋವಿಯತ್‌ಗಳಿಗೆ "ಈಗ ನಾವು ಅಧಿಕಾರವನ್ನು ಕಸಿದುಕೊಳ್ಳದೆ ಹೋದರೆ ಇತಿಹಾಸ ನಮ್ಮನ್ನು ರಕ್ಷಿಸುವುದಿಲ್ಲ" ಎಂಬುದಾಗಿ ಬರೆದನು. ಅವನು ಅಕ್ಟೋಬರ್ ಏಳರಂದು ಗುಪ್ತವಾಗಿ ಫಿನ್ ಲ್ಯಾಂಡಿನಿಂದ ಪೆಟ್ರೋಗ್ರಾಡ್‌ಗೆ ಆಗಮಿಸಿದನು. ಬೋಲ್ಷೆವಿಕ್ ಪಕ್ಷದ ಸದಸ್ಯರು ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಟ ಮಾಡಬೇಕೆಂದು ಅಭಿಪ್ರಾಯ ಪಟ್ಟರು. ಬೋಲ್ಷೆವಿಕ್ ಪಕ್ಷದ ಕೇಂದ್ರ ಸಮಿತಿಯು ಬಲ ಪ್ರದರ್ಶನದ ಮೂಲಕ ಅಧಿಕಾರವನ್ನು ಕಸಿದುಕೊಳ್ಳಬೇಕೆಂಬ ಐತಿಹಾಸಿಕ ತೀರ್ಮಾನವನ್ನು ಅಕ್ಟೋಬರ್ ಹತ್ತರಂದು ತೆಗೆದುಕೊಂಡಿತು. ಅಕ್ಟೋಬರ್ 24-25 ರ ರಾತ್ರಿ ತಮ್ಮ ಹೋರಾಟ ಪ್ರಾರಂಭಿಸಲು ನಿರ್ಧರಿಸಿದರು. ಬೋಲ್ಷೆವಿಕ್‌ರು ಉಳಿದ ಎಲ್ಲಾ ಪಕ್ಷಗಳಿಗಿಂತಲೂ ಪ್ರಬಲ ಪಕ್ಷವೆನಿಸಿಕೊಂಡಿತ್ತು. ಬೋಲ್ಷೆವಿಕ್‌ರವರು ಒಂದು ದಳವನ್ನು (Red guards) ಹೊಂದಿದ್ದರು. ಅಕ್ಟೋಬರ್ ತಿಂಗಳಲ್ಲಿ ಪೆಟ್ರೋಗ್ರಾಡ್ ಸೋವಿಯತ್ ಸೈನಿಕ ಕ್ರಾಂತಿಕಾರಕ ಮಂಡಳಿಯನ್ನು (Military Revolutionary Committee) ಸ್ಥಾಪಿಸಲಾಯಿತು.

ಕೆರೆನ್‌ಸ್ಕಿ ಮತ್ತು ಅವನ ಹಂಗಾಮಿ ಸರ್ಕಾರ ಕ್ರಾಂತಿಯ ಸುಳಿವು ಗೊತ್ತಿತ್ತು. ಅವನ ಸರ್ಕಾರದ ಕಾರ್ಯ ವೈಖರಿಯ ಬಗ್ಗೆ ಪ್ರಶ್ನೆ ಮಾಡಲು ಪ್ರಾರಂಭಿಸಿದರು. ರಷ್ಯಾದಲ್ಲೆಲ್ಲ ಅರಾಜಕತೆ ಉಂಟಾದಾಗ ಕೆರೆನ್‌ಸ್ಕಿಗೆ ಏನನ್ನೂ ಮಾಡಲು ಸಾಧ್ಯವಾಗಲಿಲ್ಲ. ಸಾರ್ವಜನಿಕರಿಂದ ಬೆಂಬಲ ಪಡೆಯಲು ಪ್ರಯತ್ನ ನಡೆಸಿದನು. ಜನಪರ ಕೆಲವು ತೀರ್ಮಾನಗಳನ್ನು ತೆಗೆದುಕೊಂಡನು. ಭೂಮಿಯ ಹಂಚಿಕೆ ಮಾಡುವುದಾಗಿ ಮತ್ತು ಜರ್ಮನಿಯೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳುವುದಾಗಿ ಪ್ರಕಟಿಸಿದನು. ಆದರೆ ಇಂತಹ ನಿರ್ಧಾರಗಳು ತಡವಾಗಿ ಬಂದಂತಹ ನಿರ್ಧಾರಗಳಾಗಿದ್ದವು. ಆದರೆ ಕೆರೆನ್‌ಸ್ಕಿ ಸೈನ್ಯದ ಸಹಾಯದಿಂದ ಜನರ ಮೇಲೆ ಬಲ ಪ್ರಯೋಗ ಮಾಡುವ ಸ್ಥಿತಿಯಲ್ಲಿಯೂ ಕೂಡ ಇರಲಿಲ್ಲ. ಶ್ರೀಮಂತರು ಮತ್ತು ಕೆರೆನ್‌ಸ್ಕಿ ಭಯದ ವಾತಾವರಣದಲ್ಲಿ ಕಾಲ ಕಳೆಯಲು ಪ್ರಾರಂಭಿಸಿದರು. ಅವರು ಏನು ಮಾಡುವ ಸ್ಥಿತಿಯಲ್ಲಿರಲಿಲ್ಲ.

### 112.5.1 ಪೆಟ್ರೊಗ್ರಾಡ್‌ನಲ್ಲಿ ಕ್ರಾಂತಿಯ ಪ್ರಾರಂಭ

ಬೋಲ್ಷೆವಿಕ್‌ರು ಕ್ರಾಂತಿಗಾಗಿ ನಿಗಧಿಪಡಿಸಿದ್ದ ಅಕ್ಟೋಬರ್ 24 ರ ರಾತ್ರಿ ಬಂದೇ ಬಿಟ್ಟಿತು. ಲೆನಿನ್ ಪೆಟ್ರೊಗ್ರಾಡ್‌ನ ಆಯಕಟ್ಟಿನ ಸ್ಥಳಗಳನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು. ಹಂಗಾಮಿ ಸರ್ಕಾರದ ಕೇಂದ್ರ ಸ್ಥಾನವಾಗಿದ್ದ ಚಳಿಗಾಲದ ಅರಮನೆಯನ್ನು ಮೊದಲು ವಶಪಡಿಸಿಕೊಳ್ಳಲು ನಿರ್ಧರಿಸಿದನು. ಆದರೆ ಕೆರೆನ್‌ಸ್ಕಿಯು ಅಮೇರಿಕಾದ ದುತವಾಸದ ಒಂದು ಕಾರನ್ನು ಬಳಸಿ ಚಳಿಗಾಲದ ಅರಮನೆಯಿಂದ ಪರಾರಿಯಾಗಿದ್ದನು. ಈ ಕಾರು ಅಮೇರಿಕಾದ ಬಾವುಟವನ್ನು ಹೊಂದಿತ್ತು. ಪೆಟ್ರೋಗ್ರಾಡ್‌ನ ಹತ್ತಿರವಿದ್ದ ಸಮುದ್ರದಲ್ಲಿ ನಿಲ್ಲಿಸಿದ್ದ ಅರೋರ ಎಂಬ ನೌಕೆಯಿಂದ ಚಳಿಗಾಲದ ಅರಮನೆಯ ಮೇಲೆ ಮೊದಲನೆಯ ಗುಂಡು ಹಾರಿಸಲಾಯಿತು. ಕೆಂಪು ಸೈನ್ಯ ಅರಮನೆಯ ಒಳಗಡೆ ನುಗ್ಗಿತು. ಆದರೆ ಅಲ್ಲಿ ಪ್ರಬಲ ವಿರೋಧ ನೀಡುವಂತಹ ಯಾವ ಸೈನ್ಯವು ಕೂಡ ಇರಲಿಲ್ಲ. ಅನೇಕ ಮಂತ್ರಿಗಳು ಚಳಿಗಾಲದ ಅರಮನೆಯಲ್ಲೇ ಇದ್ದರು. ಪಾಲ್ ಮತ್ತು ಪೀಟರ್ ಕೋಟೆಗಳಿಂದ ಗುಂಡು ಹಾರಿಸಲಾಯಿತು. ಚಳಿಗಾಲದ ರಕ್ಷಣೆಯ ಕೆಲಸವನ್ನು ಹೊಂದಿದ್ದ ಕೇವಲ ಹತ್ತು ಮಂದಿ ಮಾತ್ರ ಮರಣ ಹೊಂದಿದರು. ಸುಲಭವಾಗಿ ಚಳಿಗಾಲದ ಅರಮನೆಯು ಬೋಲ್ಷೆವಿಕ್‌ರ ವಶವಾಯಿತು.

### 112.5.2 ಲೆನಿನ್‌ನ ನೀತಿ ಮತ್ತು ಸೋವಿಯತ್‌ಗಳ ಸಭೆ

ಈ ಮಧ್ಯೆ ಸ್ಮಾಲಿ (Smoltry) ವಿದ್ಯಾ ಸಂಸ್ಥೆಯಲ್ಲಿ ಸಮಸ್ತ ರಷ್ಯನ್ ಸೋವಿಯತ್ 25 ನೇ ತಾರೀಖು ಸಭೆ ಸೇರಿತು. (All Russian Congress of Soviets) ಲೆನಿನ್‌ನ ಎರಡು ನಿರ್ಧಾರಗಳಿಗೆ ಸಭೆ ತನ್ನ ಒಪ್ಪಿಗೆ ನೀಡಿತು. ಒಂದನೆಯದಾಗಿ ಜರ್ಮನಿ ಮತ್ತು ಆಸ್ಟ್ರಿಯಾದೊಡನೆ ಒಪ್ಪಂದ ಮಾಡಿಕೊಳ್ಳಲು ಎಲ್ಲರೂ ಒಪ್ಪಿಕೊಂಡರು. ಖಾಸಗಿಯ ಆಸ್ತಿಯ ರಾಷ್ಟ್ರೀಕರಣಗೊಳಿಸುವ ಮತ್ತೊಂದು ಶಾಸನಕ್ಕೆ ಸಭೆ ಒಪ್ಪಿಗೆ ನೀಡಿತು. ಕಾಂಗ್ರೆಸ್‌ಗೆ ಒಂದು ಸರ್ಕಾರವನ್ನು ರಚಿಸುವುದು ಕೂಡ ಅವಶ್ಯಕವಾಗಿತ್ತು. ಆಡಳಿತ ನಡೆಸಲು ಒಂದು ಮಂಡಳಿಯನ್ನು ರಚಿಸಲಾಯಿತು. ಈ ಮಂಡಳಿಯ ಸದಸ್ಯರಿಗೆ ಕಮಿಸ್ಸರ್ಸ್ (Commissars) ಅಥವಾ ಮಂತ್ರಿಗಳೆಂದು ಕರೆದರು. ಆಡಳಿತ ಮಂಡಳಿಯ ಅಧ್ಯಕ್ಷನಾಗಿ ಲೆನಿನ್ ನೇಮಕಗೊಂಡನು. ಟ್ರಾಟ್‌ಸ್ಕಿ ವಿದೇಶಾಂಗ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದನು.

### 112.5.3 ಬೋಲ್ಷೆವಿಕ್‌ರ ವಿರುದ್ಧ ಕೆರೆನ್‌ಸ್ಕಿಯ ಹೋರಾಟ

ಚಳಿಗಾಲದ ಅರಮನೆಯಿಂದ ತಪ್ಪಿಸಿಕೊಂಡು ಚಳಿಗಾಲದ ಕೆರೆನ್‌ಸ್ಕಿಯು ಗಡಿಯಿಂದ ಸೈನ್ಯವನ್ನು ತೆಗೆದುಕೊಂಡು ರಾಜಧಾನಿಗೆ ಧಾವಿಸಿದನು. ಆದರೆ ಈ ವೇಳೆಗೆ ಪೆಟ್ರೋಗ್ರಾಡ್ ನಗರ ಸಂಪೂರ್ಣವಾಗಿ ಬೋಲ್ಷೆವಿಕ್‌ರ ವಶದಲ್ಲಿತ್ತು. ಪೆಟ್ರೋಗ್ರಾಡ್‌ನ ಪಕ್ಕದಲ್ಲೇ ಇದ್ದ ಕೆಲವು ಹಳ್ಳಿಗಳನ್ನು ಮತ್ತು ಪಟ್ಟಣಗಳನ್ನು ಕೆರೆನ್‌ಸ್ಕಿಯು ಗೆದ್ದುಕೊಳ್ಳುವುದರಲ್ಲಿ ಯಶಸ್ವಿಯಾದನು. ಆದರೆ ಬೋಲ್ಷೆವಿಕ್‌ರು ರಕ್ಷಣೆಯನ್ನು ಬಲಪಡಿಸಿದ್ದರು. ಟ್ರಾಟ್‌ಸ್ಕಿಯು ಬೋಲ್ಷೆವಿಕ್ ಸೈನ್ಯದ ನಾಯಕತ್ವವನ್ನು ವಹಿಸಿದ್ದನು. ಬೋಲ್ಷೆವಿಕ್‌ರು ವೀರಾವೇಶದಿಂದ

ಹೋರಾಡಿ ರಾಜಧಾನಿಯನ್ನು ರಕ್ಷಿಸಿದರು. ಈ ಹೋರಾಟದಲ್ಲಿ ಎರಡು ಕಡೆಯೂ ನೂರಾರು ಜನರು ಮರಣ ಹೊಂದಿದರು ಕೆರೆನ್‌ಸ್ಕಿ ಮತ್ತು ಅವನ ಬೆಂಬಲಿಗರು ರಣರಂಗದಿಂದ ಓಡಿಹೋದರು. ಅಂತಿಮವಾಗಿ ಕೆರೆನ್‌ಸ್ಕಿಯು ಅಮೇರಿಕಾಕ್ಕೆ ತಪ್ಪಿಸಿಕೊಂಡು ಹೋದನು.

### *112.5.4 ಮಾಸ್ಕೋದಲ್ಲಿ ಕ್ರಾಂತಿ*

ಮಾಸ್ಕೋದಲ್ಲಿ ಬೋಲ್ಶೆವಿಕ್‌ರಿಗೂ ಮತ್ತು ಅವರ ವಿರೋಧಿಗಳಿಗೂ ಅಧಿಕಾರಕ್ಕಾಗಿ ಹೋರಾಟ ನಡೆಯಿತು. ಭೀಕರ ಹೋರಾಟ ನಡೆದರೂ ಸರ್ಕಾರಿ ಕಟ್ಟಡಗಳಿಗೆ ಹೆಚ್ಚು ಜಖಂ ಆಗಲಿಲ್ಲ. ಖಾಸಗಿ ಕಟ್ಟಡಗಳಿಗೆ ಹೆಚ್ಚು ನಷ್ಟ ಉಂಟಾಯಿತು. ಸುಮಾರು ಆರು ದಿನಗಳವರೆಗೆ ಬೋಲ್ಶೆವಿಕ್‌ರಿಗೂ ಮತ್ತು ಅವರ ವಿರೋಧಗಳಿಗೂ ಹೋರಾಟ ನಡೆಯಿತು. ಅಂತಿಮವಾಗಿ ಈ ನಗರವನ್ನು ಬೋಲ್ಶೆವಿಕ್‌ರು ತಮ್ಮ ವಶಕ್ಕೆ ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾದರು. ಈ ಹೋರಾಟದಲ್ಲಿ ಮಡಿದವರನ್ನು ಕ್ರೆಮ್ಲಿನ್ ಮುಂಭಾಗದಲ್ಲಿ ಬೋಲ್ಶೆವಿಕ್‌ರು ಸಮಾದಿ ಮಾಡಿದರು.

ಬೋಲ್ಶೆವಿಕ್‌ರು ಒಂದು ವಾರದೊಳಗೆ ರಷ್ಯಾದಲ್ಲೇ ಬಹುಮುಖ್ಯವಾದ ಎರಡು ನಗರಗಳಾದ ಪೆಟ್ರೋಗ್ರಾಡ್ ಮತ್ತು ಮಾಸ್ಕೊಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು. ಅನಂತರ ಬೋಲ್ಶೆವಿಕ್‌ರು ಉಳಿದೆಡೆ ಸುಲಭವಾಗಿ ಅನೇಕ ಪ್ರದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಕ್ರಾಂತಿಯು ಕಾಡ್ಗಿಚ್ಚಿನಂತೆ ಶೀಘ್ರ ಗತಿಯಲ್ಲಿ ಹರಡಿತು. ಒಂದು ತಿಂಗಳೊಳಗೆ ಬೋಲ್ಶೆವಿಕ್‌ರು ರಷ್ಯಾದ ಉತ್ತರ ಭಾಗ, ಮಧ್ಯಭಾಗ, ಸೈಬೀರಿಯ ಮತ್ತು ಪೂರ್ವ ಭಾಗದ ಮೇಲೆ ತಮ್ಮ ಹಿಡಿತವನ್ನು ಸ್ಥಾಪಿಸಿದರು. ಪಶ್ಚಿಮ ರಷ್ಯಾದಲ್ಲಿ ಜರ್ಮನಿಯ ಹಿಡಿತದಲ್ಲಿ ಅನೇಕ ಪ್ರದೇಶಗಳಿದ್ದವು.

### *112.5.5 ಬೋಲ್ಶೆವಿಕ್‌ರ ಪ್ರಾರಂಭಿಕ ಸಮಸ್ಯೆಗಳು*

ಬೋಲ್ಶೆವಿಕ್‌ರು ಸಮಸ್ತ ರಷ್ಯಾದ ಮೇಲೆ ತಮ್ಮ ಪರಮಾಧಿಕಾರವನ್ನು ಸ್ಥಾಪಿಸಲು ಅನೇಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಯಿತು. ಪೆಟ್ರೋಗ್ರಾಡ್‌ನಲ್ಲೇ ಇನ್ನು ಅವರಿಗೆ ವಿರೋಧವಿತ್ತು. ಅನೇಕ ಇಲಾಖೆಯ ಅಧಿಕಾರಿಗಳು ಕೆಲಸಕ್ಕೆ ಹಾಜರಾಗದೆ ಸಾರ್ವಜನಿಕರಿಗೆ ಬಹಳ ತೊಂದರೆಯಾಯಿತು. ಬ್ಯಾಂಕ್ ಕೆಲಸಗಾರರು ಬ್ಯಾಂಕ್‌ಗಳನ್ನು ಮುಚ್ಚಿ ಕೆಲಸಕ್ಕೆ ಹಾಜರಾಗದೆ ಇದ್ದುದರಿಂದ ಹೆಚ್ಚು ಅನಾನುಕೂಲವಾಯಿತು. ಅದೇ ರೀತಿ ಅನೇಕ ಸರ್ಕಾರಿ ಇಲಾಖೆಗಳ ಕೆಲಸಗಾರರು ಕೆಲಸಕ್ಕೆ ಹಾಜರಾಗಲಿಲ್ಲ. ಬೋಲ್ಶೆವಿಕ್‌ರು ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಂಡರು. ಬ್ಯಾಂಕ್ ಕೆಲಸಗಾರರು, ರೈಲ್ವೆ ಕೆಲಸಗಾರರು, ಅಂಚೆ ಮತ್ತು ತಂತಿ ಇಲಾಖೆಯ ಕೆಲಸಗಾರರು ಮತ್ತು ಇನ್ನುಳಿದ ಸರ್ಕಾರಿ ನೌಕರರಿಗೆ ಕರ ಪತ್ರಗಳನ್ನು ಹೊರಡಿಸುವುದರ ಮೂಲಕ ಕೆಲಸಕ್ಕೆ ಹಿಂದಿರುಗುವಂತೆ ಎಚ್ಚರಿಕೆ ನೀಡಿದರು. ಗಡಿಯಲ್ಲಿರುವ ಸೈನಿಕರಿಗೆ ಅನೇಕ ದಿನಗಳಿಂದ ಆಹಾರ ಸರಬರಾಜು ಮತ್ತು ಯುದ್ಧ ಸಾಮಾಗ್ರಿಗಳನ್ನು ಒದಗಿಸಿಲ್ಲ. ಸೈನಿಕ ಕ್ರಾಂತಿಕಾರಿ ಸಮಿತಿಯು ದೇಶದ್ರೋಹಿಗಳಿಗೆ ಕೊನೆಯದಾಗಿ ಎಚ್ಚರಿಕೆ ನೀಡುತ್ತಿದೆ ಎಂದು ಕರಪತ್ರಗಳ ಮೂಲಕ ತಿಳಿಸಿತು. ಇದರ ಪರಿಣಾಮವಾಗಿ ವಿವಿಧ ಇಲಾಖೆಗಳ ಕೆಲಸಗಾರರು ಹಿಂದಿರುಗಿ ತಮ್ಮ ಕೆಲಸ ಕಾರ್ಯಗಳನ್ನು ಪ್ರಾರಂಭಿಸಿದರು. ಎಲ್ಲ ಚಳುವಳಿಗಳು ಕಣ್ಮರೆಯಾದವು.

ಈ ರೀತಿಯ ರಾಜಕೀಯ ಗೊಂದಲ ಉಂಟಾದಾಗ ಗಡಿಯಲ್ಲಿದ್ದ ಅನೇಕ ಪ್ರದೇಶಗಳು ಸ್ವಾತಂತ್ರ್ಯವನ್ನು ಘೋಷಿಸಿಕೊಂಡವು. ಯುಕ್ರೇನ್, ಫಿನ್‌ಲ್ಯಾಂಡ್, ಎಸ್ಟೋನಿಯ, ಲ್ಯಾಟ್ವಿಯ ಮತ್ತು ಲಿಥುವೇನಿಯ ತಮ್ಮದೇ ಆದ ಸರ್ಕಾರಗಳನ್ನು ಸ್ಥಾಪಿಸಲು ಪ್ರಾರಂಭಿಸಿದವು. ಕೆಲವರು ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಟ ನಡೆಸುವ ಪ್ರಯತ್ನ ನಡೆಸಿದರು. ಮತ್ತೊಂದು ಅಪಾಯ ದಂಡನಾಯಕ ಜನರಲ್ ಡೂಕೊನೀನ್‌ನಿಂದ ಬಂತು. ಆತನಿಗೆ ಜರ್ಮನಿಯೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ತಿಳಿಸಿದಾಗ ಅವನು ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದನು. ಅವನನ್ನು ವಜಾ ಮಾಡಿ ಒಂದು ರೈಲ್ವೆ ಬೋಗಿಯಲ್ಲಿ ಬಂಧಿಸಲಾಯಿತು. ಅನಂತರ ಕೋಪಗೊಂಡಿದ್ದ ಸೈನಿಕರು ಅವನನ್ನು ಬೋಗಿಯಿಂದ ಹೊರಗೆಳೆದು ಕೊಂದು ಹಾಕಿದರು.

### *112.5.6 ಬೋಲ್ಶೆವಿಕ್‌ರ ಹೊಸ ಕಾನೂನುಗಳು*

ಬೋಲ್ಶೆವಿಕ್‌ರು ಸಮಾಜವಾದದ ರಾಜ್ಯ ಸ್ಥಾಪಿಸಲು ಅನೇಕ ಕ್ರಮಗಳನ್ನು ಕೈಗೊಂಡರು. 1917-18 ರ ನಡುವೆ 193 ಹೊಸ ಆಜ್ಞೆಗಳನ್ನು ಹೊರಡಿಸಿದರು. ಕೈಗಾರಿಕೆಯನ್ನು ರಾಷ್ಟ್ರೀಕರಣಗೊಳಿಸಲಾಯಿತು. ಎಲ್ಲಾ ಕಾರ್ಖಾನೆಗಳನ್ನು ಒಡೆಯರಿಂದ ಕಸಿದುಕೊಂಡು ಕೆಲಸಗಾರರ ಸೋವಿಯತ್‌ಗಳಿಗೆ ವರ್ಗಾಯಿಸಲಾಯಿತು. ಅದೇ ರೀತಿ ಸೈನ್ಯವನ್ನು ಕೂಡ ಪುನರ್ ಸಂಘಟಿಸಿ ಸೈನಿಕ ಸೋವಿಯತ್‌ಗಳಿಗೆ ನೀಡಲಾಯಿತು. ಹೊಸ ಕೋರ್ಟ್‌ಗಳನ್ನು ಸ್ಥಾಪಿಸಲಾಯಿತು. ಇನ್ನು ಮುಂದೆ ವಿಚಾರಣೆಯು ಆರು ಮಂದಿ ಕಾರ್ಮಿಕ ಕೆಲಸಗಾರರು ಅಥವಾ ರೈತರ ಮುಂದೆ ನಡೆಯಬೇಕಾಗಿತ್ತು. ಎಲ್ಲಾ ಬಿರುದುಗಳನ್ನು ರದ್ದು ಪಡಿಸಲಾಯಿತು. 'ನಾಗರಿಕ' ಎಂಬುದನ್ನು ಬಿಟ್ಟರೆ ಇನ್ನಾವುದು ಇರುವ ಹಾಗಿರಲಿಲ್ಲ. ಕಾನೂನಿನ ಮುಂದೆ ಪುರುಷರು ಮತ್ತು ಸ್ತ್ರೀಯರು ಸಮಾನರು ಎಂದು ಘೋಷಿಸಲಾಯಿತು. ಚರ್ಚ್‌ನಲ್ಲಿ ನಡೆಯುತ್ತಿದ್ದ ವಿವಾಹಗಳನ್ನು ರದ್ದುಪಡಿಸಿ ನಾಗರಿಕ ವಿವಾಹಗಳನ್ನು ಆಚರಣೆಗೆ ತರಲಾಯಿತು.

ಇಲ್ಲಿಯವರೆಗೂ ಗಂಡ ಅಥವಾ ಪತ್ನಿಗಾಗಲಿ ವಿವಾಹ ವಿಚ್ಛೇದನ ಹೆಚ್ಚು ಕಷ್ಟವಾದುದಾಗಿದ್ದು ಈಗ ಸುಲಭವಾಗಿ ದೊರಕುವಂತಾಯಿತು. ಶಾಲೆಗಳಲ್ಲಿ ಧಾರ್ಮಿಕ ವಿಷಯಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಂತ್ಯ ಹಾಡಲಾಯಿತು. ಚರ್ಚ್ ವಶದಲ್ಲಿದ್ದ ಭೂಮಿಯನ್ನು ವಶಪಡಿಸಿಕೊಳ್ಳಲಾಯಿತು. ಪಾದ್ರಿಗಳಿಗೆ ಯಾವುದೇ ಸಂಬಳವನ್ನು ಸರ್ಕಾರ ನೀಡುವುದಿಲ್ಲವೆಂದು ತಿಳಿಸಿತು. ಆದರೆ ಚರ್ಚ್‌ನಲ್ಲಿ ಸೇವೆ ಮುಂಚಿನಂತೆಯೇ ಮುಂದುವರಿಯುವುದು ಎಂದು ಘೋಷಿಸಲಾಯಿತು.

ಲೆನಿನ್‌ನ ಮುಂದೆ ಇದ್ದ ಮತ್ತೊಂದು ಪ್ರಮುಖ ಸಮಸ್ಯೆ ಎಂದರೆ ರಷ್ಯಾದಲ್ಲಿ ವಿವಿಧ ರಾಷ್ಟ್ರೀಯ ಜನಾಂಗದವರ ಸಮಸ್ಯೆಯನ್ನು ಬಗೆಹರಿಸುವುದಾಗಿತ್ತು. ಪೋಲೆಂಡ್, ಲಿಥುಯೇನಿಯ, ಲ್ಯಾಟ್ವಿಯ, ಎಸ್ಟೋನಿಯ ಮೊದಲಾದ ಪ್ರದೇಶಗಳ ಸಮಸ್ಯೆಯನ್ನು ಬಗೆಹರಿಸಲು ಜೋಸೆಫ್ ಸ್ಟಾಲಿನ್‌ನನ್ನು ವಿವಿಧ ರಾಷ್ಟ್ರೀಯ ಜನಾಂಗದ ಪರ ಸಮಸ್ಯೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಕಮೀಸ್ಸರ್‌ನನ್ನಾಗಿ ನೇಮಿಸಲಾಯಿತು. ಕೆಲವು ಪ್ರದೇಶಗಳಿಗೆ ಸ್ವಾತಂತ್ರ್ಯ ನೀಡಿದರೂ ಕೂಡ ಆಯ ಕಟ್ಟಿನ ಪ್ರದೇಶಗಳಾದ ಯುಕ್ರೇನ್ ಮತ್ತು ಜಾರ್ಜಿಯಾಕ್ಕೆ ಸ್ವಾತಂತ್ರ್ಯ ನೀಡಲಿಲ್ಲ.

### *112.5.7 ಬ್ರೆಸ್ಟ್ ಲಿಟೋವಸ್ಕ್ ಒಪ್ಪಂದ(1918)*

ಬೋಲ್ಶೆವಿಕ್‌ರು ಅಧಿಕಾರಕ್ಕೆ ಬಂದ ತಕ್ಷಣವೇ ಯುದ್ಧವನ್ನು ಕೊನೆಗೊಳಿಸಿ ಜರ್ಮನಿ ಮತ್ತು ಆಸ್ಟ್ರಿಯ-ಹಂಗೇರಿಯೊಡನೆ ಒಪ್ಪಂದ ಮಾಡಿಕೊಳ್ಳಲು ತೀರ್ಮಾನಿಸಿತು. ರಷ್ಯಾದಲ್ಲಿ ಜರ್ಮನಿಯ ಸೈನ್ಯದ ಕೇಂದ್ರ ಸ್ಥಾನವಾಗಿದ್ದ ಬ್ರೆಸ್ಟ್ ಲಿಟಿವೆಸ್ಕ್‌ನಲ್ಲಿ ಶಾಂತಿ ಸಮ್ಮೇಳನ ನಡೆಯಿತು. 1918 ರ ಮಾರ್ಚಿ ಮೂರರಂದು ಶಾಂತಿ ಒಪ್ಪಂದ ಮಾಡಿಕೊಳ್ಳಲಾಯಿತು. ರಷ್ಯ ಒಂದು ಮಿಲಿಯನ್ ಚದರ ಮೈಲಿಗಳಷ್ಟು ಪ್ರದೇಶವನ್ನು ಜರ್ಮನಿಗೆ ಬಿಟ್ಟುಕೊಟ್ಟಿತು. 1/3 ಭಾಗದಷ್ಟು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಮತ್ತು 1/3 ಭಾಗದಷ್ಟು ಕಾರ್ಖಾನೆಗಳನ್ನು ಕಳೆದುಕೊಂಡಿತು. ಫಿನ್‌ಲ್ಯಾಂಡ್ ಜಾರ್ಜಿಯ ಮತ್ತು ಯುಕ್ರೇನ್, ಲಾಟ್ವಿಯ, ಎಸ್ಟೋನಿಯ ಮತ್ತು ಲಿಥುಯೆನಿಯಗಳನ್ನು ಜರ್ಮನಿಗೆ ಬಿಟ್ಟುಕೊಡಲಾಯಿತು. ಇದರ ಜೊತೆಗೆ ಹೆಚ್ಚು ನಷ್ಟ ಪರಿಹಾರವನ್ನು ನೀಡಬೇಕಾಯಿತು.

### *112.5.8 ಶಾಸನ ಸಭೆಗೆ ಚುನಾವಣೆ ಹಾಗೂ ಚುನಾಯಿತ ಶಾಸನ ಸಭೆಯ ವಿಸರ್ಜನೆ*

ಬೋಲ್ಶೆವಿಕ್‌ರು ಅಧಿಕಾರಕ್ಕೆ ಬಂದ ತಕ್ಷಣವೇ ಚುನಾವಣೆಯನ್ನು ರಷ್ಯಾದಲ್ಲಿ ನಡೆಸಬೇಕಾಯಿತು. ಏಕೆಂದರೆ ಹಂಗಾಮಿ ಸರ್ಕಾರ ಚುನಾವಣೆ ನಡೆಸುವುದಾಗಿ ಆಶ್ವಾಸನೆ ನೀಡಿತ್ತು. 1917 ರ ನವೆಂಬರ್ ತಿಂಗಳಲ್ಲಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಶೇ. 60 ರಷ್ಟು ಸದಸ್ಯರು ಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿದವರಾಗಿದ್ದರು. ಆದರೆ ಬೋಲ್ಶೆವಿಕ್ ಪಕ್ಷದವರು ಕೇವಲ 25 % ಮಂದಿ ಮಾತ್ರ ಚುನಾಯಿಸಲ್ಪಟ್ಟರು. ಆದರೆ ಈ ವೇಳೆಗೆ ಇಡಿ ರಷ್ಯಾದ ಅಧಿಕಾರ ಬೋಲ್ಶೆವಿಕ್‌ರ ಕೈಯಲ್ಲಿತ್ತು. ಅವರು ಅಧಿಕಾರವನ್ನು ಸೋಷಿಯಲಿಸ್ಟರಿಗೆ ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಶಾಸನ ಸಭೆಯು ಸಮಾವೇಶಗೊಂಡಾಗ ತಮ್ಮ ಕೆಲವು ಸೈನ್ಯದ ಸಹಾಯದಿಂದ ಸೋಷಿಯಲಿಸ್ಟ್ ಪಕ್ಷದ ಸದಸ್ಯರು ಯಾವುದೇ ಕಾರ್ಯಕಲಾಪ ಪ್ರಾರಂಭಿಸಿದಂತೆ ತಡೆಹಿಡಿಯಲಾಯಿತು. ಅನೇಕ ಸೋಷಿಯಲಿಸ್ಟ್ ಸದಸ್ಯರನ್ನು ಬಂಧಿಸಲಾಯಿತು. ಅನೇಕರು ಕೊಲ್ಲಲ್ಪಟ್ಟರು. ಅನೇಕರು ಪಲಾಯನ ಮಾಡಿದರು. ಈ ರೀತಿ ಜನರಿಂದ ಚುನಾಯಿಸಲ್ಪಟ್ಟ ಶಾಸನ ಸಭೆಯು ಕೆಲಸ ನಿರ್ವಹಿಸಿದಂತೆ ಬೋಲ್ಶೆವಿಕ್‌ರು ಕ್ರಮ ಕೈಗೊಂಡರು. ಅನಂತರ ಅಧಿಕೃತವಾಗಿ ಸೋವಿಯತ್ ಕಾರ್ಯಕಾರಿ ಸಮಿತಿ ಶಾಸನ ಸಭೆಯನ್ನು ಒಂದು ಆಜ್ಞೆಯನ್ನು ಹೊರಡಿಸುವುದರ ಮೂಲಕ ವಿಸರ್ಜಿಸಿತು.

### *112.5.9 1918 ರ ಸೋವಿಯತ್ ರಾಜ್ಯಾಂಗ*

1918 ರ ಏಪ್ರಿಲ್ ತಿಂಗಳಿನಲ್ಲಿ ಸ್ವೆರ್ಡ್‌ಲೊವ್ ಅಧ್ಯಕ್ಷತೆಯಲ್ಲಿ ಹೊಸ ರಾಜ್ಯಾಂಗ ರಚನೆಗೆ ಒಂದು ಆಯೋಗವನ್ನು ರಚಿಸಲಾಯಿತು. 1918 ರ ಜುಲೈ ಹತ್ತನೆಯ ತಾರೀಖು ಹೊಸ ರಾಜ್ಯಾಂಗ ಅಸ್ತಿತ್ವಕ್ಕೆ ಬಂತು. ರಷ್ಯಾವನ್ನು ರಷ್ಯನ್ ಸೋವಿಯತ್ ಫೆಡೆರೇಟಿವ್ ಸೋಷಿಯಲಿಸ್ಟ್ ರಿಪಬ್ಲಿಕ್ (R.S.F.S.R) ಎಂದು ನಾಮಕರಣ ಮಾಡಲಾಯಿತು. 1922 ರಲ್ಲಿ R.S.F.S.R ಹೆಸರನ್ನು ಬದಲಾಯಿಸಿ U.S.S.R ಎಂದು ಕರೆಯಲಾಯಿತು.

## 112.6 ಆಂತರಿಕ ಯುದ್ಧ

ಬೋಲ್ಶೆವಿಕ್‌ರು ಬಲಪ್ರಯೋಗದ ಮೂಲಕ ತಮ್ಮ ಪರಮಾಧಿಕಾರವನ್ನು ಕೇವಲ ಮೂರು ತಿಂಗಳಲ್ಲಿ ಸ್ಥಾಪಿಸಿದ್ದರು. ಆದರೆ ರಷ್ಯಾದಲ್ಲಿ ಶಾಂತಿಯನ್ನು ಸ್ಥಾಪಿಸಲು ಅವರಿಂದ ಸಾಧ್ಯವಾಗಲಿಲ್ಲ. ಅವರ ವಿರೋಧಿಗಳು ಗುಂಪುಗಳು ಅಂದರೆ ಬಂಡವಾಳಶಾಹಿಗಳು ಪ್ರಬಲವಾಗಿ ಬೋಲ್ಶೆವಿಕ್‌ರನ್ನು ಪದಚ್ಯುತಿಗೊಳಿಸಲು ಹೋರಾಟ ಪ್ರಾರಂಭಿಸಿದರು. ಮೆನ್ಶೆವಿಕ್‌ರು ಸೋಷಿಯಲಿಸ್ಟ್ ರೆವೂಲೂಷನರಿ ಪಕ್ಷ, ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದ ಬಂಡವಾಳಶಾಹಿಗಳು, ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟಿದ್ದವರು. ಬ್ರೆಸ್ಟ್‌ಲಿಟೋವ್‌ಸ್ಕ್ ಒಪ್ಪಂದದಿಂದ ಜಿಗುಪ್ಸೆ ಹೊಂದಿದ್ದವರು (ಏಕೆಂದರೆ ಈ ಒಪ್ಪಂದದಿಂದಾಗಿ ರಷ್ಯ ಅನೇಕ ಪ್ರದೇಶಗಳನ್ನು ಕಳೆದುಕೊಂಡಿತ್ತು ಹಾಗೂ ಹೆಚ್ಚಿನ ಯುದ್ಧದ ನಷ್ಟ ಪರಿಹಾರವನ್ನು ನೀಡಬೇಕಾಗಿತ್ತು) ಈ ರೀತಿಯಾಗಿ ಬೋಲ್ಶೆವಿಕ್‌ರ ವಿರುದ್ಧ

ಅನೇಕ ಗುಂಪುಗಳು ಹುಟ್ಟಿಕೊಂಡವು. ಬೋಲ್ಷೆವಿಕ್‌ರ ವಿರುದ್ಧದ ಗುಂಪುಗಳನ್ನು ಬಿಳಿಯರು (Whites) ಎಂದು ಕರೆಯಲಾಯಿತು. ಬೋಲ್ಷೆವಿಕ್‌ರನ್ನು ರೆಡ್ಸ್ (Reds) ಎಂದು ಕರೆಯಲಾಯಿತು. ಇವರಿಬ್ಬರ ನಡುವೆ ಆಂತರಿಕ ಯುದ್ಧವು ಸುಮಾರು ಮೂರು ವರ್ಷಗಳ ಕಾಲ ಮುಂದುವರಿಯಿತು.

ರಷ್ಯಾದ ವಿವಿಧ ಭಾಗಗಳನ್ನು ಬೋಲ್ಷೆವಿಕ್ ವಿರೋಧಿಗಳು ಬೋಲ್ಷೆವಿಕ್‌ರ ಮೇಲೆ ದಾಳಿ ನಡೆಸಿದರು. ಬಿಳಿಯರ ಪರವಾಗಿ ರಷ್ಯಾದ ವಿವಿಧ ಕಡೆಗಳಲ್ಲಿ ಅನೇಕ ದಂಡನಾಯಕರುಗಳು ಹೋರಾಟ ನಡೆಸಿದರು. ಆದರೆ ಅವರಲ್ಲಿ ಐಕ್ಯತೆ ಇರಲಿಲ್ಲ.

ಮಿತ್ರ ರಾಷ್ಟ್ರಗಳು ಕೂಡ ಬೋಲ್ಷೆವಿಕ್ ವಿರೋಧಿಗಳಿಗೆ (ಬಿಳಿಯರಿಗೆ) ಧನಸಹಾಯ ಹಾಗೂ ಸೈನ್ಯದ ಸಹಾಯವನ್ನು ನೀಡಿದವು. ಈ ಸಹಾಯವೇ ಆಂತರಿಕ ಯುದ್ಧ ಮೂರು ವರ್ಷಗಳ ಕಾಲ ಮುಂದುವರಿಯಲು ಕಾರಣವಾಯಿತು. ಗ್ರೇಟ್ ಬ್ರಿಟನ್, ಫ್ರಾನ್ಸ್, ಅಮೇರಿಕ ಮತ್ತು ಜಪಾನ್ ಹಣ ಸಹಾಯ ಮತ್ತು ಸೈನಿಕರನ್ನು ಬೋಲ್ಷೆವಿಕ್‌ರ ವಿರುದ್ಧ ಹೋರಾಟ ನಡೆಸಲು ಕಳುಹಿಸಿಕೊಟ್ಟವು. ಅವರಿಗೆ ಜಗತ್ತಿನಾದ್ಯಂತ ಸಮಾಜವಾದ ಹರಡಬಹುದೆಂಬ ಭಯವಿತ್ತು. ಪ್ರಾರಂಭದಲ್ಲಿ ಮಿತ್ರರಾಷ್ಟ್ರಗಳ ಸಹಾಯದಿಂದ ಬಿಳಿಯರ ದಂಡನಾಯಕರುಗಳು ಯಶಸ್ಸನ್ನು ಸಾಧಿಸಿದರು. ಆದರೆ ಬಹಳ ಕಾಲ ಹೋರಾಡಲು ಸಾಧ್ಯವಾಗಲಿಲ್ಲ. ಒದನೆಯ ಜಾಗತಿಕ ಯುದ್ಧದಿಂದ ಈ ವೇಳೆಗೆ ಮಿತ್ರರಾಷ್ಟ್ರಗಳು ಸಾಕಷ್ಟು ನಷ್ಟವನ್ನು ಅನುಭವಿಸಿದ್ದುದರಿಂದ ರಷ್ಯಾದಲ್ಲಿ ತಮ್ಮ ಬೆಂಬಲವನ್ನು ಮುಂದುವರಿಸಲು ಆಸಕ್ತಿ ಹೊಂದಿರಲಿಲ್ಲ. ಹಂತಹಂತವಾಗಿ ಮಿತ್ರರಾಷ್ಟ್ರಗಳು ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಂಡರು. ಬಿಳಿಯರ ದಂಡನಾಯಕರುಗಳು ಅನೇಕ ಸ್ಥಳಗಳಲ್ಲಿ ಸೋಲನ್ನನುಭವಿಸಿದರು. ಬೋಲ್ಷೆವಿಕ್‌ರು ಕೂಡ ನಿರ್ದಾಕ್ಷಣ್ಯವಾಗಿ ತಮ್ಮ ವಿರೋಧಿಗಳನ್ನು ಕ್ರೂರವಾಗಿ ಕೊಲ್ಲೆಗೈದರು. ಆಂತರಿಕ ಯುದ್ಧ ಸಮಯದಲ್ಲೆ 1918 ರಲ್ಲಿ ಝಾರ್ ಎರಡನೆಯ ನಿಕೋಲಸ್ ಮತ್ತು ಪತ್ನಿ ಹಾಗೂ ಅವರ ಮಕ್ಕಳು ಕೊಲೆಯಾದರು. ಈ ಆಂತರಿಕ ಯುದ್ಧದ ಸಮಯದಲ್ಲೆ ಸಮತಾವಾದವನ್ನು (ಸಮರ ಸಮತಾವಾದ) ಜಾರಿಗೊಳಿಸಲು ಲೆನಿನ್ ಪ್ರಯತ್ನ ನಡೆಸಿದನು. ಆದರೆ ಈ ಸಮರ ಸಮತಾವಾದ ಯಶಸ್ವಿಯಾಗದೆ ಅದನ್ನು ರದ್ದುಪಡಿಸಿ ಹೊಸ ಆರ್ಥಿಕ ನೀತಿಯನ್ನು ಲೆನಿನ್ ಜಾರಿಗೊಳಿಸಿದನು. 1921 ರ ವೇಳೆಗೆ ರಷ್ಯಾದಲ್ಲಿ ಶಾಂತಿ ನೆಲೆಸಿತು. ಅಂತಿಮವಾಗಿ ರಷ್ಯಾದಲ್ಲಿ ಬೋಲ್ಷೆವಿಕ್‌ರು ತಮ್ಮ ಪರಮಾಧಿಕಾರವನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾದರು.

## 112.7 ಸಂಕ್ಷಿಪ್ತ ಅವಲೋಕನ

ಆಧುನಿಕ ಜಗತ್ತಿನಲ್ಲಿ 1917 ರ ರಷ್ಯಾದ ಕ್ರಾಂತಿಯು ಒಂದು ಪ್ರಮುಖ ಘಟನೆಯಾಗಿದೆ. ಈ ಕ್ರಾಂತಿಗೆ ಅನೇಕ ಕಾರಣಗಳು ಉಲ್ಲೇಖಿಸಲ್ಪಟ್ಟಿವೆ. ಇಪ್ಪತ್ತನೆ ಶತಮಾನದ ಪ್ರಾರಂಭವಾದರೂ ರಷ್ಯ ಯಾವ ಬದಲಾವಣೆಯ ಬೆಳಕನ್ನು ಕಾಣಲಿಲ್ಲ. ಝಾರರು ನಿರಂಕುಶ ಪ್ರಭುಗಳಾಗಿ ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು. ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳಲ್ಲಿ ಯಾವ ಸುಧಾರಣೆಯು ಕಂಡುಬರಲಿಲ್ಲ. ಅನೇಕ ಯುದ್ಧಗಳಲ್ಲಿ ರಷ್ಯ ಅಪಜಯಗಳನ್ನನುಭವಿಸಿದುದು ಕೂಡ ರಷ್ಯಾದ ಮೇಲೆ ಗಂಭೀರ ಪರಿಣಾಮ ಬೀರಿತು. ಮೊದಲನೆಯ ಮಹಾಯುದ್ಧದಿಂದಾಗಿ ರಷ್ಯಾದಲ್ಲಿ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟು 1917 ರ ಫೆಬ್ರುವರಿಯಲ್ಲಿ ಕ್ರಾಂತಿಯು ಪ್ರಾರಂಭವಾಗಲು ಕಾರಣವಾಯಿತು. ಈ ಕ್ರಾಂತಿಯಿಂದಾಗಿ ಝಾರ್ ನಿಕೊಲಸ್ ಸಿಂಹಾಸನವನ್ನು ತ್ಯಜಿಸಿದನು. ಅನಂತರ ರಷ್ಯಾದಲ್ಲಿ ಆಡಳಿತವನ್ನು ನಡೆಸಲು ಡೂಮ ಒಂದು ಹಂಗಾಮಿ ಸರ್ಕಾರವನ್ನು ರಚಿಸಿತು. ಈ ಹಂಗಾಮಿ ಸರ್ಕಾರವು ಕೂಡ ಜನರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವಿಫಲವಾಯಿತು. ಅಂತಿಮವಾಗಿ ಅಕ್ಟೋಬರ್‌ನಲ್ಲಿ ಮತ್ತೊಂದು ಕ್ರಾಂತಿ ಲೆನಿನ್ ನಾಯಕತ್ವದಲ್ಲಿ ನಡೆಯಿತು. ಇದೇ ಬೋಲ್ಷೆವಿಕ್ ಕ್ರಾಂತಿ. ಬೋಲ್ಷೆವಿಕ್ ಕ್ರಾಂತಿಯಿಂದಾಗಿ ಹಂಗಾಮಿ ಸರ್ಕಾರ ಅಂತ್ಯಗೊಂಡು ಬೋಲ್ಷೆವಿಕ್‌ರು ಅಧಿಕಾರಕ್ಕೆ ಬಂದರು. ಲೆನಿನ್ ಅಧಿಕಾರಕ್ಕೆ ಬಂದ ನಂತರ ಖಾಸಗಿ ಆಸ್ತಿಯನ್ನು ರಾಷ್ಟ್ರೀಕರಣಗೊಳಿಸಿದನು. ಅಧಿಕಾರವನ್ನು ಸೋವಿಯತ್‌ಗಳಿಗೆ ನೀಡಿದನು. ಕೈಗಾರಿಕೆಗಳ ಆಡಳಿತವನ್ನು ಕಾರ್ಮಿಕರ ಸೋವಿಯತ್‌ಗಳಿಗೆ ನೀಡಿದನು. ಅದೇ ರೀತಿ ಸೈನ್ಯದ ಆಡಳಿತವನ್ನು ಸೈನಿಕರ ಸೋವಿಯತ್‌ಗಳಿಗೆ ನೀಡಿದನು. ಈ ರೀತಿಯಾಗಿ ಅನೇಕ ಸುಧಾರಣೆಗಳನ್ನು ಕೈಗೊಂಡ ಕಮ್ಯುನಿಸ್ಟ್ ತತ್ವಗಳನ್ನು ರಷ್ಯಾದಲ್ಲಿ ಜಾರಿಗೊಳಿಸಿದನು. ಆದರೆ ಬೋಲ್ಷೆವಿಕ್‌ರ ವಿರುದ್ಧ ಅನೇಕ ಗುಂಪುಗಳು ಹುಟ್ಟಿಕೊಂಡು ಅವರ ಅಧಿಕಾರವನ್ನು ಕೊನೆಗೊಳಿಸಲು ಹೋರಾಟ ಪ್ರಾರಂಭಿಸಿದರು. ಅವರೆ ಬಿಳಿಯರು (Whites). ಈ ರೀತಿಯಾಗಿ ರಷ್ಯಾದಲ್ಲಿ ಬೋಲ್ಷೆವಿಕ್‌ರು (Reds) ಮತ್ತು ಅವರ ವಿರೋಧಿಗಳ (Whiters) ನಡುವೆ ಆಂತರಿಕ ಯುದ್ಧ ಪ್ರಾರಂಭವಾಯಿತು. ಮಿತ್ರ ರಾಷ್ಟ್ರಗಳು ಕೂಡ ಬೋಲ್ಷೆವಿಕ್‌ರ ವಿರೋಧಿ ಗುಂಪುಗಳಿಗೆ ಧನ ಸಹಾಯ ಮತ್ತು ಸೈನಿಕ ಸಹಾಯವನ್ನು ನೀಡಿದವು. ಆದುದರಿಂದಾಗಿ ಮೂರು ವರ್ಷಗಳ ಕಾಲ ಆಂತರಿಕ ಯುದ್ಧ ನಡೆಯಿತು. 1921 ರ ವೇಳೆಗೆ ಬೋಲ್ಷೆವಿಕ್‌ರು ತಮ್ಮ ವಿರೋಧಿಗಳನ್ನು ಸದೆಬಡಿದು ಶಾಂತಿಯನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾದರು. ಈ ರೀತಿಯಾಗಿ ಬೋಲ್ಷೆವಿಕ್‌ರು ತಮ್ಮ ಪರಮಾಧಿಕಾರವನ್ನು ಸ್ಥಾಪಿಸಿದರು. 1918 ರಲ್ಲಿ ರಷ್ಯಾವನ್ನು R.S.F.S.R. ಎಂದು ನಾಮಕರಣ ಮಾಡಲಾಯಿತು. ಅನಂತರ 1922 ರಲ್ಲಿ ಅದನ್ನು U.S.S.R ಎಂದು ಬದಲಾಯಿಸಲಾಯಿತು.

## 112.8 ಮಾದರಿ ಪ್ರಶ್ನೆಗಳು

1. 1917 ರ ರಷ್ಯಾದ ಕ್ರಾಂತಿಗೆ ಕಾರಣವಾದ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ವಿಮರ್ಶಾತ್ಮಕವಾಗಿ ಬರೆಯಿರಿ.
2. 1917 ರ ಬೋಲ್ಷೆವಿಕ್ ಕ್ರಾಂತಿಯನ್ನು ಕುರಿತು ಬರೆಯಿರಿ.
3. 1917 ರ ರಷ್ಯಾದ ಕ್ರಾಂತಿಯನ್ನು ಲೆನಿನ್‌ನ ನಾಯಕತ್ವದಲ್ಲಿ ಬೋಲ್ಷೆವಿಕ್‌ರು ವಹಿಸಿದ ಪಾತ್ರದ ಬಗ್ಗೆ ವಿವರಿಸಿ.

## 112.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. E.H. Carr : The Soviet Impact on the Western World
2. F.L. Scherman : Russia Since 1917, Four Decades of Soviet Politics
3. Mackenzie and Curran : A History of Russia and the Soviet Union
4. Gordon .A. Crarig : Europe since 1815.


ಪ್ರೊ. ಶಿವಣ್ಣ

# ಘಟಕ -113

## ಲೀಗ್ ಆಫ್ ನೇಷನ್ಸ್ (ರಾಷ್ಟ್ರ ಸಂಘ)

*ರಚನೆ*


113.0 ಉದ್ದೇಶಗಳು

113.1 ಪೀಠಿಕೆ

113.2 ರಾಷ್ಟ್ರಸಂಘದ ಅಂಗ ಸಂಸ್ಥೆಗಳು

113.2.1 ಮಹಾಸಭೆ

113.2.2 ಕೌನ್ಸಿಲ್

113.2.3 ಸಚಿವಾಲಯ

113.3 ಲೀಗ್‌ನ ಇನ್ನಿತರ ಅಂಗ ಸಂಸ್ಥೆಗಳು

113.3.1 ಖಾಯಂ ಅಂತರ ರಾಷ್ಟ್ರೀಯ ನ್ಯಾಯಾಲಯ

113.3.2 ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ

113.4 ಮ್ಯಾಂಡೇಟ್ ಪದ್ಧತಿ

113.5 ಲೀಗ್ ಕೈಗೊಂಡ ಕಾರ್ಯಗಳ ಸಫಲತೆ ಮತ್ತು ವಿಫಲತೆ

113.5.1 ಆಲ್ಯಾಂಡ್ ದ್ವೀಪಗಳ ವಿವಾದ

113.5.2 ಮೊಸೂಲ್ ಗಡಿ ವಿವಾದ

113.5.3 ಬೊಲಿವಿಯ ಮತ್ತು ಪರಗ್ವೆ

113.5.4 ಯುಪೆನ್ ಮತ್ತು ಮಾಲ್ಮೆಡಿ

113.5.5 ಬಲ್ಗೇರಿಯಾದ ಮೇಲೆ ಗ್ರೀಕ್‌ನ ದಾಳಿ

113.5.6 ಮಂಚೂರಿಯ ಬಿಕ್ಕಟ್ಟು

113.5.7 ಇಥಿಯೋಪಿಯಾದ ಮೇಲೆ ಇಟಲಿಯ ಆಕ್ರಮಣ

113.5.8 ಜರ್ಮನಿ ಮತ್ತು ಲೀಗ್

113.5.9 ಸಣ್ಣಪುಟ್ಟ ವಿವಾದಗಳು

113.6 ಲೀಗ್‌ನ ರಾಜಕೀಯೇತರ ಸಾಧನೆಗಳು

113.7 ಲೀಗ್‌ನ ವಿಫಲತೆಗೆ ಕಾರಣಗಳು

113.7.1 ಲೀಗ್‌ನನ್ನು ಶಾಂತಿ ಒಪ್ಪಂದದ ಒಂದು ಭಾಗವಾಗಿದ್ದುದು

113.7.2 ಜಾಗತಿಕ ಲಕ್ಷಣವನ್ನು ಹೊಂದಿರದೆ ಇದ್ದುದು

113.7.3 ಪ್ರಬಲ ರಾಷ್ಟ್ರಗಳ ಸ್ವಾರ್ಥ ನೀತಿ

113.7.4 ಅಂತರ ರಾಷ್ಟ್ರೀಯ ಸೈನ್ಯ ಇಲ್ಲದೆ ಇದ್ದುದು

113.7.5 ಸಂಕುಚಿತ ರಾಷ್ಟ್ರೀಯ ಭಾವನೆ

113.7.6 ಮತಚಲಾವಣೆಯಲ್ಲಿದ್ದ ನ್ಯೂನತೆ

113.7.7 ಲೀಗ್‌ನಲ್ಲಿ ನಂಬಿಕೆ ಇಲ್ಲದಿದ್ದುದು

113.7.8 ಸರ್ವಾಧಿಕಾರಿಗಳ ಏಳಿಗೆ

113.7.9 ಸಂಕ್ಷಿಪ್ತ ಅವಲೋಕನ

113.7.10 ಮಾದರಿ ಪ್ರಶ್ನೆಗಳು

113.7.11 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 113.0 ಉದ್ದೇಶಗಳು

ಈ ಘಟಕವನ್ನು ನೀವು ಅಧ್ಯಯನ ಮಾಡುವುದರಿಂದ ತಿಳಿದುಕೊಳ್ಳುವ ಅಂಶಗಳೆಂದರೆ

* ಲೀಗ್ ಆಫ್ ನೇಷನ್ಸ್ (ರಾಷ್ಟ್ರ ಸಂಘ) ಸ್ಥಾಪನೆಗೆ ಕಾರಣವಾದ ಅಂಶಗಳ ಬಗ್ಗೆ
* ಲೀಗ್‌ನ ಸ್ಥಾಪನೆಯಲ್ಲಿ ಅಮೇರಿಕಾದ ಅಧ್ಯಕ್ಷ ವಿಲ್ಸನ್ನನ ಪಾತ್ರ
* ಲೀಗ್‌ನ ಸದಸ್ಯ ರಾಷ್ಟ್ರಗಳು
* ಅದರ ಅಂಗ ಸಂಸ್ಥೆಗಳು
* ಮ್ಯಾಂಡೇಟ್ ಪದ್ಧತಿ
* ಅಂತರ ರಾಷ್ಟ್ರೀಯ ವಿವಾದಗಳನ್ನು ಬಗೆಹರಿಸುವುದರಲ್ಲಿ ಲೀಗ್ ವಹಿಸಿದ ಪಾತ್ರ
* ರಾಜಕೀಯೇತರ ವಿಷಯಗಳಲ್ಲಿ ಲೀಗ್‌ನ ಸಾಧನೆ
* ಲೀಗ್‌ನ ವೈಫಲ್ಯಕ್ಕೆ ಕಾರಣವಾದ ಅಂಶಗಳು

## 113.1 ಪೀಠಿಕೆ

ಲೀಗ್ ಆಫ್ ನೇಷನ್ಸ್‌ನ ಸ್ಥಾಪನೆ ವಿಶ್ವದಲ್ಲಿ ಯುದ್ಧವನ್ನು ತಡೆಗಟ್ಟಿ ಶಾಂತಿಯನ್ನು ಕಾಪಾಡಲು ಮಾಡಿದ ಮೊದಲನೆ ಪ್ರಯತ್ನ. 1914 ರಲ್ಲಿ ಪ್ರಾರಂಭವಾದ ಮೊದಲನೆ ಜಾಗತಿಕ ಯುದ್ಧ ಅತಿ ದೀರ್ಘ ಕಾಲ ಅಂದರೆ ನಾಲ್ಕು ವರ್ಷಗಳ ಕಾಲ ನಡೆದಿದುದು. ವಿಶ್ವದ ಜನತೆಯನ್ನು ಚಿಂತನೆಗೀಡುಮಾಡಿ ಇನ್ನು ಮುಂದೆ ಯುದ್ಧವು ನಡೆಯದಂತೆ ಮತ್ತು ಅದರಿಂದ ಉಂಟಾಗಬಹುದಾದ ಅನಾಹುತಗಳನ್ನು ತಡೆಗಟ್ಟಲು ಒಂದು ಅಂತರ ರಾಷ್ಟ್ರೀಯ ಸಂಸ್ಥೆಯ ಅವಶ್ಯಕತೆ ಇದೆ ಎಂಬ ಪ್ರಜ್ಞೆ ಮೂಡುವಂತೆ ಮಾಡಿತು.

ಲೀಗ್ ಆಫ್ ನೇಷನ್ಸ್ ಅಮೇರಿಕಾದ ಅಧ್ಯಕ್ಷ ವುಡ್ರೊ ವಿಲ್ಸನ್ನನ ಶಿಸು. ವಿಲ್ಸನ್ನನು ಯುದ್ಧ ಮುಕ್ತಾಯವಾಗುವ ಹಂತದಲ್ಲಿ ಪ್ರಕಟಿಸಿದ ಹದಿನಾಲ್ಕು ಅಂಶಗಳಲ್ಲಿ ಜಾಗತಿಕ ರಾಷ್ಟ್ರಗಳ ಸಂಘದ ಬಗ್ಗೆ ಪ್ರಸ್ತಾಪಿಸಿರುವನು. ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳುವ ಸಮಯದಲ್ಲಿ ವಿಲ್ಸನ್ನನು ಮಾಡಿಕೊಳ್ಳುವ ಸಮಯದಲ್ಲಿ ವಿಲ್ಸನ್ನನು ವಿಶ್ವದ ರಾಷ್ಟ್ರಗಳ ಸ್ಥಾಪನೆಗೆ ಒತ್ತು ನೀಡಿದನು. ಇದರ ಪರಿಣಾಮವಾಗಿ 1920 ರಲ್ಲಿ ರಾಷ್ಟ್ರ ಸಂಘ ಅಸ್ತಿತ್ವಕ್ಕೆ ಬಂತು. ಅದರ ಕೇಂದ್ರ ಕಛೇರಿಯು ಸ್ವಿಟ್ಜರ್ಲ್ಯಾಂಡಿನ ಜಿನೀವಾದಲ್ಲಿ ಸ್ಥಾಪಿಸಲ್ಪಟ್ಟಿತು.

ರಾಷ್ಟ್ರ ಸಂಘ ಮೂಲ ಸದಸ್ಯರು ರಾಷ್ಟ್ರಗಳು ಮತ್ತು ಮೂಲೇತರ ಸದಸ್ಯರು (non-original members) ಎಂಬ ಎರಡು ರೀತಿಯ ಸದಸ್ಯರಿಂದ ಕೂಡಿತ್ತು. ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳನ್ನು ಲೀಗ್‌ನ ಸ್ಥಾಪನೆಗೆ ಸಂಬಂಧಿಸಿದ ಒಡಂಬಡಿಕೆಗೂ ಸಹಿ ಹಾಕಲು ಆಹ್ವಾನಿಸಲಾಯಿತು. ಈ ರೀತಿಯಾಗಿ 1920 ರ ಮಾರ್ಚಿ ಇಪ್ಪತ್ತನೆ ತಾರೀಖಿನೊಳಗೆ ಸಹಿ ಹಾಕಿದ ರಾಷ್ಟ್ರಗಳನ್ನು ಮೂಲ ಸದಸ್ಯ ರಾಷ್ಟ್ರಗಳೆಂದು ಪರಿಗಣಿಸಲಾಯಿತು. ಮೂಲ ಸದಸ್ಯರ ಸಂಖ್ಯೆ 43. ಶಾಂತಿ ಒಪ್ಪಂದದ ಒಡಂಬಡಿಕೆಯನ್ನು ಯಾವುದೇ ಒಂದು ಸ್ವತಂತ್ರ ಆಳ್ವಿಕೆಯ ರಾಜ್ಯ, ಡೊಮಿನಿಯನ್ ಅಥವಾ ವಸಾಹತು ಲಾಗ್‌ನ ಮಹಾಸಭೆಯ 2/3 ರಷ್ಟು ಸದಸ್ಯರ ಒಪ್ಪಿಗೆ ಪಡೆದು ರಾಷ್ಟ್ರ ಸಂಘದ ಸದಸ್ಯತ್ವವನ್ನು ಪಡೆದುಕೊಳ್ಳಬಹುದಿತ್ತು.

## 113.2 ರಾಷ್ಟ್ರ ಸಂಘದ ಅಂಗ ಸಂಸ್ಥೆಗಳು

ಮಹಾಸಭೆ, ಕೌನ್ಸಿಲ್ ಮತ್ತು ಸೆಕ್ರೆಟರಿಯೆಟ್ ರಾಷ್ಟ್ರ ಸಂಘದ ಪ್ರಮುಖ ಅಂಗ ಸಂಸ್ಥೆಗಳಾಗಿದ್ದವು.

### *113.2.1 ಮಹಾಸಭೆ*

ಮಹಾಸಭೆಯು ಎಲ್ಲಾ ರಾಷ್ಟ್ರಗಳ ಸದಸ್ಯರಿಂದ ಕೂಡಿತ್ತು. ಪ್ರತಿಯೊಂದು ಸದಸ್ಯ ರಾಷ್ಟ್ರವು ಮೂವರು ಪ್ರತಿನಿಧಿಗಳನ್ನು ಕಳುಹಿಸಿಕೊಡಬಹುದಿತ್ತು. ಆದರೆ ಪ್ರತಿಯೊಂದು ಸದಸ್ಯ ರಾಷ್ಟ್ರಕ್ಕೆ ಒಂದೇ ಮತವನ್ನು ಮಾತ್ರ ಚಲಾಯಿಸುವ ಹಕ್ಕಿತ್ತು. ಮಹಾಸಭೆಯು ಪರಮಾಧಿಕಾರವನ್ನು ಹೊಂದಿತ್ತು. ಎಲ್ಲಾ ನಿರ್ಧಾರಗಳನ್ನು ಮಹಾಸಭೆಯು ಒಮ್ಮತದಿಂದ ತೆಗೆದುಕೊಳ್ಳಬೇಕಾಗಿತ್ತು. ಮಹಾಸಭೆಯು ಒಬ್ಬ ಅಧ್ಯಕ್ಷನನ್ನು ಮತ್ತು ಒಂಬತ್ತು ಉಪಾಧ್ಯಾಕ್ಷರನ್ನು ತಮ್ಮ ಸದಸ್ಯರುಗಳಿಂದ ಚುನಾಯಿಸುತ್ತಿದ್ದರು. ಇವರಿಬ್ಬರ ಅವಧಿ ಒಂದು ವರ್ಷ. ಒಂದು ವರ್ಷಕ್ಕೊಮ್ಮೆ ಈ ಸಭೆಯ ಅಧಿವೇಶನ ನಡೆಯುತ್ತಿತ್ತು. ಈ ಅಧಿವೇಶನದಲ್ಲಿ ಮಹಾಸಭೆಯು ಅಂತರ

ರಾಷ್ಟ್ರೀಯ ಸಂಬಂಧಿಸಿದ ರಾಜಕೀಯ, ಆರ್ಥಿಕ ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿತ್ತು. ಹಲವು ಬಾರಿ ವಿಶೇಷ ಅಧಿವೇಶನಗಳನ್ನು ಕೂಡ ಕರೆಯಲಾಗುತ್ತಿತ್ತು.

### *113.2.2 ಕೌನ್ಸಿಲ್ (ಮಹಾಮಂಡಳಿ)*

ಮಹಾಮಂಡಳಿಯು ಲೀಗ್‌ನ ಕಾರ್ಯಾಂಗವಾಗಿತ್ತು. ಮಹಾ ಮಂಡಳಿಯು ಖಾಯಂ ಸದಸ್ಯರು ಮತ್ತು ಖಾಯಂ ಅಲ್ಲದ ಸದಸ್ಯ ರಾಷ್ಟ್ರಗಳಿಂದ ಕೂಡಿತ್ತು. ಬ್ರಿಟನ್, ಫ್ರಾನ್ಸ್, ಇಟಲಿ ಮತ್ತು ಜಪಾನ್ ಖಾಯಂ ಸದಸ್ಯರಾಗಿದ್ದರು. ನಾಲ್ಕು ಖಾಯಂ ಅಲ್ಲದ ಸದಸ್ಯ ರಾಷ್ಟ್ರಗಳು ಕೂಡ ಇದ್ದವು. ಇವುಗಳ ಅಧಿಕಾರಾವಧಿ ಮೂರು ವರ್ಷಗಳಾಗಿದ್ದವು. 1937 ರ ವೇಳೆಗೆ ಖಾಯಂ ಅಲ್ಲದ ಸದಸ್ಯ ರಾಷ್ಟ್ರಗಳ ಸಂಖ್ಯೆ ಹನ್ನೊಂದಕ್ಕೇರಿತು. ಅಮೇರಿಕಾಕ್ಕೆ ಖಾಯಂ ಸದಸ್ಯ ರಾಷ್ಟ್ರವಾಗಲು ಅವಕಾಶವನ್ನು ಮಾಡಿಕೊಡಲಾಗಿತ್ತು. ಆದರೆ ಅಮೇರಿಕಾವು ರಾಷ್ಟ್ರ ಸಂಘದ ಸದಸ್ಯತ್ವವನ್ನು ಪಡೆಯಲಿಲ್ಲ. ಜರ್ಮನಿಯನ್ನು ಖಾಯಂ ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳುವುದರ ಮೂಲಕ ಅದರ ಸಂಖ್ಯೆಯು ಕೂಡ ಐದಕ್ಕೇರಿತು.

ಮಹಾಮಂಡಳಿಯು ವರ್ಷಕ್ಕೆ ಮೂರು ಭಾರಿ ಸಭೆ ಸೇರುತ್ತಿತ್ತು. ಮಹಾಮಂಡಳಿಯ ಸದಸ್ಯರು ಒಬ್ಬ ಅಧ್ಯಕ್ಷನನ್ನು ಚುನಾಯಿಸಿಕೊಳ್ಳುತ್ತಿದ್ದರು. ಮಹಾಮಂಡಳಿಯು ಮುಖ್ಯವಾಗಿ ಸದಸ್ಯ ರಾಷ್ಟ್ರಗಳನ್ನೂ ಶತ್ರುಗಳ ದಾಳಿಗಳಿಂದ ರಕ್ಷಿಸುವುದು, ಸದಸ್ಯ ರಾಷ್ಟ್ರಗಳ ನಡುವೆ ಇರುವ ವ್ಯಾಜ್ಯಗಳ ಬಗ್ಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದು. ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡಲು ಯೋಜನೆ ರೂಪಿಸುವುದು ಹಾಗೂ ಮ್ಯಾಂಡೇಟ್‌ಗಳ ಮೇಲ್ವಿಚಾರಣೆ ನಡೆಸುವುದು. ಮಹಾಮಂಡಳಿಯು ಹೆಚ್ಚು ಕಾರ್ಯಾಂಗದ ಅಧಿಕಾರವನ್ನು ಹೊಂದಿತ್ತು.

### *113.2.3 ಸಚಿವಾಲಯ (ಕಾರ್ಯಾಲಯ)*

ಸಚಿವಾಲಯವು ಲೀಗ್‌ನ ಮೂರನೆಯ ಮುಖ್ಯ ಅಂಗಸಂಸ್ಥೆ. ಕಾರ್ಯಾಲಯವು ಕೌನ್ಸಿಲ್‌ನಿಂದ ನೇಮಕಗೊಂಡು ಒಬ್ಬ ಪ್ರಧಾನ ಕಾರ್ಯದರ್ಶಿಯನ್ನು ಮತ್ತು ಇನ್ನಿತರ ಅಧಿಕಾರಿಗಳನ್ನು ಹೊಂದಿತ್ತು. ಸಚಿವಾಲಯವು ಜಿನೀವಾದಲ್ಲಿ ಸ್ಥಾಪಿತಗೊಂಡಿತ್ತು. ಕೌನ್ಸಿಲ್‌ನ ಅನುಮತಿ ಪಡೆದು ಕಾರ್ಯಾಲಯಕ್ಕೆ ಅವಶ್ಯಕತೆಯಿದ್ದ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದನು. ಕಾರ್ಯಾಲಯದ ವೆಚ್ಚವನ್ನು ಎಲ್ಲಾ ಸದಸ್ಯ ರಾಷ್ಟ್ರಗಳು ಭರಿಸುತ್ತಿದ್ದವು. ಪ್ರಧಾನ ಕಾರ್ಯದರ್ಶಿಯು ಅನೇಕ ರಾಷ್ಟ್ರಗಳು ತಮ್ಮ ತಮ್ಮಲ್ಲೇ ಮಾಡಿಕೊಂಡ ಒಪ್ಪಂದಗಳನ್ನು ದಾಖಲಿಸಿಕೊಂಡು ಅವುಗಳನ್ನು ಪ್ರಕಟಿಸುತ್ತಿದ್ದನು. ಪ್ರಧಾನ ಕಾರ್ಯದರ್ಶಿಯು ಮಹಾಸಭೆ ಮತ್ತು ಕೌನ್ಸಿಲ್‌ಗಳ ಮಹಾ ಅಧಿವೇಶನಗಳನ್ನು ಸಮಾವೇಶಗೊಳಿಸುತ್ತಿದ್ದನು. ಮೊಟ್ಟ ಮೊದಲನೆಯ ಮಹಾಕಾರ್ಯದಶಿ ಸರ್ ಜೇಮ್ಸ್ ಎರಿಕ್ ಡ್ರಮ್ಮೊಂಡ್.

## 113.3 ಲೀಗ್‌ನ ಇನ್ನಿತರ ಅಂಗ ಸಂಸ್ಥೆಗಳು

### *113.3.1 ಅಂತರ ರಾಷ್ಟ್ರೀಯ ಖಾಯಂ ನ್ಯಾಯಾಲಯ*

ರಾಷ್ಟ್ರ ಸಂಘದ ಒಡಂಬಡಿಕೆಯ ಹದಿನಾಲ್ಕನೆಯ ಭಾಗವು (Article) ಖಾಯಂ ಅಂತರರಾಷ್ಟ್ರೀಯ ನ್ಯಾಯಾಲಯವನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದೆ. ಆದ್ದರಿಂದ ಲೀಗ್ ಒಂದು ನಿಬಂಧನೆಯನ್ನು ಹೊರಡಿಸಿ ಖಾಯಂ ನ್ಯಾಯಾಲಯಕ್ಕೆ ಯೋಜನೆಯನ್ನು ರೂಪಿಸಿತು. 1922 ರ ಫೆಬ್ರವರಿ ಹದಿನೈದರಂದು ಈ ನ್ಯಾಯಾಲಯವು ತನ್ನ ಕಾರ್ಯವನ್ನು ಪ್ರಾರಂಭಿಸಿತು. ಅದರ ಕೇಂದ್ರ ಕಾರ್ಯ ಸ್ಥಾನ ಹೇಗ್ (ನೆದರ್ ಲ್ಯಾಂಡ್) ಅದರ ನ್ಯಾಯಾಧೀಶರನ್ನು ಕೌನ್ಸಿಲ್ ಮತ್ತು ಮಹಾಸಭೆ ಚುನಾಯಿಸಿ ನೇಮಕ ಮಾಡಲಾಗುತ್ತಿತ್ತು. ಅವರ ಅವಧಿ 9 ವರ್ಷಗಳು. ನ್ಯಾಯಾಲಯವು ತನಗೆ ಮನವಿ ಮಾಡಿಕೊಂಡ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ತೀರ್ಪನ್ನು ನೀಡುವ ಅಧಿಕಾರ ಹೊಂದಿತ್ತು. ಅಂತರ ರಾಷ್ಟ್ರೀಯ ನ್ಯಾಯಾಲಯದಿಂದ ಮಹಾಸಭೆ ಅಥವಾ ಕೌನ್ಸಿಲ್‌ಗೆ ಅವಶ್ಯಕತೆ ಇದ್ದಾಗ ಅಭಿಪ್ರಾಯಗಳನ್ನು ಪಡೆಯುತ್ತಿದ್ದವು.

### *113.3.2 ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ (I.L.O)*

ಲೀಗ್‌ನ ಒಡಂಬಡಿಕೆಯ 23 ನೆ ಭಾಗವು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸ್ಥಾಪನೆಗೆ ಸಂಬಂಧಿಸಿದುದು. ಇದು ಸ್ವಾಯತ್ತತೆಯನ್ನು ಹೊಂದಿದ್ದ ಈ ಸಂಘವು ಕೂಡ ಜಿನೀವಾದಲ್ಲಿ ಸ್ಥಾಪಿಸಲ್ಪಟ್ಟಿತು. ಈ ಸಂಸ್ಥೆಯ ಉದ್ದೇಶ ಶ್ರಮಜೀವಿಗಳ ಜೀವನವನ್ನು ಉತ್ತಮಗೊಳಿಸುವುದಾಗಿತ್ತು. ಎಲ್ಲಾ ಲೀಗ್‌ನ ಸದಸ್ಯರುಗಳು ಈ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸದಸ್ಯರಾಗಿದ್ದರು. ಲೀಗ್‌ನ ಸದಸ್ಯರಾಗಿಲ್ಲದೆ ಇದ್ದ ರಾಷ್ಟ್ರಗಳು ಕೂಡ I.L.O. ನ ಸದಸ್ಯರಾದರು. ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಸಾಮಾನ್ಯ ಸಭೆ, ಆಡಳಿತ ಮಂಡಳಿ ಮತ್ತು ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಯಿಂದ ಕೂಡಿತ್ತು ಮಹಾ ಸಭೆಗೆ ಪ್ರತಿಯೊಂದು ರಾಷ್ಟ್ರದಿಂದ ನಾಲ್ಕು ಪ್ರತಿನಿಧಿಗಳನ್ನು ಕಳುಹಿಸಬಹುದಿತ್ತು. ಇಬ್ಬರು ಪ್ರತಿನಿಧಿಗಳನ್ನು ಸರ್ಕಾರ ಮತ್ತು ಒಬ್ಬ ಪ್ರತಿನಿಧಿ ಕಾರ್ಮಿಕರನ್ನು ಮತ್ತು

ಮತ್ತೊಬ್ಬ ಮಾಲೀಕರನ್ನು ಪ್ರತಿನಿಧಿಸುತ್ತಿದ್ದರು. ರಾಷ್ಟ್ರಗಳ ಕಾರ್ಮಿಕರ ಶಾಸನಗಳಿಗೆ ಸಂಬಂಧಿಸಿದಂತೆ I.L.O. ಹಲವು ಮಾರ್ಗಸೂಚಿಗಳನ್ನು ಸಿದ್ಧಪಡಿಸಿತು.

ಆಡಳಿತ ಮಂಡಳಿಯು 32 ಸದಸ್ಯರಿಂದ ಕೂಡಿತ್ತು. ಸರ್ಕಾರ (16), ಮಾಲೀಕರು (8) ಮತ್ತು ಕಾರ್ಮಿಕರು (8) ಪ್ರತಿನಿಧಿಗಳನ್ನು ಕಳುಹಿಸಿಕೊಡಬಹುದಿತ್ತು. ಇವರು ಮೂರು ವರ್ಷಗಳವರೆಗೆ ಪ್ರತಿನಿಧಿಸುತ್ತಿದ್ದರು. ಅಂತಿಮವಾಗಿ ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಯನ್ನು ಸ್ಥಾಪಿಸಲಾಯಿತು. ಆಡಳಿತ ಮಂಡಳಿಯು ಒಬ್ಬ ನಿರ್ದೇಶಕನನ್ನು ಚುನಾಯಿಸಿ ಈ ಕಾರ್ಮಿಕ ಕಚೇರಿಯ ಮುಖ್ಯಸ್ಥನನ್ನಾಗಿ ನೇಮಕ ಮಾಡುತ್ತಿತ್ತು. ಈತನು ಆಡಳಿತ ಮಂಡಳಿಯು ನಿರ್ದೇಶನದಂತೆ ಕೆಲಸ ನಿರ್ವಹಿಸುತ್ತಿದ್ದನು.

ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಯು ಶ್ರಮಜೀವಿಗಳ ಸ್ಥಿತಿಗತಿಗಳ ಬಗ್ಗೆ, ನಿಯತ ಕಾಲಿಕೆಗಳಲ್ಲಿ ಪ್ರಕಟಿಸುತ್ತಿತ್ತು. ಸಭೆಗಳನ್ನು ಸಮಾವೇಶಗೊಳಿಸುತ್ತಿತ್ತು. ಅಂತರ ರಾಷ್ಟ್ರೀಯ ಕಾರ್ಮಿಕರ ಸ್ಥಿಗತಿಗಳನ್ನು ಸುಧಾರಿಸಲು ಅದರಲ್ಲೂ ವಿಶೇಷವಾಗಿ ಸ್ತ್ರೀಯರು ಮತ್ತು ಮಕ್ಕಳ ಕ್ಷೇಮಾಬಿವೃದ್ಧಿಯ ಕಡೆ ಗಮನ ಹರಿಸಬೇಕಾಗಿತ್ತು. ಕಾರ್ಮಿಕರ ಶಾಸನದ ಬಗ್ಗೆ ಒಂಬತ್ತು ತತ್ವಗಳನ್ನು ಒಪ್ಪಿಕೊಳ್ಳಲಾಯಿತು.

(1) ಕಾರ್ಮಿಕರನ್ನು ಒಂದು ವಸ್ತುವಂತೆ ಪರಿಗಣಿಸಬಾರದು.

(2) ನೌಕರರೂ ಮತ್ತು ದಣಿಗಳು ಸಂಘವನ್ನು ರಚಿಸಿಕೊಳ್ಳುವ ಹಕ್ಕಿರುವುದು.

(3) ತಕ್ಕ ದರ್ಜೆಯ ಜೀವನವನ್ನೂ ನಡೆಸುವುದಕ್ಕೆ ಸಾಕಾಗುವಷ್ಟು ಕೂಲಿಯನ್ನು ಕೊಡುವುದು

(4) ಒಂದು ದಿನಕ್ಕೆ ಎಂಟು ಗಂಟೆಗಳ ಕಾಲ ಅಥವಾ ವಾರಕ್ಕೆ ನಲವತ್ತೆಂಟು ಗಂಟೆಗಳ ಕಾಲ ಕೆಲಸ ಮಾಡುವುದು

(5) ವಾರಕ್ಕೆ ಎರಡು ದಿನಗಳ ವಿಶ್ರಾಂತಿ ಇರುವುದು

(6) ಮಕ್ಕಳ ದುಡಿಮೆಯನ್ನು ರದ್ದುಗೊಳಿಸುವುದು

(7) ಅವರ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲತೆಗಳನ್ನು ಒದಗಿಸಿಕೊಡುವುದು

(8) ಲಿಂಗ ಭೇದವಿಲ್ಲದೆ ಸರಿಸಮವಾದ ಕೆಲಸಕ್ಕೆ ಸರಿಸಮಾನ ಸಂಬಳ ಕೊಡುವುದು

(9) ದುಡಿಮೆಗಾರರಿಗೆ ಸಮಾನ ಆರ್ಥಿಕ ಸೌಲಭ್ಯಗಳನ್ನು ಒದಗಿಸಿಕೊಡುವುದು ಮತ್ತು ಸ್ತ್ರೀಯರೂ ಪಾಲ್ಗೊಳ್ಳಬಹುದಾದ ವಿಚಾರಣೆ ಪದ್ಧತಿ ಇರುವುದು. ಇವುಗಳು ಕಾರ್ಮಿಕ ಶಾಸನದ ಒಂಬತ್ತು ಸೂತ್ರಗಳು.

## 113.4 ಮ್ಯಾಂಡೇಟ್ ಪದ್ಧತಿ

ಲೀಗ್‌ನಲ್ಲಿ ಮ್ಯಾಂಡೇಟ್ ಪದ್ಧತಿಗೆ ಅವಕಾಶ ಮಾಡಲಾಯಿತು. ಜರ್ಮನಿ, ಆಸ್ಟ್ರಿಯಾ-ಹಂಗೇರಿ ಮತ್ತು ತುರ್ಕಿಯ ಒಡೆತನದಲ್ಲಿದ್ದ ವಸಾಹತುಗಳನ್ನು (ಗೆದ್ದ ಪ್ರದೇಶಗಳನ್ನು) ಪುನಃ ಅವುಗಳಿಗೆ ಹಿಂದಿರುಗಿಸಲಿಲ್ಲ. ವಿಜಯಿ ರಾಷ್ಟ್ರಗಳು ಕೂಡ ಈ ಪ್ರದೇಶಗಳನ್ನು ನೀಡಲಿಲ್ಲ. ಇಂತಹ ಪ್ರದೇಶಗಳ ಆಡಳಿತವನ್ನು ಲೀಗ್‌ನ ನೇತೃತ್ವದಲ್ಲಿ ನಿರ್ವಹಿಸಲು ಹಲವು ರಾಷ್ಟ್ರಗಳನ್ನು ನೇಮಿಸಲಾಯಿತು. ಇದನ್ನೇ ಮ್ಯಾಂಡೇಟ್ ಪದ್ಧತಿ ಎಂದು ವಿವರಿಸಲಾಗಿದೆ. ಈ ಮ್ಯಾಂಡೆಟರಿ ಆಡಳಿತವನ್ನು ನಡೆಸುತ್ತಿದ್ದ ಬೃಹತ್ ರಾಷ್ಟ್ರಗಳಿಂದ ಆಗಾಗ್ಗೆ ವರದಿಯನ್ನು ಪಡೆದು, ಅವುಗಳಿಗೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಮಾರ್ಗದರ್ಶನವನ್ನು ಲೀಗ್ ನೀಡುತ್ತಿತ್ತು.

### *113.5 ಲೀಗ್ ಕೈಗೊಂಡ ಕೆಲಸಗಳ ಸಫಲತೆ ಮತ್ತು ವಿಫಲತೆ*

ಲೀಗ್‌ನ ಮುಖ್ಯ ಕೆಲಸ ಯುದ್ಧಗಳನ್ನು ತಡೆಗಟ್ಟಿ ಪ್ರಪಂಚದಲ್ಲಿ ಶಾಂತಿಯನ್ನು ಕಾಪಾಡುವುದಾಗಿತ್ತು. ನಿಶಸ್ತ್ರೀಕರಣದ ಕಡೆ ಗಮನ ಹರಿಸುವುದು ಮತ್ತು ಪ್ರತಿಯೊಂದು ರಾಷ್ಟ್ರದ ಸೈನ್ಯದ ಸಂಖ್ಯೆಯನ್ನು ಕಡಿತಗೊಳಿಸುವ ಕಡೆ ಗಮನ ಹರಿಸಬೇಕಾಗಿತ್ತು. ಲೀಗ್‌ನ ಸದಸ್ಯರುಗಳು ಯುದ್ಧ ಮಾರ್ಗವನ್ನು ಬಿಟ್ಟು ಸಂಧಾನದ ಮಾರ್ಗವನ್ನೇ ಅನುಸರಿಸಿ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕೆಂದು ತಿಳಿಸಲಾಯಿತು. ಲೀಗ್‌ನ ನಿಬಂಧನೆಗಳನ್ನು ಉಲ್ಲಂಘಿಸುವ ರಾಷ್ಟ್ರದ ವಿರುದ್ಧ ಒಗ್ಗಟ್ಟಿನಿಂದ ಕ್ರಮ ಕೈಗೊಳ್ಳಲು ಲೀಗ್‌ನ ಸದಸ್ಯರುಗಳಿಗೆ ಅಧಿಕಾರ ನೀಡಲಾಯಿತು. ಮಾನವತೆಯ ಕ್ಷೇಮಾಭಿವೃದ್ಧಿಯ ಕಡೆ ಗಮನ ಹರಿಸಲು ಲೀಗ್ ರೂಪು ರೇಖೆಗಳನ್ನು ಸಿದ್ಧ ಪಡಿಸಬೇಕಾಗಿತ್ತು.

ಲೀಗ್ ಅಸ್ತಿತ್ವದಲ್ಲಿದ್ದ 20 ವರ್ಷಗಳ ಅವಧಿಯಲ್ಲಿ ಅನೇಕ ರಾಜಕೀಯ ವಿವಾದಗಳನ್ನು ನಿರ್ವಹಿಸುವ ಸಮಸ್ಯೆಯನ್ನು ಎದುರಿಸಿತು. ಅನೇಕ ವಿವಾದಗಳನ್ನು ಸೌಹಾರ್ಧಯುತವಾಗಿ ಬಗೆಹರಿಸಲಾಯಿತು. ಸಣ್ಣಪುಟ್ಟ ರಾಷ್ಟ್ರಗಳ ನಡುವೆ ಉದ್ಭವಿಸುತ್ತಿದ್ದ ವಿವಾದಗಳನ್ನು ಸುಲಭವಾಗಿ ಬಗೆಹರಿಸಿತು.

### 113.5.1 ಆಲ್ಯಾಂಡ್ ದ್ವೀಪಗಳ ವಿವಾದ (Aaland islands)

ಬಾಲ್ಟಿಕ್ ಪ್ರದೇಶದಲ್ಲಿದ್ದ ಆಲ್ಯಾಂಡ್ ದ್ವೀಪಗಳ ಒಡೆತನಕ್ಕೆ ಸಂಬಂಧಿಸಿದಂತೆ ಫಿನ್‌ಲ್ಯಾಂಡ್ ಮತ್ತು ಸ್ವೀಡನ್ ನಡುವೆ ವಿವಾದ ಉಂಟಾಯಿತು. ಒಂದಾನೊಂದು ಕಾಲದಲ್ಲಿ ಫಿನ್‌ಲ್ಯಾಂಡ್ ಮತ್ತು ಆಲ್ಯಾಂಡ್ ದ್ವೀಪಗಳು ಸ್ವೀಡನ್ನಿನ ವಶದಲ್ಲಿದ್ದವು. 1917 ರಲ್ಲಿ ಫಿನ್‌ಲ್ಯಾಂಡ್ ತನ್ನ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿತು. ಸ್ವೀಡನ್ ಕೂಡ 1918 ರಲ್ಲಿ ಫಿನ್‌ಲ್ಯಾಂಡಿನ ಸ್ವಾತಂತ್ರ್ಯವನ್ನು ಮಾನ್ಯ ಮಾಡಿತು. ಆಗ ಆಲ್ಯಾಂಡ್ ದ್ವೀಪಗಳ ಬಗ್ಗೆ ಯಾವುದೇ ಚಕಾರವೆತ್ತಲಿಲ್ಲ. ಆದರೆ ಆಲ್ಯಾಂಡಿನ ಜನತೆಯ ಬಹುತೇಕ ಮಂದಿ ಸ್ವೀಡನ್ನಿನವರಾಗಿದ್ದುದರಿಂದ ಮತ್ತು ಸ್ವೀಡಿಷ್ ಭಾಷೆಯನ್ನು ಮಾತನಾಡುತ್ತಿದ್ದುದರಿಂದ ಅವರು ಸ್ವೀಡನ್ನಿನ ಜೊತೆ ಸೇರಬೇಕೆಂದು ಬಯಸಿ ಆಂದೋಲನ ಪ್ರಾರಂಭಿಸಿದರು. ಬ್ರಿಟನ್ ಈ ವಿವಾದವನ್ನು ಕೌನ್ಸಿಲ್‌ನ ಗಮನಕ್ಕೆ ತಂದಿತು. 1921 ಲೀಗ್ ಈ ವಿವಾದಕ್ಕೆ ಸಂಬಂಧಿಸಿದಂತೆ ತನ್ನ ನಿರ್ಧಾರವನ್ನು ಪ್ರಕಟಿಸಿತು. ಫಿನ್‌ಲ್ಯಾಂಡಿಗೆ ಈ ದ್ವೀಪಗಳ ಮೇಲೆ ಪ್ರಭುತ್ವದ ಅಧಿಕಾರವನ್ನು ನೀಡಿದರು ಕೂಡ ಅವುಗಳಿಗೆ ಸ್ವಾಯತ್ತತೆಯನ್ನು ನೀಡಿ ರಾಜಕೀಯ ಹಕ್ಕುಗಳನ್ನು ಕಾಪಾಡಿಕೊಳ್ಳಲು ಅಧಿಕಾರ ನೀಡಲಾಯಿತು.

### 113.5.2 ಮೊಸೂಲ್ ಗಡಿ ವಿವಾದ

ಲೌಸಾನೆ ಒಪ್ಪಂದದಲ್ಲಿ ತುರ್ಕಿ ಮತ್ತು ಇರಾಕ್‌ನ ನಡುವಣ ಇರುವ ಗಡಿಯನ್ನು ಸೌಹಾರ್ಧಯುತವಾಗಿ ನಿರ್ಧರಿಸಿಕೊಳ್ಳಬೇಕೆಂಬುದಾಗಿ ತಿಳಿಸಲಾಗಿತ್ತು. ಆಕಸ್ಮಿಕವಾಗಿ 9 ತಿಂಗಳಲ್ಲಿ ಗಡಿಯನ್ನು ನಿರ್ಧರಿಸಿಕೊಳ್ಳುವುದರಲ್ಲಿ ವಿಫಲವಾದರೆ ಕೌನ್ಸಿಲ್‌ಗೆ ಈ ವಿವಾದವನ್ನು ಮನವಿ ಮಾಡಿಕೊಳ್ಳುವಂತೆ ತಿಳಿಸಲಾಗಿತ್ತು. ಎರಡು ದೇಶಗಳು ಕೂಡ ಮೊಸೂಲ್ ಕಣಿವೆಯ ಮೇಲೆ ತಮ್ಮ ಅಧಿಕಾರವನ್ನು ಹೊಂದಲು ಪ್ರಯತ್ನಿಸಿದವು. 1924 ರಲ್ಲಿ ಈ ವಿವಾದವನ್ನು ಮಹಾಮಂಡಳಿಗೆ ಸಲ್ಲಿಸಲಾಯಿತು. ಅಂತಿಮವಾಗಿ ಮಹಾಮಂಡಳಿ ತನ್ನ ನಿರ್ಧಾರವನ್ನು ಪ್ರಕಟಿಸಿತು. ಬ್ರಸೆಲ್ಸ್‌ನ ರೇಖೆ ತುರ್ಕಿ ಮತ್ತು ಇರಾಕಿನ ನಡುವಣ ಗಡಿ ಎಂದು ನಿರ್ಧರಿಸಲಾಯಿತು (ಇರಾಕ್ ಬ್ರಿಟನ್ನಿನ ಮ್ಯಾಂಡೇಟ್ ಆಗಿತ್ತು).

ಇರಾಕಿನ ಗಡಿಯಲ್ಲಿದ್ದ ಖುರ್ದಿಷ್ ಜನಾಂಗಕ್ಕೆ ಖುರ್ದಿಷ್ ನವರನ್ನೇ ಸ್ಥಳೀಯ ಅಧಿಕಾರಿಗಳನ್ನಾಗಿ ನೇಮಿಸಲು ಭರವಸೆ ನೀಡಲಾಯಿತು ಹಾಗೂ ಶಾಲೆಗಳಲ್ಲಿ ಖುರ್ದಿಷ್ ಭಾಷೆಯನ್ನೇ ಬೋಧನೆಗೆ ಮುಂದುವರಿಸಲು ಆಶ್ವಾಸನೆ ನೀಡಲಾಯಿತು. ಆದಾಗ್ಯೂ 1926 ರ ಜೂನ್ ತಿಂಗಳಲ್ಲಿ ತುರ್ಕಿ ಮತ್ತು ಬ್ರಿಟನ್ನಿನ ನಡುವೆ ಒಂದು ಒಪ್ಪಂದವೇರ್ಪಟ್ಟು, ಅದರ ಪ್ರಕಾರ ವಿಲಾಯತ್‌ನ್ನು ತುರ್ಕಿಗೆ ನೀಡಲಾಯಿತು. ತುರ್ಕಿಗೆ ಮೊಸೂಲ್‌ನ ತೈಲ ಬಾವಿಗಳಿಗೆ ಸಂಬಂಧಿಸಿದಂತೆ ಗೌರವ ಧನವನ್ನು ನೀಡಲಾಯಿತು.

### 113.5.3 ಬೊಲಿವಿಯ ಮತ್ತು ಪರಗ್ವೆ

1928 ರಲ್ಲಿ ಬೊಲಿವಿಯ ಮತ್ತು ಪರಗ್ವೆ ನಡುವೆ ಯುದ್ಧ ಪ್ರಾರಂಭವಾಯಿತು. ಅನೇಕ ವರ್ಷಗಳವರೆಗೆ ವಿವಾದ ಮುಂದುವರಿಯಿತು. ಆದರೆ ಲೀಗ್ ಶಾಶ್ವತವಾಗಿ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಲಿಲ್ಲ.

### 113.5.4 ಯೂಪೆನ್ ಮತ್ತು ಮಾಲ್‌ಮೆಡಿ

1920-21 ರಲ್ಲಿ ಜರ್ಮನಿ ಮತ್ತು ಬೆಲ್ಜಿಯಂನ ನಡುವೆ ಯೂಪೆನ್ ಮತ್ತು ಮಾಲ್‌ಮೆಡಿ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿವಾದ ಪ್ರಾರಂಭವಾಯಿತು. ಜರ್ಮನಿಯು ಯೂಪೆನ್ ಮತ್ತು ಮಾಲ್‌ಮೇಡಿ ಪ್ರದೇಶಗಳನ್ನು ಬೆಲ್ಜಿಯಂಗೆ ನೀಡುವುದರ ವಿರುದ್ಧ ತನ್ನ ವಿರೋಧವನ್ನು ವ್ಯಕ್ತಪಡಿಸಿ ಅನೇಕ ಕಾಗದಗಳನ್ನು ಮಹಾಮಂಡಳಿಗೆ ಬರೆಯಿತು. 1920 ರಲ್ಲಿ ಕೌನ್ಸಿಲ್ ಒಂದು ಶೀರ್ಮಾನ ತೆಗೆದುಕೊಂಡು ಯೂಪೆನ್ ಮತ್ತು ಮಾಲ್‌ಮೇಡಿ ಪ್ರದೇಶಗಳನ್ನು ಬೆಲ್ಜಿಯಂಗೆ ನೀಡಲಾಗಿದೆ ಎಂದು ಜರ್ಮನಿಗೆ ಪತ್ರ ಬರೆಯಿತು.

### 113.5.5 ಬಲ್ಗೇರಿಯಾ ಮೇಲೆ ಗ್ರೀಕ್ ದಾಳಿ

ಗಡಿಯ ಘಟನೆಗಳಿಗೆ ಸಂಬಂಧಿಸಿದಂತೆ ಗ್ರೀಸ್ ಮತ್ತು ಬಲ್ಗೇರಿಯ ಬಿಕ್ಕಟ್ಟು ತಲೆದೋರಿತು. 1925 ರ ಅಕ್ಟೋಬರ್‌ನಲ್ಲಿ ಒಬ್ಬ ಗ್ರೀಕ್ ದಂಡನಾಯಕ ಮತ್ತು ಅವನ ಅಧೀನದಲ್ಲಿದ್ದ ಹಲವು ಸೈನಿಕರು ಕೊಲ್ಲಲ್ಪಟ್ಟರು. ಆದ್ದರಿಂದ ಬಲ್ಗೇರಿಯಾದ ಮೇಲೆ ಗ್ರೀಸ್ ದಾಳಿ ಮಾಡಿತು. ಅನಂತರ ಬಲ್ಗೇರಿಯ ಸರ್ಕಾರ ಲೀಗ್‌ನ ಕೌನ್ಸಿಲ್‌ಗೆ ಮನವಿ ಮಾಡಿಕೊಂಡಿತು. ಕೌನ್ಸಿಲ್ ಎರಡು ರಾಷ್ಟ್ರಗಳಿಗೂ ತಮ್ಮ ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳುವಂತೆ ಆಜ್ಞಾಪಿಸಿತು. ಎರಡು ಕಡೆಯವರು ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಂಡರು. ಅನಂತರ ಎರಡು ದೇಶಗಳ ಗಡಿಯ ಬಗ್ಗೆ ಅಧ್ಯಯನ ಮಾಡಲು ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತು ಇಟಲಿಯ

ಮಿಲಿಟರಿ ಅಧಿಕಾರಿಗಳನ್ನು ಕಳುಹಿಸಿಕೊಡಲಾಯಿತು. ಇಂತಹ ಕ್ರಮಗಳು ಗ್ರೀಸ್‌ನ ಮೇಲೆ ಹೆಚ್ಚು ಪರಿಣಾಮ ಬೀರಿದವು. ಗ್ರೀಸ್ ಗಡಿಯಿಂದ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡಿತು. ಬಲ್ಗೇರಿಯಾಕ್ಕೆ ಪರಿಹಾರವನ್ನು ನೀಡುವಂತೆ ಗ್ರೀಸ್‌ಗೆ ತಿಳಿಸಲಾಯಿತು. ಈ ಕ್ರಮಗಳಿಂದಾಗಿ ಶಾಂತಿಯನ್ನು ಗ್ರೀಸ್ ಮತ್ತು ಬಲ್ಗೇರಿಯ ರಾಷ್ಟ್ರಗಳ ನಡುವೆ ಶಾಂತಿ ಸ್ಥಾಪಿಸಲ್ಪಟ್ಟಿತು.

### *113.5.6 ಮಂಚೂರಿಯ ಬಿಕ್ಕಟ್ಟು*

1931 ರಲ್ಲಿ ಮಂಚೂರಿಯಾದಲ್ಲಿ ಒಂದು ಬಿಕ್ಕಟ್ಟು ತಲೆದೋರಿತು. ರೈಲ್ವೆಯ ಆಸ್ತಿಯನ್ನು ಚೀನಾ ನಾಶಪಡಿಸಿದೆ ಎಂಬ ನೆಪದ ಮೇಲೆ ಮಧ್ಯ ಮಂಚೂರಿಯವನ್ನು ಜಪಾನ್ ಆಕ್ರಮಿಸಿಕೊಂಡಿತು. ಚೀನಾ ತಕ್ಷಣವೇ ಲೀಗ್‌ಗೆ ಈ ವಿವಾದದ ಬಗ್ಗೆ ಮನವಿ ಮಾಡಿಕೊಂಡಿತು. ಜಪಾನ್‌ಗೆ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳುವಂತೆ ಲೀಗ್ ಆದೇಶಿಸಿತು. ಆದರೆ ಜಪಾನ್ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ನಿರಾಕರಿಸಿತು. ಆದ್ದರಿಂದ ಲೀಗ್ ಐದು ಮಂದಿ ಸದಸ್ಯರ ಒಂದು ಸಮಿತಿಯನ್ನು ನೇಮಕ ಮಾಡಿ ಬಿಕ್ಕಟ್ಟಿನ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಕೇಳಿಕೊಂಡಿತು. ಈ ಮಧ್ಯೆ ಜಪಾನ್ ಷಾಂಗೈಯ್ ನಗರವನ್ನು ಆಕ್ರಮಿಸಿಕೊಂಡಿತು. ಪುನಃ ಚೀನಾ ಲೀಗ್‌ಗೆ ಮನವಿ ಮಾಡಿಕೊಂಡಿತು. ಲೀಗ್ ಮತ್ತೆ ಜಪಾನಿಗೆ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳುವಂತೆ ಆಜ್ಞಾಪಿಸಿತು. ಆದರೆ ಈ ಬಾರಿಯು ಕೂಡ ಜಪಾನ್ ಲೀಗ್‌ನ ಮಾತಿಗೆ ಬೆಲೆಕೊಡಲಿಲ್ಲ. ಅದರ ಬದಲು ಜಪಾನ್ ಮಂಚೂರಿಯಾದಲ್ಲಿ ಮಂಚುಕೊ ಎಂಬ ಉಪರಾಜ್ಯವನ್ನು ಸ್ಥಾಪಿಸಿತು. ಲೀಗ್ ಏನನ್ನು ಮಾಡಲು ಸಾಧ್ಯವಿಲ್ಲದಂತಾಯಿತು. ಅದು ಕೇವಲ ಜಪಾನಿನ ನೀತಿಯನ್ನು ಗೊತ್ತುವಳಿಯ ಮೂಲಕ ಖಂಡಿಸಿ ತೆಪ್ಪಗಿರಬೇಕಾಯಿತು. ಜಪಾನ್ ಈ ಗೊತ್ತುವಳಿಯನ್ನು ಧಿಕ್ಕರಿಸಿ ಲೀಗ್ ಆಫ್ ನೇಷನ್ಸ್‌ನಿಂದ ಹೊರಬಂದಿತು.

### *113.5.7 ಇಥಿಯೋಪಿಯಾದ ಮೇಲೆ ಇಟಲಿಯ ಆಕ್ರಮಣ*

1935 ರಲ್ಲಿ ಮತ್ತೊಂದು ರಾಜಕೀಯ ಬಿಕ್ಕಟ್ಟು ಉಂಟಾಯಿತು. ಇಟಲಿ ಇಥಿಯೋಪಿಯಾದ ಮೇಲೆ ಆಕ್ರಮಣ ನಡೆಸಿತು. ತಕ್ಷಣವೇ ಇಥಿಯೋಪಿಯ ಲೀಗ್ ಆಫ್ ನೇಷನ್ಸ್‌ಗೆ ಮನವಿ ಸಲ್ಲಿಸಿತು. ಕೌನ್ಸಿಲ್ ಆರು ಮಂದಿಯಿಂದ ಕೂಡಿದ್ದ ಒಂದು ಸಮಿತಿಯನ್ನು ನೇಮಕ ಮಾಡಿ ಈ ಘಟನೆಗೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಕೇಳಿಕೊಂಡಿತು. ಸಮಿತಿಯು ಇಟಲಿಯ ಆಕ್ರಮಣ (ಮುಸೋಲಿನಿ) ವೇ ಈ ವಿವಾದಕ್ಕೆ ಕಾರಣವೆಂದು ತಿಳಿಸಿತು. ಅನಂತರ ಲೀಗ್ ಇಟಲಿಯ ಮೇಲೆ ಆರ್ಥಿಕ ದಿಗ್ಬಂಧನವನ್ನು ಹಾಕಿತು. ಆದರೆ ಲೀಗ್ ಯಾವುದೇ ಸೈನಿಕ ಕಾರ್ಯಾಚರಣೆ ಕೈಗೊಳ್ಳಲು ಪ್ರಯತ್ನಿಸಲಿಲ್ಲ. ಲೀಗ್‌ನ ಈ ದುರ್ಬಲತೆಯನ್ನು ಅರಿತ ಇಟಲಿ ಇಥಿಯೋಪಿಯವನ್ನು ಆಕ್ರಮಿಸಿಕೊಂಡಿತು. ಇಥಿಯೋಪಿಯಾದ ಸಹಾಯಕ್ಕೆ ಲೀಗ್ ಬರಲೇ ಇಲ್ಲ. ಇಥಿಯೋಪಿಯ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಲೀಗ್ ವಿಫಲವಾದುದರಿಂದ ಅದರ ಪ್ರತಿಷ್ಠೆಗೆ ಧಕ್ಕೆ ಉಂಟಾದಂತಾಯಿತು. 1938 ರ ವೇಳೆಗೆ ಬ್ರಿಟನ್ ಮತ್ತು ಫ್ರಾನ್ಸ್ ಇಥಿಯೋಪಿಯವನ್ನು ಇಟಲಿ ವಶಪಡಿಸಿಕೊಂಡಿದುದಕ್ಕೆ ಮಾನ್ಯತೆ ನೀಡಿದವು. ಅಲ್ಲಿಗೆ ಲೀಗ್‌ನ ಭದ್ರತಾ ವ್ಯವಸ್ಥೆ ಕುಸಿದು ಬಿದ್ದಂತಾಯಿತು. ಲೀಗ್ ಈ ವೇಳೆಗೆ ಸಂಪೂರ್ಣವಾಗಿ ನಿಷ್ಕ್ರಿಯಗೊಂಡು ಸತ್ತಂತಿತ್ತು.

### *113.5.8 ಜರ್ಮನಿ ಮತ್ತು ಲೀಗ್*

ಜರ್ಮನಿಯು ಲೀಗ್‌ಗೆ ಹೆಚ್ಚಿನ ಸಮಸ್ಯೆಯನ್ನುಂಟು ಮಾಡಿತು. ಅದು ಲೀಗ್‌ನ ಅಸ್ತಿತ್ವಕ್ಕೆ ಧಕ್ಕೆ ಉಂಟು ಮಾಡಿತು. ವರ್ಸೈಲ್ಸ್ ಒಪ್ಪಂದವನ್ನು ಉಲ್ಲಂಘಿಸಿ ಕಡ್ಡಾಯ ಸೈನಿಕ ಸೇವೆಯನ್ನು ಜರ್ಮನಿ ಜಾರಿಗೊಳಿಸಿತು. ರೈನ್ ಲ್ಯಾಂಡ್‌ನಲ್ಲಿ ಸೈನ್ಯವನ್ನು ಜಮಾಯಿಸಲು ಪ್ರಾರಂಭಿಸಿತು. ಆದರೆ ಲೀಗ್ ಜರ್ಮನಿಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. 1936 ರಲ್ಲಿ ಸ್ಪೇನಿನಲ್ಲಿ ಆಂತರಿಕ ಕಲಹ ಪ್ರಾರಂಭವಾದಾಗ ಜನರಲ್ ಫ್ರಾಂಕೊನಿಗೆ ಹಿಟ್ಲರ್ ಮತ್ತು ಮುಸ್ಸೋಲಿನಿ ಎಲ್ಲಾ ರೀತಿಯ ಸಹಾಯ ನೀಡಿ ಅವನ ಬೆಂಬಲಕ್ಕೆ ನಿಂತರು. ಜರ್ಮನ್ ಆಸ್ಟ್ರಿಯ ಗಣರಾಜ್ಯವನ್ನು ಹಿಟ್ಲರ್ ವಶಪಡಿಸಿಕೊಂಡಾಗ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಲಿಲ್ಲ. ಲೀಗ್ ಕೂಡ ಯಾವುದೇ ಕ್ರಮಕೈಗೊಳ್ಳಲಿಲ್ಲ. ಜರ್ಮನಿಯು ಚೆಕೊಸ್ಲೊವೆಕಿಯ ಮೇಲೆ ದಾಳಿ ಮಾಡಿತು. ಲೀಗ್ ಯಾವುದೇ ಕ್ರಮ ಕೈಗೊಳ್ಳಲು ಮುಂದೆ ಬರಲಿಲ್ಲ. ಲೀಗ್‌ನ ಇಂತಹ ನಿಲುವು ಜರ್ಮನಿಗೆ ತನ್ನ ಯೋಜನೆಗಳನ್ನು ಮುಂದುವರಿಸಲು ಪ್ರೋತ್ಸಾಹ ನೀಡಿದಂತಾಯಿತು. 1939 ರಲ್ಲಿ ಪೋಲೆಂಡಿನ ಮೇಲೆ ಆಕ್ರಮಣ ನಡೆಸಿತು. ಈ ಘಟನೆಯು ಎರಡನೆಯ ಜಾಗತಿಕ ಯುದ್ಧಕ್ಕೆ ಕಾರಣವಾಯಿತು.

### *113.5.9 ಸಣ್ಣ ಪುಟ್ಟ ವಿವಾದಗಳು (ಲಘು)*

ಲೀಗ್ ಸಣ್ಣ ಪುಟ್ಟ ವಿವಾದಗಳನ್ನು ಬಗೆಹರಿಸಲು ಪ್ರಯತ್ನ ನಡೆಸಿತು. ಪೋಲೆಂಡ್ ಮತ್ತು ಲಿಥುಯೆನಿಯ ನಡುವೆ ವಿಲ್ನ ನಗರ (1920-22) ದ ಬಗ್ಗೆ ಇದ್ದ ವಿವಾದ, ಸೈಲಿಸಿಯ (1921) ಹಂಗೇರಿ ಮತ್ತು ರುಮೇನಿಯ ನಡುವಣ ಸಮಸ್ಯೆ (1923-30) ಅಲ್ಬೇನಿಯ ಮತ್ತು ಯುಗೊಸ್ಲಾವಿಯ (1921) ನಡುವಣ ವಿವಾದ, ಬಲ್ಗೇರಿಯ ಮತ್ತು ಗ್ರೀಸ್ ನಡುವಿನ ಡೇಮಿರ್ ಕಾಪುರ್ ವಿವಾದ (1925-26), ಇನ್ನೂ ಮೊದಲಾದ ವಿವಾದಗಳನ್ನು ಬಗೆಹರಿಸಿತು.

## 113.6 ಲೀಗ್‌ನ ರಾಜಕೀಯೇತರ ಸಾಧನೆಗಳು

ಲೀಗ್ ಅನೇಕ ರಾಜಕೀಯೇತರ ಸಾಧನೆಗಳಿಗೆ ಪ್ರಸಿದ್ಧಿಯಾಗಿದೆ. ಅದು ಪ್ರಪಂಚದ ಆರ್ಥಿಕ, ಸಾಮಾಜಿಕ ಮತ್ತು ಬೌದ್ಧಿಕ ಪರಿಸ್ಥಿತಿಗಳನ್ನು ಸುಧಾರಿಸಲು ಪ್ರಯತ್ನಿಸಿತು. ಗುಲಾಮಗಿರಿಗೆ ಸಂಬಂಧಿಸಿದಂತೆ 1925 ರಲ್ಲಿ ಜಿನಿವಾದಲ್ಲಿ ಒಂದು ಸಭೆಯನ್ನು ಕರೆದು ಚರ್ಚೆ ನಡೆಸಿತು. 1932 ರಲ್ಲಿ ಖಾಯಂ ಗುಲಾಮಗಿರಿ ಆಯೋಗವನ್ನು ಸ್ಥಾಪಿಸಲು ತೀರ್ಮಾನ ತೆಗೆದುಕೊಂಡಿತು. ಲೀಗ್‌ನ ಹಣಕಾಸು ಸಮಿತಿ ಕೌನ್ಸಿಲ್‌ಗೆ ಸಾಮಾನ್ಯವಾಗಿ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ ನೀಡುತ್ತಿತ್ತು. ರಾಷ್ಟ್ರಗಳಿಗೆ ಹಣಕಾಸಿನ ಸಹಾಯ ನೀಡುವುದನ್ನು ಮತ್ತು ರಾಷ್ಟ್ರಗಳ ಹಣಕಾಸಿನ ಸಮಸ್ಯೆಗಳನ್ನು ಅಂತರ ರಾಷ್ಟ್ರೀಯ ಸಹಕಾರದ ಮೂಲಕ ಬಗೆಹರಿಸಬೇಕೆಂದು ಲೀಗ್ ತಿಳಿಸಿತು. ಲೀಗ್ ವಿವಿಧ ರೀತಿಯ ಸಾಲಗಳನ್ನು ಆಸ್ಟ್ರಿಯ-ಹಂಗೇರಿ, ಗ್ರೀಸ್‌ಗೆ ನೀಡಿದ್ದುದಲ್ಲದೆ ಅವುಗಳನ್ನು ರದ್ದು ಪಡಿಸುವುದಕ್ಕೂ ಕಾರಣವಾಯಿತು. ಲೀಗ್‌ನ ಆರ್ಥಿಕ ಸಮಿತಿ 1927 ರ ಜಾಗತಿಕ ಆರ್ಥಿಕ ಸಮ್ಮೇಳನ ನಡೆಯುವುದಕ್ಕೆ ಪೂರ್ವ ಸಿದ್ಧತೆಗಳನ್ನು ಮಾಡಿತ್ತು. ಅದೇ ರೀತಿ 1933 ರ ಹಣಕಾಸು ಮತ್ತು ಆರ್ಥಿಕ ಸಮ್ಮೇಳನದ ಸಮಾವೇಶಕ್ಕೂ ಪೂರ್ವ ಸಿದ್ಧತೆಗಳನ್ನು ಲೀಗ್‌ನ ಆರ್ಥಿಕ ಸಮಿತಿ ನಡೆಸಿತ್ತು. ಲೀಗ್ ಬಡತನ, ನಿರುದ್ಯೋಗ, ಹಣದುಬ್ಬರದಿಂದ ನರಳುತ್ತಿದ್ದ ಆಸ್ಟ್ರಿಯ, ಹಂಗೇರಿ ಮತ್ತು ಬಲ್ಗೇರಿಯಾಗಳಿಗೆ ಹಣಕಾಸಿನ ಸಹಾಯ ನೀಡಿತು.

ಲಕ್ಷಾಂತರ ಮಂದಿ ನಿರಾಶ್ರಿತರ ಪುನರ್ ವಸತಿಗಾಗಿ ಲೀಗ್ ಕ್ರಮ ಕೈಗೊಂಡಿತು. ಏಷ್ಯ ಮೈನರ್‌ನಲ್ಲಿದ್ದ ಗ್ರೀಸ್‌ನ ಒಂದೂವರೆ ಮಿಲಿಯನ್ ನಿರಾಶ್ರಿತರನ್ನು ಗ್ರೀಸ್‌ನಲ್ಲಿ ನೆಲೆಗೊಳಿಸುವ ಕೆಲಸವನ್ನು ನೆರವೇರಿಸಿತು. 1926 ಮತ್ತು 1928 ರ ನಡುವೆ 30,000 ಬಲ್ಗೇರಿಯ ನಿರಾಶ್ರಿತರು ಹೊಸದಾಗಿ ಜೀವನ ಪ್ರಾರಂಭಿಸಲು ಲೀಗ್ ವ್ಯವಸ್ಥೆ ಮಾಡಿತು.

ಲೀಗ್ ಸ್ತ್ರೀಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಕ್ರಮಗಳನ್ನು ಕೈಗೊಂಡಿತು. ಅಫೀಮು ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕ್ರಮ ಕೈಗೊಂಡಿತು. ಮಲೇರಿಯ, ಸಿಡುಬು, ಕುಷ್ಠರೋಗ, ಕ್ಯಾನ್ಸರ್, ಹೃದಯ ಕಾಯಿಲೆ ಮೊದಲಾದ ರೋಗಗಳನ್ನು ವಾಸಿ ಮಾಡುವ ದೃಷ್ಟಿಯಿಂದ 1923 ರಲ್ಲಿ ಲೀಗ್ ಒಂದು ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಿತು.

ಗುಲಾಮಗಿರಿಯ ಪದ್ಧತಿಯ ನಿರ್ಮೂಲನಕ್ಕೆ ಸಂಬಂಧಿಸಿದಂತೆ ಹಲವು ಕ್ರಮಗಳನ್ನು ಲೀಗ್ ತೆಗೆದುಕೊಂಡಿತು. ಗುಲಾಮರ ಮಾರಾಟವನ್ನು ತಡೆಗಟ್ಟುವ ದೃಷ್ಟಿಯಿಂದ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ರಾಷ್ಟ್ರಗಳಿಗೂ ಸೂಚನೆ ನೀಡಲಾಯಿತು. ಲೀಗ್ ಸೈಬೀರಿಯಾದಲ್ಲಿ ಗುಲಾಮಗಿರಿಯನ್ನು ರದ್ದು ಪಡಿಸುವಂತೆ ಆದೇಶ ನೀಡಿತು. ಅದೇ ರೀತಿ ಇಥಿಯೋಪಿಯ, ನೇಪಾಳ ಮತ್ತು ಬರ್ಮಗಳಲ್ಲಿ ಗುಲಾಮರನ್ನು ಬಿಡುಗಡೆ ಮಾಡುವಂತೆ ನಿರ್ದೇಶಿಸಿತು.

ರಾಷ್ಟ್ರಗಳ ನಡುವೆ ಬೌದ್ಧಿಕ ಸಹಕಾರವನ್ನು ವೃದ್ಧಿಸುವುದಕ್ಕಾಗಿ ಪ್ರಯತ್ನ ನಡೆಸಿತು. ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರು ಬೋಧಕರುಗಳ ನಡುವಿನ ಸಹಕಾರಕ್ಕೆ ಪ್ರೋತ್ಸಾಹ ನೀಡಿತು. ಈ ಉದ್ದೇಶಕ್ಕೋಸ್ಕರ ಬೆಲ್ಜಿಯಂನಲ್ಲಿ ಅಂತರ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಿತು ಮತ್ತು ಪ್ಯಾರಿಸ್‌ನಲ್ಲಿ ಬುದ್ಧಿಜೀವಿಗಳ ಸಹಕಾರಕ್ಕೋಸ್ಕರ ಅಂತರ ರಾಷ್ಟ್ರೀಯ ಸಂಸ್ಥೆಯನ್ನು (International Institute for Intellectual Co-operation at paris) ಸ್ಥಾಪಿಸಲಾಯಿತು. ಇದರ ಪ್ರಮುಖ ಉದ್ದೇಶವೇನೆಂದರೆ ಕಲೆ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ಜ್ಞಾನವನ್ನು ವಿಶ್ವದ ಜನತೆಗೆ ಹರಡುವುದಾಗಿತ್ತು. ಸಮಾವೇಶಗಳು, ಭಾಷಣಗಳು ಮತ್ತು ಪ್ರಕಟಣೆಗಳ ಮೂಲಕ ಈ ಸಂಸ್ಥೆಯು ಜ್ಞಾನ ಪ್ರಸಾರದ ಕೆಲಸವನ್ನು ಮಾಡಬೇಕಾಗಿತ್ತು. ಹಣದ ಕೊರತೆಯಿಂದಾಗಿ ಆದರೆ ಈ ದಿಶೆಯಲ್ಲಿ ಹೆಚ್ಚಿನ ಸಾಧನೆಯನ್ನು ಗಳಿಸಲು ಸಾಧ್ಯವಾಗಲಿಲ್ಲ.

ಯುದ್ಧ ಕೈದಿಗಳನ್ನು ಹಿಂದಿರುಗಿಸುವಂತೆ ಮಾಡುವ ಕೆಲಸದಲ್ಲೂ ಲೀಗ್ ಪ್ರಮುಖ ಪಾತ್ರ ವಹಿಸಿತು. ಲಕ್ಷಾಂತರ ಯುದ್ಧ ಕೈದಿಗಳನ್ನು ಖೈದಿಗಳ ಬಿಡಾರದಿಂದ ಬಿಡುಗಡೆ ಮಾಡಿ ಆಯಾಯ ದೇಶಗಳಿಗೆ ಕಳುಹಿಸಿಕೊಡುವುದರಲ್ಲಿ ಲೀಗ್ ಸಮರ್ಥ ಕೆಲಸ ಮಾಡಿತು.

## 113.7 ಲೀಗ್‌ನ ವಿಫಲತೆಗೆ ಕಾರಣಗಳು

ಲೀಗ್ ಅನೇಕ ರಾಜಕೀಯ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಯಶಸ್ವಿಯಾದರೂ ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸಲು ಯಶಸ್ವಿಯಾಗಲಿಲ್ಲ. ಪುನಃ 1939 ರಲ್ಲಿ ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾಯಿತು. ಆದ್ದರಿಂದ ರಾಷ್ಟ್ರ ಸಂಘದ ವಿಫಲತೆಗೆ ಕಾರಣಗಳೇನು ಎಂಬುದನ್ನು ವಿವರಿಸುವುದು ಅವಶ್ಯಕ.

### 113.7.1 ರಾಷ್ಟ್ರ ಸಂಘ ಶಾಂತಿ ಒಪ್ಪಂದದ ಒಂದು ಭಾಗವಾಗಿದ್ದುದು

ಲೀಗ್‌ನನ್ನು ವರ್ಸೈಲ್ಸ್ ಒಪ್ಪಂದ ಒಂದು ಭಾಗವನ್ನಾಗಿ ಮಾಡಿದುದು ಸಮರ್ಥವಾಗಿ ಅದು ಕೆಲಸ ನಿರ್ವಹಿಸಲು ಸಾಧ್ಯವಾಗಲಿಲ್ಲ. ಒಂದನೆಯ ಯುದ್ಧದಲ್ಲಿ ಸೋತ ರಾಷ್ಟ್ರಗಳು ಲೀಗ್ ಅಥವಾ ರಾಷ್ಟ್ರ ಸಂಘವನ್ನು ವಿಜಯಿ ರಾಷ್ಟ್ರಗಳ ಸಂಘ ಎಂದು ಪರಿಗಣಿಸಿದವು. ಆದ್ದರಿಂದ ಅಪಜಯ ಹೊಂದಿದ್ದ ರಾಷ್ಟ್ರಗಳು ಯಾವಾಗಲೂ ರಾಷ್ಟ್ರ ಸಂಘವನ್ನು ಅನುಮಾನದಿಂದ ನೋಡಲು ಪ್ರಾರಂಭಿಸಿದವು. ಲೀಗ್ ಗೆದ್ದ ರಾಷ್ಟ್ರಗಳು ಶಕ್ತಿ ಸಮತೋಲನವನ್ನು ಕಾಪಾಡಿಕೊಳ್ಳಲು ಮಾಡಿಕೊಂಡ ಒಂದು ವ್ಯವಸ್ಥೆ ಎಂದು ಭಾವಿಸಿದವು. ರಷ್ಯವು ಕೂಡ ಲೀಗ್‌ನನ್ನು ಅನುಮಾನದಿಂದ ಕಂಡಿತು.

### 113.7.2 ಲೀಗ್ ಜಾಗತಿಕ ಲಕ್ಷಣ ಹೊಂದಿರದೆ ಇದ್ದುದು

ಲೀಗ್ ವಿಶ್ವದ ಎಲ್ಲ ರಾಷ್ಟ್ರಗಳ (ಪ್ರಮುಖ) ಸದಸ್ಯತ್ವವನ್ನು ಹೊಂದಿರಲಿಲ್ಲ. ಲೀಗ್‌ನ ಸ್ಥಾಪನೆಗೆ ಅಮೆರಿಕಾದ ಅಧ್ಯಕ್ಷ ವಿಲ್ಸನ್ನನು ಕಾರಣನಾದರೂ, ಅಮೆರಿಕ ಮಾತ್ರ ಅದರ ಸದಸ್ಯ ರಾಷ್ಟ್ರವಾಗಲಿಲ್ಲ. ಏಕೆಂದರೆ ಅಮೆರಿಕಾದ ಸೆನೆಟ್ ವರ್ಸೈಲ್ಸ್ ಒಪ್ಪಂದವನ್ನು ಸ್ಥಿರೀಕರಿಸಲು (Ratify) ನಿರಾಕರಿಸಿತು. ಈ ಅಂಶವು ಲೀಗ್ ಸಮರ್ಥವಾಗಿ ಕಾರ್ಯ ನಿರ್ವಹಿಸಲು ಅಡ್ಡಿ ಉಂಟಾಯಿತು. ಇನ್ನುಳಿದ ರಾಷ್ಟ್ರಗಳು ಕೂಡ ಸಂಪೂರ್ಣ ಬೆಂಬಲ ನೀಡಲಿಲ್ಲ. ಅಂದು ಪ್ರಬಲ ರಾಷ್ಟ್ರಗಳನಿಸಿಕೊಂಡಿದ್ದ ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್ ಲೀಗ್ ಗೆ ಸರಿಯಾದ ಬೆಂಬಲ ನೀಡಲಿಲ್ಲ. ಸೋವಿಯತ್ ಯೂನಿಯನ್ ಮತ್ತು ಜರ್ಮನಿ ಮೂಲತಃ ಸದಸ್ಯ ರಾಷ್ಟ್ರಗಳಾಗಿರಲಿಲ್ಲ. 1934 ರಲ್ಲಿ ಸೋವಿಯತ್ ರಷ್ಯ ಲೀಗ್‌ನ ಸದಸ್ಯತ್ವವನ್ನು ಸ್ವೀಕರಿಸಿತು. ಆದರೆ ಫಿನ್‌ಲ್ಯಾಂಡಿನ ಮೇಲೆ ಜರ್ಮನಿಯು ದಾಳಿ ಮಾಡಿದ ಮೇಲೆ ಸೋವಿಯತ್ ಯೂನಿಯನ್ ಲೀಗ್‌ನಿಂದ ಹೊರಬಂದಿತು. 1926 ರಲ್ಲಿ, ಜರ್ಮನಿಯನ್ನು ಒತ್ತಾಯ ಮಾಡಿ ಲೀಗ್‌ನ ಸದಸ್ಯತ್ವವನ್ನು ಸ್ವೀಕರಿಸುವಂತೆ ಮಾಡಲಾಯಿತು. ಆದರೆ ಹಿಟ್ಲರ್ ಅಧಿಕಾರಕ್ಕೆ ಬಂದ ಮೇಲೆ 1933 ರಲ್ಲಿ ಲೀಗ್‌ನ ಸದಸ್ಯತ್ವವನ್ನು ತ್ಯಜಿಸಿತು. ಇಟಲಿ ಮೂಲತಃ ಲೀಗನ್ನು ಸೇರಿತು. ಆದರೆ ಅದು ಇಥಿಯೋಪಿಯವನ್ನು ಆಕ್ರಮಿಸಿಕೊಂಡ ನಂತರ 1937 ರಲ್ಲಿ ಲೀಗ್‌ನಿಂದ ಹೊರಬಂತು. 1931 ರಲ್ಲಿ ಜಪಾನ್ ಮಂಚೂರಿಯವನ್ನು ಗೆದ್ದುಕೊಂಡ ನಂತರ ಅದು ಕೂಡ ಲೀಗ್‌ನಿಂದ ಹೊರ ಬಂದಿತು. ಮೇಲಿನ ಅಂಶಗಳಿಂದ ಲೀಗ್‌ನ ಸುಭದ್ರತೆಗೆ ಬೇಕಾದಂತಹ ಜಾಗತಿಕ ಬೆಂಬಲವನ್ನು ಹೊಂದಿರಲಿಲ್ಲ.

### 113.7.3 ಪ್ರಬಲ ರಾಷ್ಟ್ರಗಳ ಸ್ವಾರ್ಥ ನೀತಿ

ಪ್ರಬಲ ರಾಷ್ಟ್ರಗಳು ರಾಷ್ಟ್ರ ಸಂಘವನ್ನು ಪ್ರಪಂಚದ ಶಾಂತಿ ಸ್ಥಾಪನೆಗೆ ಇರತಕ್ಕ ಒಂದು ಸಾಧನವೆಂದು ಪರಿಗಣಿಸಲಿಲ್ಲ. ಅದರ ಬದಲು ಲೀಗ್ ಇರುವುದು ತಮ್ಮ ಸ್ವಾರ್ಥ ಸಾಧನೆಗೆಂದು ಇರತಕ್ಕ ವ್ಯವಸ್ಥೆ ಎಂದು ಭಾವಿಸಿದ್ದರು. ಅಮೆರಿಕ ಅಂತರ ರಾಷ್ಟ್ರೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಯಾವುದೇ ಆಸಕ್ತಿ ವಹಿಸಲಿಲ್ಲ. ಕೇವಲ ಲ್ಯಾಟಿನ್ ಅಮೆರಿಕ ಮತ್ತು ದೂರ ಪ್ರಾಚ್ಯದ ಸಮಸ್ಯೆಗಳಲ್ಲಿ ಮಾತ್ರ ಹಸ್ತಕ್ಷೇಪ ಮಾಡಿತು. ಪ್ರಬಲ ರಾಷ್ಟ್ರಗಳು ಲೀಗ್‌ನ ನಿರ್ಣಯಗಳ ಬಗ್ಗೆ ಯಾವುದೇ ಬೆಂಬಲ ನೀಡಲಿಲ್ಲ. ಇಟಲಿಯು ಇಥಿಯೋಪಿಯದ ಮೇಲೆ ಫ್ರಾನ್ಸ್ ಆಕ್ರಮಣ ನಡೆಸಿದಾಗ, ಫ್ರಾನ್ಸ್ ಇಟಲಿಯ ಪರವಾಗಿತ್ತು. ಗ್ರೇಟ್ ಬ್ರಿಟನ್ ಅಂತರ ರಾಷ್ಟ್ರೀಯ ಸಮತೋಲನ ಶಕ್ತಿಯನ್ನು ಕಾಪಾಡುವ ಉದ್ದೇಶ ಹೊಂದಿತ್ತು. ಫ್ರಾನ್ಸ್‌ನ ಮುಖ್ಯ ಉದ್ದೇಶ ಜರ್ಮನಿಯನ್ನು ತುಳಿಯುವ ಪ್ರಯತ್ನವಾಗಿತ್ತು. ಜರ್ಮನಿಯನ್ನು ಕಡೆಗಣಿಸಿದುದು ವೀಮರ್ ಗಣರಾಜ್ಯದ ಪತನಕ್ಕೆ ಹಾಗೂ ಹಿಟ್ಲರನ ಏಳಿಗೆಗೆ ಕಾರಣವಾಯಿತು.

### 113.7.4 ಲೀಗ್ ತನ್ನದೇ ಆದ ಸೈನ್ಯವನ್ನು ಹೊಂದದೆ ಇದ್ದುದು

ಲೀಗ್ ಸದಸ್ಯ ರಾಷ್ಟ್ರಗಳ ಬೆಂಬಲ ಮತ್ತು ಸಹಕಾರದ ಆಧಾರದ ಮೇಲೆ ನಿಂತಿತ್ತೆ ಹೊರತು ಅದಕ್ಕೆ ಸಾರ್ವಭೌಮ ಅಧಿಕಾರವನ್ನಾಗಲಿ ಅಥವಾ ತನ್ನದೇ ಆದ ಸೈನ್ಯವನ್ನು ಹೊಂದಿರಲಿಲ್ಲ. ರಾಷ್ಟ್ರ ಸಂಘಕ್ಕೆ ವಿರುದ್ಧವಾಗಿ ನಡೆದುಕೊಂಡ ರಾಷ್ಟ್ರಗಳ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಲೀಗ್ ತಾನು ಕೈಗೊಂಡ ನಿರ್ಣಯಗಳನ್ನು ಶೀಘ್ರವಾಗಿ ಮತ್ತು ಒತ್ತಾಯ ಪೂರ್ವಕವಾಗಿ ಜಾರಿಗೆ ತರಲು ಶಕ್ತವಾಗಿರಲಿಲ್ಲ. ಆದ್ದರಿಂದ ಸಣ್ಣ ಪುಟ್ಟ ರಾಷ್ಟ್ರಗಳು ನಂಬಿಕೆಯನ್ನು ಕಳೆದುಕೊಂಡವು.

### 113.7.5 ಸಂಕುಚಿತ ರಾಷ್ಟ್ರೀಯ ಭಾವನೆ

ಜಪಾನ್, ಇಟಲಿ, ಜರ್ಮನಿ ಮತ್ತು ರಷ್ಯಾದ ಜನತೆ ವಿಶ್ವಶಾಂತಿಯನ್ನು ಮರೆತು ತಮ್ಮ ತಮ್ಮ ರಾಷ್ಟ್ರಗಳ ಸಾಮ್ರಾಜ್ಯಶಾಹಿ ನೀತಿಗಳಿಗೆ ಬೆಂಬಲ ನೀಡಿದರು. ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕ ರಾಷ್ಟ್ರಗಳು ಸರ್ವಾಧಿಕಾರತ್ವದ ಬೆಳವಣಿಗೆಯನ್ನು ತೊಡೆದು ಹಾಕಲು ಆ ರಾಷ್ಟ್ರಗಳ ಜನತೆ ಯಾವುದೇ ಒತ್ತಡ ಬೀರಲಿಲ್ಲ. ಈ ರೀತಿಯಾಗಿ ಸಂಕುಚಿತ ರಾಷ್ಟ್ರ ಭಾವನೆಯು ಕೂಡ. ಲೀಗ್‌ನ ಪತನಕ್ಕೆ ಕಾರಣವಾಯಿತು.

### *113.7.6 ಮತ ಚಲಾವಣೆಯಲ್ಲಿದ್ದ ನ್ಯೂನತೆ*

ಕೌನ್ಸಿಲ್ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ ಎಲ್ಲಾ ಸದಸ್ಯರುಗಳ ಒಪ್ಪಿಗೆ ಪಡೆಯಬೇಕಾಗಿತ್ತು. ಆದ್ದರಿಂದ ಕೌನ್ಸಿಲ್ ಇಂತಹ ಕಷ್ಟ ಪರಿಸ್ಥಿತಿಯನ್ನು ಆಗಿಂದ್ದಾಗ್ಗೆ ಎದುರಿಸಬೇಕಾಗಿತ್ತು.

### *113.7.8 ಲೀಗ್‌ನಲ್ಲಿ ನಂಬಿಕೆ ಇಲ್ಲದೆ ಇದ್ದುದು*

ಲೀಗ್‌ನ ಸದಸ್ಯ ರಾಷ್ಟ್ರಗಳು ಅದರಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಿರಲಿಲ್ಲ. ಪ್ರಬಲ ರಾಷ್ಟ್ರಗಳು ಲೀಗ್ ದುರ್ಬಲವಾಗಿದ್ದು ಅದಕ್ಕೆ ಬೆಂಬಲ ನೀಡುತ್ತಿರಲಿಲ್ಲ. ಸಣ್ಣ ಪುಟ್ಟ ರಾಷ್ಟ್ರಗಳು ಅದರ ಕಾರ್ಯವೈಖರಿಯ ಅಸಮರ್ಥತೆಯನ್ನು ಅರಿತು ಅದರಲ್ಲಿ ನಂಬಿಕೆಯನ್ನು ಕಳೆದುಕೊಂಡವು. ಎಲ್ಲಾ ರಾಷ್ಟ್ರಗಳು ಸಾಮೂಹಿಕ ಅಂತರ ರಾಷ್ಟ್ರೀಯ ಸುಭದ್ರತೆಯ ಕಡೆ ಗಮನ ಹರಿಸಲಿಲ್ಲ. ಎಲ್ಲ ರಾಷ್ಟ್ರಗಳು ಇಟಲಿ ಮತ್ತು ಜಪಾನ್ ವಿರುದ್ಧ ಕ್ರಮ ಕೈಗೊಳ್ಳಲು ಕೈಗೂಡಿಸಿದ್ದರೆ ಬಹುಶಃ ಪರಿಣಾಮವೇ ಬೇರೆ ಆಗುತ್ತಿತ್ತು. ಪ್ರತಿಯೊಂದು ರಾಷ್ಟ್ರವು ತನ್ನದೇ ಆದ ನೀತಿಯನ್ನು ಅನುಸರಿಸಿದುದರಿಂದ ಸಾಮೂಹಿಕ ಜವಾಬ್ದಾರಿ ದುರ್ಬಲಗೊಂಡಿತು.

### *113.7.9 ಸರ್ವಾಧಿಕಾರತ್ವದ ಏಳಿಗೆ*

ಜಪಾನ್, ಜರ್ಮನಿ ಮತ್ತು ಇಟಲಿಯಲ್ಲಿ ಸರ್ವಾಧಿಕಾರದ ಏಳಿಗೆಯಿಂದಾಗಿ ಲೀಗ್ ಸಂಪೂರ್ಣವಾಗಿ ದುರ್ಬಲಗೊಂಡಿತು. ಅವುಗಳ ವಿರುದ್ಧ ಯಾವುದೇ ಸೈನಿಕ ಕ್ರಮಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಲೀಗ್ ಹೊಂದಿರಲಿಲ್ಲ. ಈ ಎಲ್ಲ ರಾಷ್ಟ್ರಗಳು ಲೀಗ್‌ನಿಂದ ಹೊರಬಂದುವು. ಈ ರಾಷ್ಟ್ರಗಳು ಲೀಗ್‌ನನ್ನೇ ದೂರಲು ಪ್ರಾರಂಭಿಸಿದವು. ಲೀಗ್‌ನ ತತ್ವಗಳಿಗೆ ಯಾವುದೇ ಮಾನ್ಯತೆಯನ್ನು ನೀಡದೆ ತಮ್ಮ ಇಚ್ಛಾನುಸಾರ ನಡೆದುಕೊಳ್ಳಲು ಪ್ರಾರಂಭಿಸಿದವು. ಈ ರೀತಿಯಾಗಿ ಲೀಗ್ ದುರ್ಬಲಗೊಂಡಿದುದರಿಂದ ಮತ್ತೊಂದು ಜಾಗತಿಕ ಯುದ್ಧಕ್ಕೆ ಕಾರಣವಾಯಿತು.

## 113.10 ಸಂಕ್ಷಿಪ್ತ ಅವಲೋಕನ

ಮೊದಲನೆಯ ಜಾಗತಿಕ ಯುದ್ಧದ ನಂತರ ಲೀಗ್ ಆಫ್ ನೇಷನ್ಸ್ ಅಥವಾ ರಾಷ್ಟ್ರ ಸಂಘ ಅಸ್ತಿತ್ವಕ್ಕೆ ಬಂತು. ಇದರ ಉದ್ದೇಶ ಪ್ರಮುಖವಾಗಿ ವಿಶ್ವದಲ್ಲಿ ಯುದ್ಧವನ್ನು ತಡೆಗಟ್ಟಿ ಶಾಂತಿಯನ್ನು ಸ್ಥಾಪಿಸುವುದಾಗಿತ್ತು. ಅಮೆರಿಕಾವನ್ನು ಬಿಟ್ಟು ಅನೇಕ ರಾಷ್ಟ್ರಗಳು ಲೀಗ್‌ನ ಸದಸ್ಯರಾದರು. ಮಹಾಸಭೆ, ಕೌನ್ಸಿಲ್, ಸಚಿವಾಲಯ, ಖಾಯಂ ಅಂತರ ರಾಷ್ಟ್ರೀಯ ನ್ಯಾಯಾಲಯ, ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ. ಲೀಗ್‌ನ ಮುಖ್ಯ ಅಂಗಗಳಾಗಿದ್ದವು. ಲೀಗ್ ಮ್ಯಾಂಡೇಟ್ ಪದ್ಧತಿಯನ್ನು ಕೂಡ ಸ್ಥಾಪಿಸಿತು. ಆಲ್ಯಾಂಡ್ ದ್ವೀಪಗಳ ವಿವಾದ, ಮೊಸೂಲ್ ಗಡಿ ವಿವಾದ, ಬಲ್ಗೇರಿಯ ಮತ್ತು ಗ್ರೀಸ್‌ನ ಗಡಿ ವಿವಾದ ಇನ್ನು ಮೊದಲಾದ ಸಮಸ್ಯೆಗಳನ್ನು ಬಗೆಹರಿಸಿತು. ಆದರೆ ಮಂಚೂರಿಯ ಬಿಕ್ಕಟ್ಟು, ಇಥಿಯೊಪಿಯಾದ ಮೇಲೆ ಇಟಲಿಯ ಆಕ್ರಮಣ, ಜರ್ಮನಿಯ ಆಕ್ರಮಣ ನೀತಿಯನ್ನು ಲೀಗ್ ರಾಜಕೀಯೇತರ ವಿಷಯಗಳಲ್ಲಿಯೂ ಹಲವು ಸಾಧನೆಗಳನ್ನು ಮಾಡಿದೆ. ಗುಲಾಮಗಿರಿಯ ವ್ಯಾಪಾರವನ್ನು ತಡೆಗಟ್ಟಲು ಕ್ರಮ ಕೈಗೊಂಡಿತು. ಸ್ತ್ರೀಯರು ಮತ್ತು ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಎಲ್ಲಾ ರೀತಿಯ ಪ್ರೋತ್ಸಾಹ ನೀಡಿತು. ಲಕ್ಷಾಂತರ ಮಂದಿ ನಿರಾಶ್ರಿತರ ಪುನರ್ ವಸತಿಗಾಗಿ ವ್ಯವಸ್ಥೆ ಮಾಡಿತು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೌದ್ಧಿಕ ಸಹಕಾರಕ್ಕೆ ಪ್ರೋತ್ಸಾಹ ನೀಡಿತು. ಆದರೆ ರಾಷ್ಟ್ರ ಸಂಘ ಕೇವಲ 20 ವರ್ಷಗಳ ಕಾಲ ಮಾತ್ರ ಅಸ್ತಿತ್ವದಲ್ಲಿತ್ತು. ಅದರ ಪತನಕ್ಕೆ ಅನೇಕ ಕಾರಣಗಳಿದ್ದವು. ಅದು ಜಾಗತಿಕ ಲಕ್ಷಣ ಹೊಂದಿದ್ದುದು ಪ್ರಬಲ ರಾಷ್ಟ್ರಗಳ ಸ್ವಾರ್ಥ, ಲೀಗ್‌ನ ಬೆಂಬಲಕ್ಕೆ ತನ್ನದೇ ಆದ ಒಂದು ಸೈನ್ಯವನ್ನು ಹೊಂದಿರದೆ ಇದ್ದುದು, ಸಂಕುಚಿತ ರಾಷ್ಟ್ರೀಯ ಭಾವನೆ, ಲೀಗ್‌ನಲ್ಲಿ ಮತ ಚಲಾವಣೆಗೆ ಇದ್ದಂತಹ ನ್ಯೂನತೆ, ಲೀಗ್‌ನಲ್ಲಿ ನಂಬಿಕೆ ಇಲ್ಲದಿದ್ದುದು ಸರ್ವಾಧಿಕಾರಿಗಳ ಏಳಿಗೆ ಮೊದಲಾದ ಅಂಶಗಳು ಲೀಗ್ ಪತನಕ್ಕೆ ಕಾರಣವಾದವು.

## 113.11 ಮಾದರಿ ಪ್ರಶ್ನೆಗಳು

1. ರಾಷ್ಟ್ರ ಸಂಘಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿ. ಅದರ ಉದ್ದೇಶಗಳೇನು
2. ರಾಷ್ಟ್ರ ಸಂಘದ ರಚನೆ ಹಾಗೂ ಅದರ ಕಾರ್ಯಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ
3. ರಾಷ್ಟ್ರ ಸಂಘದ ವಿಫಲತೆಗೆ ಕಾರಣಗಳನ್ನು ವಿಮರ್ಶಾತ್ಮಕವಾಗಿ ಬರೆಯಿರಿ.

## 113.12 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


| | | | |
|---|---|---|---|
| 1. | E.H. Carr | : | International Relations between two World Wars |
| 2. | C.D. Hazen | : | Modern Europe since 1789 |
| 3. | C.J.H. Hayey | : | Contemporary Europe since 1870 |
| 4. | P.C. Thomas | : | History of Europe (1789-1945) |
| 5. | B.V. Rao | : | History of Modern Europe (1789-1960) |


ಪ್ರೊ. ಶಿವಣ್ಣ

## ಟಿಪ್ಪಣಿಗಳು

# ಘಟಕ - 114

# ವೀಮರ್ ಗಣರಾಜ್ಯ

*ರಚನೆ*


114.0 ಉದ್ದೇಶಗಳು

114.1 ಪೀಠಿಕೆ

114.2 ರಾಷ್ಟ್ರೀಯ ಸಭೆಗೆ ಚುನಾವಣೆ

114.3 ಹಂಗಾಮಿ ಸರ್ಕಾರ

114.4 ವೀಮರ್ ರಾಜ್ಯಾಂಗ

114.5 ವೀಮರ್ ಗಣರಾಜ್ಯದ ಸಮಸ್ಯೆಗಳು

114.5.1 ರಾಜತ್ವದ ಪರವಾಗಿದ್ದ ಗುಂಪು

114.5.2 ರಾಯಲಿಸ್ಟರ ದಂಗೆ

114.5.3 ಆರ್ಥಿಕ ಬಿಕ್ಕಟ್ಟು

114.5.4 ರ್ಹೂರ್ ಆಕ್ರಮಿಸಿಕೊಂಡಿದುದು

114.5.5 ಹಣದುಬ್ಬರ

114.6 ಛಾನ್ಸಲರ್ ಆಗಿ ಸ್ಟ್ರೆಸ್‌ಮನ್ (Stressmann)

114.6.1 ದಾವೆಸ್ ಯೋಜನೆ

114.6.2 ಲೊಕಾರ್ನೊ ಒಪ್ಪಂದ

114.6.3 ಯಂಗ್ ಯೋಜನೆ

114.6.4 ಜರ್ಮನಿಯ ಮೇಲೆ ಪ್ರಪಂಚದ ಆರ್ಥಿಕ ಮುಗ್ಗಟ್ಟಿನ ಪ್ರಭಾವ

114.7 ಗಣರಾಜ್ಯದ ವಿರುದ್ಧ ಹೆಚ್ಚುತ್ತಿದ್ದ ಅತೃಪ್ತಿ

114.8 ಹಿಟ್ಲರನ ಏಳಿಗೆ ಮತ್ತು ವೀಮರ್ ಗಣರಾಜ್ಯದ ಪತನ

114.9 ಸಂಕ್ಷಿಪ್ತ ಅವಲೋಕನ

114.10 ಮಾದರಿ ಪ್ರಶ್ನೆಗಳು

114.11 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 114.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ಗ್ರಹಿಸಬಹುದಾದ ಅಂಶಗಳೆಂದರೆ

* ಜರ್ಮನಿಯಲ್ಲಿ ಕೈಸರ್ ಎರಡನೆಯ ವಿಲಿಯಂನ ಪತನ
* ಹಂಗಾಮಿ ಸರ್ಕಾರದ ಸ್ಥಾಪನೆ
* ಜರ್ಮನಿಯಲ್ಲಿ ವೀಮರ್ ಗಣರಾಜ್ಯದ ಸ್ಥಾಪನೆ
* ವೀಮರ್ ಗಣರಾಜ್ಯ ಎದುರಿಸಿದ ಸಮಸ್ಯೆಗಳು
* ವೀಮರ್ ಗಣರಾಜ್ಯದ ಸಾಧನೆಗಳು
* ಗಣರಾಜ್ಯದ ಪತನಕ್ಕೆ ಕಾರಣವಾದ ಅಂಶಗಳು

## 114.1 ಪೀಠಿಕೆ

ಮೊದಲನೆಯ ಜಾಗತಿಕ ಯುದ್ಧದಲ್ಲಿ ಜರ್ಮನಿ ಸೋಲನ್ನನುಭವಿಸಿದುದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹತ್ತರ ಬದಲಾವಣೆಯಾಗುವುದರ ಜೊತೆಗೆ ಜರ್ಮನಿಯ ಆಂತರಿಕ ರಾಜಕೀಯದಲ್ಲಿ ಬದಲಾವಣೆ ಉಂಟಾಯಿತು. ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಅನುಭವಿಸಿದ್ದ ಅಪಾರ ನೋವಿನಿಂದಾಗಿ ಜನರು ಕೈಸರ್ ಎರಡನೆಯ ವಿಲಿಯಂನ ವಿರುದ್ಧ ದಂಗೆ ಎದ್ದರು. ಯುದ್ಧ ನಿಲ್ಲಿಸಲು ಮಿತ್ರ ರಾಷ್ಟ್ರಗಳೊಡನೆ ಜರ್ಮನಿಯ ಪ್ರತಿನಿಧಿಗಳು ಸಹಿ ಹಾಕುವುದಕ್ಕೆ ಎರಡು ದಿವಸಗಳು ಮೊದಲು 1918 ರ ನವೆಂಬರ್ ಒಂಭತ್ತರಂದು ಕೈಸರ್ ಎರಡನೆಯ ವಿಲಿಯಂ ಸಿಂಹಾಸನವನ್ನು ತ್ಯಜಿಸಿದನು. ಜರ್ಮನಿಯ ಚಕ್ರವರ್ತಿಯು ಅಧಿಕಾರ ಕಳೆದುಕೊಂಡಿದುದರ ಜೊತೆಗೆ ಜರ್ಮನಿಯ ಇನ್ನುಳಿದ ರಾಜ್ಯಗಳ ರಾಜರುಗಳು ಕೂಡ ತಮ್ಮ ಸ್ಥಾನಗಳನ್ನು ತೆರವು ಮಾಡಿದರು. ಸೋಷಿಯಲ್ ಡೆಮೊಕ್ರಾಟಿಕ್ ಪಕ್ಷಕ್ಕೆ ಸೇರಿದ ಸದಸ್ಯರು ಜರ್ಮನಿಯ ಆಳ್ವಿಕೆ ನಡೆಸಲು ಒಂದು ಸಮಿತಿಯನ್ನು ನೇಮಕ ಮಾಡಿದರು. ಈ ಹಂಗಾಮಿ ಸರ್ಕಾರದ ಮುಖ್ಯಸ್ಥನಾಗಿ ಫ್ರೆಡರಿಕ್ ಎಬರ್ಟ್ ನೇಮಕಗೊಂಡನು. ಈತನು ಸಂವಿಧಾನಬದ್ಧವಾಗಿ ಜರ್ಮನಿಯಲ್ಲಿ ಆಳ್ವಿಕೆ ನಡೆಸುವುದಾಗಿ ಘೋಷಿಸಿದನು. ಫ್ರೆಡರಿಕ್ ಎಬರ್ಟ್ ಜರ್ಮನಿಯಲ್ಲಿ ಶಾಂತಿಯನ್ನು ಕಾಪಾಡಲು ಗಣರಾಜ್ಯದಲ್ಲಿ ನಂಬಿಕೆ ಇಟ್ಟಿದ್ದಂತಹ ಒಂದು ಸೈನ್ಯವನ್ನು ನೇಮಕ ಮಾಡಿದನು.

## 114.2 ರಾಷ್ಟ್ರೀಯ ಸಭೆಗೆ ಚುನಾವಣೆಗಳು

ಗಣರಾಜ್ಯಕ್ಕೆ ಸಂಬಂಧಿಸಿದಂತೆ ಒಂದು ರಾಜ್ಯಾಂಗವನ್ನು ರಚಿಸಲು ಒಂದು ಶಾಸನ ಸಭೆಯ ಅವಶ್ಯಕತೆ ಇತ್ತು. ಅದಕ್ಕೋಸ್ಕರ ರಾಷ್ಟ್ರೀಯ ಸಭೆಗೆ ಚುನಾವಣೆಗಳು 1919 ರ ಜನವರಿ ಹತ್ತೊಂಭತ್ತರಂದು ನಡೆದವು. ಈ ಚುನಾವಣೆಯಲ್ಲಿ ಸೋಷಿಯಲ್ ಡೊಮೊಕ್ರಾಟಿಕ್ ಪಾರ್ಟಿಯ ಸದಸ್ಯರು ಚುನಾಯಿಸಲ್ಪಟ್ಟು ರಾಷ್ಟ್ರೀಯ ಸಭೆಯಲ್ಲಿ ಒಂದು ದೊಡ್ಡ ಪಕ್ಷವೆನಿಸಿಕೊಂಡಿತು. ಈ ರಾಷ್ಟ್ರೀಯ ಸಭೆಯ ಸದಸ್ಯರು ವೀಮರ್ (Weimer) ನಲ್ಲಿ ಸಭೆ ಸೇರಿ ರಾಜ್ಯಾಂಗ ಸಂಬಂಧಿಸಿದಂತೆ ಕರಡು ಪ್ರತಿಯನ್ನು ಸಿದ್ಧ ಪಡಿಸಿದರು. ಆದ್ದರಿಂದಲೇ ಜರ್ಮನಿಯ ಹೊಸ ಸರ್ಕಾರಕ್ಕೆ ವೀಮರ್ ಗಣರಾಜ್ಯವೆಂದು ಹೆಸರು ಬಂತು.

## 114.3 ಹಂಗಾಮಿ ಸರ್ಕಾರ

ರಾಷ್ಟ್ರೀಯ ಶಾಸನ ಸಭೆಯು ಗಣರಾಜ್ಯಕ್ಕೆ ಸಂಬಂಧಿಸಿದ ರಾಜ್ಯಾಂಗವನ್ನು ರಚಿಸುವುದಕ್ಕೆ ಮೊದಲು ಹಂಗಾಮಿ ಗಣರಾಜ್ಯ ಸ್ಥಾಪನೆಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಂಡಿತು. ಫ್ರೆಡರಿಕ್ ಎಬರ್ಟ್‌ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು. ಆದರೆ ಈತನು ಬಹಳ ದಿನಗಳ ಕಾಲ ಮುಂದುವರಿಯಲಿಲ್ಲ. ಅವನ ನಂತರ ಹಂಗಾಮಿ ಗಣರಾಜ್ಯದ ಅಧ್ಯಕ್ಷನಾಗಿ ಷೇಡ್‌ಮನ್ ನೇಮಕಗೊಂಡನು. ಆದರೆ ಆತನು ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸಿದನು. ಆದ್ದರಿಂದ ಅವನು ರಾಜೀನಾಮೆ ಸಲ್ಲಿಸಿದನು. ಅವನ ಉತ್ತರಾಧಿಕಾರಿ ಬೌಯರ್ (Bauer) ವರ್ಸೈಲ್ಸ್ ಒಪ್ಪಂದಕ್ಕೆ ಮಿತ್ರ ರಾಷ್ಟ್ರಗಳ ಪ್ರತಿನಿಧಿಗಳೊಡನೆ ಸಹಿ ಹಾಕಿದನು.

## 114.4 ವೀಮರ್ ರಾಜ್ಯಾಂಗ

ವೀಮರ್ ರಾಜ್ಯಾಂಗ 1919 ರ ಆಗಷ್ಟ್ ಹನ್ನೊಂದರಂದು ಅಸ್ತಿತ್ವಕ್ಕೆ ಬಂತು. ಅದು ಜರ್ಮನಿಯಲ್ಲಿ ಗಣರಾಜ್ಯವನ್ನು ಸ್ಥಾಪಿಸಿತು. ಜರ್ಮನಿಯ ಸಾಮ್ರಾಜ್ಯದ ಕಪ್ಪು ಶ್ವೇತ - ಕೆಂಪು ಬಣ್ಣದ ತ್ರಿವರ್ಣ ಧ್ವಜವನ್ನು ಕಪ್ಪು ಕೆಂಪು ಹಳದಿ ಧ್ವಜಕ್ಕೆ ಬದಲಾಯಿಸಲಾಯಿತು. ಎಲ್ಲ ರಾಜ್ಯಗಳು ಗಣರಾಜ್ಯದ ರಾಜ್ಯಾಂಗವನ್ನು ಅಸ್ತಿತ್ವಕ್ಕೆ ತರಬೇಕೆಂದು ಆದೇಶಿಸಲಾಯಿತು. ರಾಜ್ಯಗಳನ್ನು ಮುಂದುವರಿಸಲಾಯಿತು. ಅಮೇರಿಕಾದ ರೀತಿ ಜರ್ಮನಿಯಲ್ಲಿ ಫೆಡರಲ್ ಗಣರಾಜ್ಯವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿತ್ತು. ಜರ್ಮನಿಯ ಗಣರಾಜ್ಯದ ಮುಖ್ಯಸ್ಥ ಒಬ್ಬ ಅಧ್ಯಕ್ಷ. ಅರ್ಹತೆಯನ್ನು ಹೊಂದಿದ್ದ ಪ್ರತಿಯೊಬ್ಬ ಪ್ರಜೆಯು ಮತವನ್ನು ಸಾರ್ವತ್ರಿಕ ಮತದಾನದ ಮೂಲಕ ಅಧ್ಯಕ್ಷನನ್ನು ಚುನಾಯಿಸಬೇಕಾಗಿತ್ತು. ಒಂದು ಬಾರಿ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟ ಒಬ್ಬ ವ್ಯಕ್ತಿ ಅವಧಿಯು ಮುಗಿದ ನಂತರ ಪುನಃ ಸ್ಪರ್ಧಿಸಬಹುದಾಗಿತ್ತು. ಅಧ್ಯಕ್ಷನ ಅವಧಿಯು ಏಳು ವರ್ಷಗಳು. ಅವಧಿ ಮುಗಿಯುವುದಕ್ಕೆ ಮುಂಚಿತವಾಗಿಯೆ ರೀಚ್‌ಸ್ಟ್ಯಾಗ್ ಬೇಕಾದರೆ ಅಧಿಕಾರದಿಂದ ಕಿತ್ತೊಗೆಯಬಹುದಿತ್ತು. ಅಧ್ಯಕ್ಷನ ಅಧೀನದಲ್ಲಿ ಛಾನ್ಸಲರ್ ಮತ್ತು ಮಂತ್ರಿಗಳು ಸೇವೆ ಸಲ್ಲಿಸಬೇಕಾಗಿತ್ತು. ಆದರೆ ಎಲ್ಲರೂ ರೀಚ್‌ಸ್ಟ್ಯಾಗ್‌ಗೆ ಜವಾಬ್ದಾರರಾಗಿದ್ದರು. ರೀಚ್ ಸ್ಟ್ಯಾಗ್ ಕೆಳಮನೆ ಸಾರ್ವತ್ರಿಕವಾಗಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿತ್ತು. ರೀಚ್ ಸ್ಟ್ಯಾಗ್‌ನ ಅವಧಿ ನಾಲ್ಕು ವರ್ಷಗಳು. ರೀಚ್‌ಸ್ಟಾಟ್ ಮೇಲ್ಮನೆಯಾಗಿದ್ದು ವಿವಿಧ ರಾಜ್ಯಗಳ ಪ್ರತಿನಿಧಿಗಳಿಂದ ಕಳುಹಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿತ್ತು.

## 114.5 ಗಣರಾಜ್ಯಕ್ಕೆ ಎದುರಾದ ಸಮಸ್ಯೆಗಳು

ಪ್ರಾರಂಭದಿಂದಲೂ ಹೊಸ ಗಣರಾಜ್ಯ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಗಣರಾಜ್ಯ ಎದುರಿಸಿದ ಸಮಸ್ಯೆಗಳನ್ನು ಕೆಳಕಂಡಂತೆ ವಿವರಿಸಬಹುದು.

### *114.5.1 ರಾಜತ್ವದ ಪರವಾಗಿದ್ದ ಗುಂಪು*

ಗಣರಾಜ್ಯ ಪ್ರಾರಂಭದಿಂದಲೂ ರಾಜತ್ವದ ಪರವಾಗಿದ್ದವರ ವಿರುದ್ಧ ಹೋರಾಟ ನಡೆಸಬೇಕಾಯಿತು. ಅವರು ಗಣರಾಜ್ಯದ ವಿರೋಧಿಗಳಾಗಿದ್ದರು. ಗಣರಾಜ್ಯದ ವಿರುದ್ಧ ತಮ್ಮ ವಾಗ್ದಾಳಿಯನ್ನು ಪ್ರಾರಂಭಿಸಿದರು. ವರ್ಸೈಲ್ಸ್ ಒಪ್ಪಂದವನ್ನು ಒಪ್ಪಿಕೊಳ್ಳುವುದರ ಮೂಲಕ ಗಣರಾಜ್ಯ ದೇಶಕ್ಕೆ ದ್ರೋಹ ಮಾಡಿತು ಎಂಬುದಾಗಿ ಟೀಕಿಸಿದರು. ಅನೇಕ ಪ್ರದೇಶಗಳನ್ನು ಕಳೆದುಕೊಂಡಿದುದರ ಜೊತೆಗೆ ಜರ್ಮನಿಯ ನಿಶಸ್ತ್ರೀಕರಣವನ್ನು ಒಪ್ಪಿಕೊಂಡಿದುದು ಜರ್ಮನಿಗೆ ಹೆಚ್ಚು ಅಪಮಾನವಾಗಿದೆ ಎಂದು ಟೀಕಿಸಿದರು. ಅಪಾರ ಯುದ್ಧ ಪರಿಹಾರ ದ್ರವ್ಯವನ್ನು ಕೊಡಬೇಕಾದುದು ನಾಚಿಕೆಗೇಡು ಎಂದು ಗಣರಾಜ್ಯದ ವಿರುದ್ಧ ಕಿಡಿಕಾರಿದರು. ಇದರ ಜೊತೆಗೆ ಶಾಲಾ-ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ದುಡಿಯುತ್ತಿದ್ದ ಅನೇಕ ಮಂದಿ ರಾಜತ್ವದ ಪರವಾಗಿದ್ದರು. ವಿದ್ಯಾರ್ಥಿ ಸಮೂಹದಲ್ಲಿ ರಾಜತ್ವದ ಬಗ್ಗೆ ಪ್ರಚಾರ ಪ್ರಾರಂಭಿಸಿದರು. ಇವುಗಳ ಪರಿಣಾಮವಾಗಿ ಗಣರಾಜ್ಯ ಹೆಚ್ಚಿನ ಭಯದ ವಾತಾವರಣದಲ್ಲಿ ಆಡಳಿತ ನಡೆಸಬೇಕಾಯಿತು.

### *114.5.2 ರಾಯಲಿಸ್ಟರ ದಂಗೆಗಳು*

ರಾಜತ್ವವಾದಿಗಳು ಗಣರಾಜ್ಯ ವಿರೋಧಿಗಳಾಗಿದ್ದುದಲ್ಲದೆ ಅದನ್ನು ಅಧಿಕಾರದಿಂದ ಪದಚ್ಯುತಿಗೊಳಿಸಲು ದಂಗೆಯನ್ನು ಯೋಜಿಸಿದರು. 1920 ರ ಮಾರ್ಚಿ ಹನ್ನೆರಡರಂದು ಸುಮಾರು 8 ಸಾವಿರ ಸೈನಿಕರ ನಾಯಕತ್ವವನ್ನು ವಹಿಸಿದ್ದ ಜನರಲ್ ಲುಟ್‌ವಿಟ್ಜ್ ಮತ್ತು ಡಾ. ಕಾಪ್ಪ್ (General Luttwitz and Dr. Kapp) ಗಣರಾಜ್ಯವನ್ನು ಕೊನೆಗೊಳಿಸಲು ಪ್ರಯತ್ನ ನಡೆಸಿದರು. ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತೆಂದರೆ ಅಧ್ಯಕ್ಷ ಏಬರ್ಟ್ ಮತ್ತು ಅವನ ಮಂತ್ರಿಮಂಡಲ ಬರ್ಲಿನ್‌ನಿಂದ ಪಲಾಯನ ಮಾಡಿ ಪ್ರೆಸ್‌ಡೆನ್‌ನಲ್ಲಿ (Pressden) ಆಶ್ರಯ ಪಡೆಯಬೇಕಾಯಿತು. ಆದರೆ ಈ ದಂಗೆ ಯಶಸ್ವಿಯಾಗಲಿಲ್ಲ. ಏಕೆಂದರೆ ಕಾರ್ಮಿಕ ಸಂಘಟನೆಗಳು ಮತ್ತು ಸಮಾಜವಾದಿಗಳು ಇಡಿ ಬರ್ಲಿನ್ ನಗರಕ್ಕೆ ಯಾವುದೇ ವಸ್ತುಗಳ ಸರಬರಾಜಾಗದಂತೆ ತಡೆಯೊಡ್ಡಿದರಲ್ಲದೆ ವಿದ್ಯುಚ್ಛಕ್ತಿ ಹಾಗೂ ನೀರಿನ ಸರಬರಾಜನ್ನು ಸಂಪೂರ್ಣವಾಗಿ ಬರ್ಲಿನ್‌ಗೆ ನಿಲ್ಲಿಸಿದರು. ಇದರಿಂದ ರಾಜತ್ವವಾದಿಗಳ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಗಲಿಲ್ಲ. ಡಾ. ಕಾಪ್ಪ್ ಮತ್ತು ಅವನ ಬೆಂಬಲಿಗರು ಬರ್ಲಿನ್‌ನಿಂದ ಸ್ವೀಡನ್‌ಗೆ ಪಲಾಯನ ಮಾಡಬೇಕಾಯಿತು. ಅನಂತರ ಡಾ. ಕಾಪ್ಪ್ ಗಣರಾಜ್ಯಕ್ಕೆ ಶರಣಾದನು. ಆದರೆ ಅವನು ಹೆಚ್ಚು ಕಾಲ ಬದುಕದೆ ಕೆಲವು ದಿನಗಳಲ್ಲೇ ಮರಣ ಹೊಂದಿದನು.

ರಾಯಲಿಸ್ಟರು ಪುನಃ 1923 ರ ನವೆಂಬರ್ ತಿಂಗಳಲ್ಲಿ ದಂಗೆ ಎದ್ದು ಗಣರಾಜ್ಯವನ್ನು ಉರುಳಿಸಲು ಪ್ರಯತ್ನ ನಡೆಸಿದರು. ಈ ದಂಗೆಯ ನಾಯಕತ್ವವನ್ನು ವಹಿಸಿದ್ದವರು ಲೂಡನ್‌ಡಾರ್ಫ್ ಮತ್ತು ಹಿಟ್ಲರ್. ಈ ದಂಗೆಯನ್ನು ಅಡಗಿಸುವುದರಲ್ಲಿ ಗಣರಾಜ್ಯ ಯಶಸ್ವಿಯಾಯಿತು. ಲೂಡೆನ್‌ಡಾರ್ಫ್ ಮತ್ತು ಹಿಟ್ಲರನ್ನು ಬಂಧಿಸಿ 5 ವರ್ಷಗಳ ಕಾಲ ಸೆರೆಮನೆಗೆ ಕಳುಹಿಸಲಾಯಿತು. ಹಿಟ್ಲರನು

ಸೆರೆಮನೆಯಲ್ಲಿದ್ದಾಗಲೆ ಅವನು ತನ್ನ ಜನಪ್ರಿಯ ಗ್ರಂಥ ಮೇಯಿನ್ ಕ್ಯಾಂಫ್ (Mein Kamp) ಗ್ರಂಥವನ್ನು ರಚಿಸಿದನು. ಈ ಗ್ರಂಥ ನಾಜಿ ಪಕ್ಷದ ಬೈಬಲ್ ಆಯಿತು.

### *114.5.3 ಆರ್ಥಿಕ ಬಿಕ್ಕಟ್ಟು*

ಹೊಸ ಗಣರಾಜ್ಯ ಅನೇಕ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಮುಖ್ಯವಾಗಿ ಅನೇಕ ಪ್ರದೇಶಗಳನ್ನು ಮಿತ್ರರಾಷ್ಟ್ರಗಳಿಗೆ ಬಿಟ್ಟುಕೊಟ್ಟಿದುದರ ಜೊತೆಗೆ ಅಪಾರ ಯುದ್ಧ ಪರಿಹಾರ ಹಣವನ್ನು ನೀಡಬೇಕಾಯಿತು. ಅಲ್ಸೇಸ್ ಮತ್ತು ಲೊರೈನ್‌ಗಳನ್ನು ಫ್ರಾನ್ಸ್‌ಗೆ ವರ್ಗಾವಣೆ ಮಾಡಿದುದರಿಂದ ಅನೇಕ ಕಬ್ಬಿಣದ ಅದುರಿನ ಗಣಿಗಳು ಹಾಗೂ ಪೊಟ್ಯಾಸಿಯಂನ ಗಣಿಗಳನ್ನು ಜರ್ಮನಿ ಕಳೆದುಕೊಂಡಿತು. ಇವುಗಳ ಜೊತೆಗೆ ಸಾರ್ ಪ್ರದೇಶವನ್ನು ಮತ್ತು ಸೈಲೀಸಿಯಾದ ಒಂದು ಭಾಗವನ್ನು (Upper Silesia) ವಿಜಯಿ ರಾಷ್ಟ್ರಗಳಿಗೆ ಒಪ್ಪಿಸಿತು. ಈ ರೀತಿಯಾಗಿ ಅನೇಕ ಕೈಗಾರಿಕೆಗಳನ್ನು ಜರ್ಮನಿ ಕಳೆದುಕೊಂಡಿತು. ಜರ್ಮನಿಯು ಅನೇಕ ವ್ಯಾಪಾರೀ ಹಡಗುಗಳನ್ನು ಮಿತ್ರ ರಾಷ್ಟ್ರಗಳಿಗೆ ಒಪ್ಪಿಸಿತು. 5,000 ರೈಲುಗಾಡಿಗಳನ್ನು 1,50,000 ಮೋಟಾರು ವಾಹನಗಳನ್ನು ಮಿತ್ರರಾಷ್ಟ್ರಗಳಿಗೆ ನೀಡಬೇಕಾಯಿತು. ಬಂಡವಾಳವನ್ನು ಆಯಾಯ ರಾಷ್ಟ್ರಗಳು ವಶಪಡಿಸಿಕೊಂಡವು. ಈ ಎಲ್ಲ ಕಾರಣಗಳಿಂದಾಗಿ ಜರ್ಮನಿಯು ಪರಿಹಾರ ಹಣವನ್ನು ನೀಡುವುದು ದುಸ್ತರದ ಕೆಲಸವಾಯಿತು.

ಯುದ್ಧ ಪರಿಹಾರ ದ್ರವ್ಯವನ್ನು ನಿಗಧಿಪಡಿಸಲು ಯುದ್ಧ ಪರಿಹಾರ ಆಯೋಗವನ್ನು (Reparation Commission) ನೇಮಕ ಮಾಡಲಾಯಿತು. ಈ ಆಯೋಗವು 1921 ರ ಮೇ ಒಂದನೆಯ ತಾರೀಖಿನೊಳಗೆ ತನ್ನ ವರದಿಯನ್ನು ಸಲ್ಲಿಸಬೇಕೆಂದು ತಿಳಿಸಲಾಯಿತು. ಅದಕ್ಕಿಂತ ಮುಂಚಿತವಾಗಿ ತಕ್ಷಣವೇ ಜರ್ಮನಿಯು 500 ಮಿಲಿಯನ್ ಡಾಲರ್ ಮೊತ್ತವನ್ನು ಮಿತ್ರ ರಾಷ್ಟ್ರಗಳಿಗೆ ಕೊಡಬೇಕೆಂದು ನಿರ್ಧರಿಸಲಾಯಿತು. (ಫ್ರಾನ್ಸ್, ಬ್ರಿಟನ್, ಇಟಲಿ, ಬೆಲ್ಜಿಯಂ ಇನ್ನುಳಿದ ವಿಜಯಿ ರಾಷ್ಟ್ರಗಳ ಪರವಾಗಿದ್ದ ರಾಷ್ಟ್ರಗಳಿಗೆ) 1921 ರಲ್ಲಿ ಮಿತ್ರ ರಾಷ್ಟ್ರಗಳ ಪ್ರತಿನಿಧಿಗಳು ಪ್ಯಾರಿಸ್‌ನಲ್ಲಿ ಸಭೆ ಸೇರಿ ನಿಗಧಿಯಾಗಿದ್ದ ಮೊತ್ತವನ್ನು ಒಂದೇ ಬಾರಿಗೆ ಕೊಡಬೇಕೆಂದು ಆದೇಶಿಸಿದವು. ಆದರೆ ಜರ್ಮನರು ಇದನ್ನು ಒಪ್ಪಿಕೊಳ್ಳದೆ ತಮ್ಮದೇ ಆದ ಒಂದು Proposal ನೀಡಿದರು. ಆದರೆ ಮಿತ್ರ ರಾಷ್ಟ್ರಗಳು ಇದನ್ನು ಒಪ್ಪಿಕೊಳ್ಳಲಿಲ್ಲ. ಆದುದರಿಂದ ಮಿತ್ರ ರಾಷ್ಟ್ರಗಳು ಜರ್ಮನಿಗೆ ಸೇರಿದ್ದ ರುಹ್‌ರೊರ್ಟ್ (Ruhrort), ಡುಯಿಸ್ ಬರ್ಗ್ (ಡುಯಿಸ್‌ಬರ್ಗ್) ಮತ್ತು ಡುಸ್ಸೆಲ್ ಡಾರ್ಫ್ (Dussel dorb) ಪಟ್ಟಣಗಳನ್ನು 1921 ರ ಮಾರ್ಚಿ ಎಂಟರಂದು ಆಕ್ರಮಿಸಿಕೊಂಡವು. ಜರ್ಮನಿಯು ಲೀಗ್ ಆಫ್ ನೇಷನ್ಸ್‌ಗೆ ಹಾಗೂ ಅಮೇರಿಕಾಕ್ಕೆ ಮನವಿ ಮಾಡಿಕೊಂಡಿತು. ಇದೇ ವೇಳೆಗೆ ಯುದ್ಧ ಪರಿಹಾರ ಆಯೋಗ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಪ್ರಕಾರ ಜರ್ಮನಿಯು 32 ಬಿಲಿಯನ್ ಡಾಲರ್ ಪರಿಹಾರ ನೀಡಬೇಕೆಂದು ನಿಗಧಿ ಪಡಿಸಲಾಯಿತು. 1921 ರ ಮೇ 31 ರೊಳಗೆ 50 ಮಿಲಿಯನ್ ಪೌಂಡ್ ಹಣವನ್ನು ಮಿತ್ರ ರಾಷ್ಟ್ರಗಳಿಗೆ ನೀಡಬೇಕೆಂದು ಜರ್ಮನಿಗೆ ತಿಳಿಸಲಾಯಿತು. ಆಕಸ್ಮಿಕವಾಗಿ ಕೊಡದೆ ಹೋದ ಪಕ್ಷದಲ್ಲಿ ರುಹರ್ (Ruhr) ಕಣಿವೆಯನ್ನು ಆಕ್ರಮಿಸಿಕೊಳ್ಳುವುದಾಗಿ ಮಿತ್ರ ರಾಷ್ಟ್ರಗಳು ತಿಳಿಸಿದವು. ಜರ್ಮನಿಗೆ ಅನ್ಯ ಮಾರ್ಗವೆ ಇಲ್ಲದೆ ಯುದ್ಧ ಪರಿಹಾರದ ಮೊದಲನೆ ಕಂತನ್ನು 1921 ರ ಆಗಸ್ಟ್ ತಿಂಗಳ ವೇಳೆಗೆ ಪಾವತಿ ಮಾಡಿತು. ಮತ್ತಷ್ಟು ಮೊತ್ತವನ್ನು 1922 ರ ಜೂನ್ ವೇಳೆಗೆ ಪಾವತಿ ಮಾಡಬೇಕಾಗಿತ್ತು. 1922 ರ ಜೂನ್ ತಿಂಗಳಲ್ಲಿ ಜರ್ಮನಿಗೆ ಇನ್ನುಳಿದ ಬಾಕಿಯನ್ನು ಕೊಡಲು ಸಾಧ್ಯವಾಗದೆ ಹೋದುದರಿಂದ ಪರಿಹಾರ ಹಣಕೊಡಲು ಕಾಲಾವಕಾಶಕ್ಕಾಗಿ ಮನವಿ ಮಾಡಿತು. ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದ್ದುದರಿಂದ ಎರಡು ವರ್ಷಗಳ ಕಾಲ ಪರಿಹಾರ ಹಣ ನೀಡುವಿಕೆಯನ್ನು ಮುಂದಕ್ಕೆ ಹಾಕಬೇಕೆಂದು ಮನವಿ ಸಲ್ಲಿಸಿತು.

### *114.5.4 ರ್‍ಹೂರ್‌ನನ್ನು ಆಕ್ರಮಿಸಿಕೊಂಡಿದುದು (Occupation Ruhr)*

ಬ್ರಿಟನ್ ಪರಿಹಾರ ಹಣವನ್ನು ನೀಡುವುದರಲ್ಲಿ ಜರ್ಮನಿಗೆ ಕಾಲಾವಕಾಶ ನೀಡಲು ಸಿದ್ಧವಿತ್ತು. ಆದರೆ ಫ್ರಾನ್ಸ್ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಜರ್ಮನಿಯು ಪರಿಹಾರ ಹಣವನ್ನು ಕೊಡಲು ತಪ್ಪಿಸಿಕೊಳ್ಳುವ ನಾಟಕವೆಂದು ಫ್ರಾನ್ಸ್ ಹೇಳಿತು. 1922 ರಂದು ಡಿಸೆಂಬರ್ 22 ರಂದು ಜರ್ಮನಿಯು ಮಿತ್ರರಾಷ್ಟ್ರಗಳಿಗೆ ಯುದ್ಧ ಪರಿಹಾರ ನೀಡುವುದರಲ್ಲಿ (default) ಆಗಿದೆ ಎಂದು ಯುದ್ಧ ಪರಿಹಾರ ಆಯೋಗ ಘೋಷಿಸಿತು. ತಕ್ಷಣವೇ ಇನ್ನಿತರ ಜೊತೆಗೂಡಿ ರ್‍ಹೂರ್‌ನ್ನು ಫ್ರಾನ್ಸ್ ಆಕ್ರಮಿಸಿಕೊಂಡಿತು. ಆದರೆ ಫ್ರಾನ್ಸ್‌ನ ಈ ನಿರ್ಧಾರವನ್ನು ಗ್ರೇಟ್ ಬ್ರಿಟನ್ ವಿರೋಧಿಸಿತು. ಜರ್ಮನಿಯು ಕೂಡ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ರ್‍ಹೂರ್ ಪ್ರದೇಶದ ಜನರು ಫ್ರಾನ್ಸ್ ಮತ್ತು ಬೆಲ್ಜಿಯಂ ಒತ್ತಾಯಪಡಿಸಿದ ಅನೇಕ ತೆರಿಗೆಗಳನ್ನು ನೀಡಬೇಕಾಯಿತು. ರ್‍ಹೂರ್ ಪ್ರದೇಶದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಕಳೆದುಕೊಂಡರು. ಆಹಾರದ ಕೊರತೆ ಹೆಚ್ಚಾಯಿತು. ದೂರವಾಣಿ ಹಾಗೂ ತಂತಿ ವ್ಯವಸ್ಥೆ ಸ್ಥಗಿತಗೊಂಡಿತು. ರೈಲ್ವೆ ಸೇವೆಯು ಕೂಡ ನಿಂತು ಹೋಯಿತು. ಗಣಿಗಳು ಮತ್ತು ಕಾರ್ಖಾನೆಗಳು ಮುಚ್ಚಲ್ಪಟ್ಟವು. ಅಲ್ಲಿಯ ಪತ್ರಿಕೆಗಳು ಫ್ರಾನ್ಸ್ ಮತ್ತು ಬೆಲ್ಜಿಯಂ ಹೊರಡಿಸಿದ ಆಜ್ಞೆಗಳನ್ನು ಪ್ರಕಟಿಸಲು ನಿರಾಕರಿಸಿದವು.

### 114.5.5 ಹಣದುಬ್ಬರ

ಹಣದುಬ್ಬರದಿಂದ ಜರ್ಮನಿಯು ಆರ್ಥಿಕವಾಗಿ ತತ್ತರಿಸಿ ಹೋಗಿತ್ತು. ಎಲ್ಲ ರೀತಿಯ ವ್ಯಾಪಾರ ವಹಿವಾಟುಗಳು ಕಗ್ಗಂಟಾದವು. ಆರ್ಥಿಕ ಬಿಕ್ಕಟ್ಟು ಪ್ರಾರಂಭವಾದಾಗ ವಾರಕ್ಕೊಮ್ಮೆ ಪದಾರ್ಥಗಳ ಬೆಲೆಯನ್ನು ಹೆಚ್ಚು ಮಾಡಬೇಕಾಗಿತ್ತು. ಅನಂತರ ಪ್ರತಿ ದಿನಕ್ಕೊಂದು ಬೆಲೆಯನ್ನು ಬದಲಾಯಿಸಬೇಕಾಗಿತ್ತು. ಕಾರ್ಮಿಕರು ಹಾಗೂ ಇನ್ನಿತರ ಕೆಲಸಗಾರರಿಗೆ ಗಂಟೆಗೊಮ್ಮೆ ವೇತನವನ್ನು ನೀಡಬೇಕಾಗಿತ್ತು. ಏಕೆಂದರೆ ಹಣದುಬ್ಬರ ಅಷ್ಟೊಂದು ಶರವೇಗದಲ್ಲಿ ಏರುತ್ತಿತ್ತು. ಅಂಗಡಿ ವ್ಯಾಪಾರಿಗಳು ತಮ್ಮ ವಸ್ತುಗಳ ಬೆಲೆಯನ್ನು ಗಂಟೆಗೊಮ್ಮೆ ಏರಿಸಬೇಕಾಗಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಮಾರ್ಕ್‌ನ್ನು (ಜರ್ಮನಿಯ ಹಣ) ಜನರು ಸ್ವೀಕರಿಸಲು ನಿರಾಕರಿಸಿದರು. ಅದರ ಬದಲು ತಾವು ಬೆಳೆದ ಪದಾರ್ಥಗಳನ್ನು ವಸ್ತುವಿನಿಮಯದ ಮೂಲಕ ಬದಲಾಯಿಸಿಕೊಳ್ಳಲು ಇಷ್ಟ ಪಟ್ಟರು. ಹಣದುಬ್ಬರದಿಂದಾಗಿ ಅಗರ್ಭ ಶ್ರೀಮಂತರು ಕಡು ಬಡವರಾದರು. ಕೆಳ ಮಧ್ಯಮ ವರ್ಗದವರು ಈ ಹಣದುಬ್ಬರದಿಂದಾಗಿ ಸಂಪೂರ್ಣವಾಗಿ ಕುಸಿದುಹೋದರು. ಹಣದುಬ್ಬರ ಪಿಂಚಣಿ, ಉಳಿತಾಯ ಮತ್ತು ವಿಮೆಯ ಹಣವನ್ನು ಸಂಪೂರ್ಣವಾಗಿ ತೊಡೆದುಹಾಕಿತು. ಹೊಸ ನೋಟುಗಳನ್ನು ಮುದ್ರಿಸುವುದರ ಮೂಲಕ ಹಣದುಬ್ಬರದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ನಡೆಸಿದರು. ಆದರೆ ಮತ್ತಷ್ಟು ಹಣದುಬ್ಬರಕ್ಕೆ ಅವಕಾಶ ಮಾಡಿಕೊಟ್ಟು ಬೆಲೆಗಳು ಗಗನಕ್ಕೇರಲು ಸಹಕಾರಿಯಾಯಿತು. 1921 ರಲ್ಲಿ 62 ಮಾರ್ಕ್‌ಗಳಿಗೆ ಒಂದು ಡಾಲರ್ ಪಡೆಯಬೇಕಾಗಿತ್ತು. ಆದರೆ 1921 ರ ಸೆಪ್ಟೆಂಬರ್ ವೇಳೆಗೆ ಒಂದು ಡಾಲರ್‌ಗೆ 105 ಮಾರ್ಕ್‌ಗಳು, 1921 ರ ವೇಳೆಗೆ 270 ಮಾರ್ಕ್‌ಗಳು ಹಾಗೂ 1921 ರ ವೇಳೆಗೆ 270 ಮಾರ್ಕ್‌ಗಳು ಆಯಿತು. 1923 ರ ಜೂನ್ ವೇಳೆಗೆ ಒಂದು ಡಾಲರ್‌ನ ಬೆಲೆ 100.000 ಮಾರ್ಕ್‌ಗಳು ಹಾಗೂ ಅದೇ ಆಗಸ್ಟ್‌ನ ವೇಳೆಗೆ 5 ಮಿಲಿಯನ್ ಮಾರ್ಕ್‌ಗಳು ಆಯಿತು. 1923 ರ ವೇಳೆಗೆ ಮಾರ್ಕ್‌ಗೆ ಯಾವ ಬೆಲೆಯು ಇಲ್ಲದಂತಾಯಿತು. ಈ ವೇಳೆಗೆ ಒಂದು ಡಾಲರ್ ಪಡೆಯಲು 4,200,000 ಮಿಲಿಯನ್‌ಗಳಷ್ಟು ಮಾರ್ಕ್‌ಗಳನ್ನು ನೀಡಬೇಕಾಗಿತ್ತು.

## 114.6 ಛಾನ್ಸಲರ್ ಸ್ಟ್ರೆಸ್‌ಮನ್ (Stressmann)

ಜರ್ಮನಿಯು ಇಂತಹ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಸಮಯವನ್ನು ಸ್ಟ್ರೆಸ್‌ಮನ್‌ನನು ಛಾನ್ಸಲರ್ ಆಗಿ ನೇಮಕಗೊಂಡನು. ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾದರೆ ಮೊಟ್ಟ ಮೊದಲನೆಯದಾಗಿ ರ್‍ಹೂರ್ (Ruhr) ನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸ್ಟ್ರೆಸ್‌ಮನ್ ವಾದಿಸಿದನು. ಈ ಸಮಸ್ಯೆಯನ್ನು ಬಗೆಹರಿಸಲು ಫ್ರಾನ್ಸ್‌ನ ಜೊತೆ ಸೌಹಾರ್ದಯುತವಾಗಿ ನಡೆದುಕೊಳ್ಳಲು ತೀರ್ಮಾನಿಸಿದನು. ಮೊದಲೆ ವಿವರಿಸಿರುವಂತೆ ಬ್ರಿಟನ್ ಯಾವಾಗಲೂ ಜರ್ಮನಿಯ ಬಗ್ಗೆ ಕರುಣೆಯ ಮನೋಭಾವನೆಯನ್ನು ಹೊಂದಿತ್ತು. ಬ್ರಿಟನ್ ರ್‍ಹೂರ್‌ನ್ನು ಆಕ್ರಮಿಸಿಕೊಳ್ಳುವುದನ್ನು ವಿರೋಧಿಸಿತ್ತು. ಜರ್ಮನಿಯಲ್ಲಿ ಫ್ರಾನ್ಸ್‌ನ ಬಗ್ಗೆ ಪ್ರಬಲವಾದ ವಿರೋಧವಿದ್ದರು ಸ್ಟ್ರೆಸ್‌ಮನ್ ಫ್ರಾನ್ಸಿನೊಡನೆ ಸೌಹಾರ್ದಯುತ ಸಂಬಂಧದ ನೀತಿಯನ್ನು ಘೋಷಿಸಿದನು. ಆಗ ಫ್ರಾನ್ಸಿನಲ್ಲಿ ಪ್ರಧಾನಮಂತ್ರಿಯಾಗಿದ್ದವನು ಹೆರ್ರಿಯಟ್ (Herriot). ಈತನು ಕೂಡ ಜರ್ಮನಿಯೊಡನೆ ಸಹಕರಿಸಲು ಸಿದ್ಧನಿದ್ದನು. ಇದರ ಫಲವಾಗಿ ಎರಡು ರಾಷ್ಟ್ರಗಳ ನಡುವೆ 1923 ರ ನವೆಂಬರ್‌ರಂದು ಒಂದು ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಈ ಒಪ್ಪಂದದ ಪ್ರಕಾರ ರ್‍ಹೂರ್‌ನ ಕೈಗಾರಿಕೋದ್ಯಮಿಗಳು ತಾವು ಉತ್ಪಾದಿಸಿದ ವಸ್ತುಗಳನ್ನು ಮಿತ್ರ ರಾಷ್ಟ್ರಗಳಿಗೆ ನೀಡಲು ಒಪ್ಪಿಕೊಂಡರು. ಆದ್ದರಿಂದ ಅಂತಿಮವಾಗಿ ಫ್ರಾನ್ಸಿನ ಸೈನ್ಯವನ್ನು ರ್‍ಹೂರ್ ಪ್ರದೇಶದಿಂದ ಹಿಂದಕ್ಕೆ ಕರೆಯಿಸಿಕೊಳ್ಳಲು ದಾರಿಮಾಡಿತು.

ಸ್ಟ್ರೆಸ್‌ಮನ್ ರೆತನ್‌ಮಾರ್ಕ್ (Retenmark) ಎಂಬ ಹೊಸ ನೋಟಿನ ಚಲಾವಣೆಯನ್ನು ಜಾರಿಗೊಳಿಸಿದನು. ಸಾರ್ವಜನಿಕರು ಕೂಡ ಈ ಹೊಸ ಮಾರ್ಕ್‌ನ್ನು ಸ್ವೀಕರಿಸಿದರು. ಇದರ ಫಲವಾಗಿ ಆರ್ಥಿಕ ಚಟುವಟಿಕೆಗಳು ಸಾಮಾನ್ಯ ಸ್ಥಿತಿಗೆ ಮರಳಿದವು. ಹಳೆಯ ಮಾರ್ಕ್‌ಗಳು ನಿಧಾನವಾಗಿ ಚಲಾವಣೆಯಿಂದ ಕಣ್ಮರೆಯಾದವು.

### 114.6.1 ಡಾವೆಸ್ ಯೋಜನೆ (Dawes Plan)

ಫ್ರಾನ್ಸಿನೊಡನೆ ಸೌಹಾರ್ದಯುತ ಸಂಬಂಧ ಹಾಗೂ ಮಾರ್ಕ್‌ನ ಬೆಲೆಯು ಸುಧಾರಿಸಿದುದರಿಂದ ಯುದ್ಧ ಪರಿಹಾರಕ್ಕೆ ಸಂಬಂಧಿಸಿದಂತೆ ಪುನರ್ ಪರಿಶೀಲಿಸಲು ಅವಕಾಶ ಮಾಡಿಕೊಟ್ಟಿತು. ಜರ್ಮನಿಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಅದು ಯುದ್ಧ ಪರಿಹಾರ ನೀಡಲು ಸಾಧ್ಯವಿಲ್ಲವೆಂಬ ನಿಲುವನ್ನು ಗ್ರೇಟ್ ಬ್ರಿಟನ್ ಹೊಂದಿತ್ತು. ಚಾರ್ಲ್ಸ್ ಜಿ. ಡಾವೆಸ್‌ನನ್ನು ಜರ್ಮನಿಯ ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನ ನಡೆಸಲು ನೇಮಕ ಮಾಡಿದ್ದ ಸಮಿತಿಯ ಅಧ್ಯಕ್ಷನನ್ನಾಗಿ ನೇಮಕ ಮಾಡಲಾಯಿತು. ಅವನ ಮುಖ್ಯ ಕೆಲಸವೆಂದರೆ ಯುದ್ಧ ಪರಿಹಾರ ದ್ರವ್ಯವನ್ನು ಸಲ್ಲಿಸಲು ಜರ್ಮನಿಗಿರುವ ಸಾಮರ್ಥ್ಯವೆಷ್ಟು ಎಂಬುದನ್ನು ಅಂದಾಜು ಮಾಡುವುದಾಗಿತ್ತು. ಡಾವೆಸ್‌ನ ಯೋಜನೆಯ ಪ್ರಕಾರ ಜರ್ಮನಿಗೆ ಸಂಪೂರ್ಣ ಆರ್ಥಿಕ ಅಧಿಕಾರ ನೀಡುವುದರ ಜೊತೆಗೆ ರ್‍ಹೂರ್ ಪ್ರದೇಶವನ್ನು ಮಿತ್ರ ರಾಷ್ಟ್ರಗಳ ಸೈನ್ಯ ತೆರವು ಮಾಡಬೇಕು. ಯುದ್ಧ ಪರಿಹಾರ ಹಣವನ್ನು ನೀಡಲು ಸೆಂಟ್ರಲ್ ಬ್ಯಾಂಕ್ ಆಫ್ ಇಶ್ಯೂ (Central Bank of Issue) ವನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಡಾವೆಸ್ ಯೋಜನೆಯು ಅನೇಕ ಅನುಕೂಲಗಳಿಂದ ಕೂಡಿತ್ತು. ಡಾವೆಸ್

ಯೋಜನೆಯು ಜರ್ಮನಿಯ ಅನುಕೂಲಕರ ಪರಿಸ್ಥಿತಿಯಲ್ಲಿ ಯುದ್ಧ ಪರಿಹಾರ ಹಣವನ್ನು ಎಷ್ಟು ಕೊಡಬೇಕೆಂಬುದನ್ನು ನಿಗಧಿ ಪಡಿಸಿತು. ಡಾವೆಸ್ ಯೋಜನೆಯು ಸಾಲವನ್ನು ಕೂಡ ಒದಗಿಸಿಕೊಟ್ಟಿತು. ಈ ಹಣದ ಸಹಾಯದಿಂದ ಜರ್ಮನಿಯು ತನ್ನ ಯುದ್ಧ ಪರಿಹಾರ ಹಣವನ್ನು ನೀಡಬಹುದಾಗಿತ್ತು. ಈ ಯೋಜನೆಯ ಅಡಿ ವಿದೇಶಗಳು ಜರ್ಮನಿಗೆ ಹೆಚ್ಚು ಸಾಲ ನೀಡಿದವು. ಈ ಎಲ್ಲ ಕಾರ್ಯಕ್ರಮಗಳಿಂದಾಗಿ ಜರ್ಮನಿಯಲ್ಲಿ ಆರ್ಥಿಕ ಚೇತರಿಕೆ ಉಂಟಾಯಿತು. ಅದರ ಕೈಗಾರಿಕೆಯ ಉತ್ಪಾದನೆ ಹೆಚ್ಚಾಯಿತು. ಅನೇಕ ವಿದೇಶಿ ಕಂಪೆನಿಗಳು ಜರ್ಮನಿಯಲ್ಲಿ ಕಾರ್ಖಾನೆಗಳನ್ನು ಪ್ರಾರಂಭಿಸಿ ಅಲ್ಲಿದ್ದ ಕಚ್ಚಾ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಉತ್ಪಾದನೆ ಪ್ರಾರಂಭಿಸಿದವು. ಲಕ್ಷಾಂತರ ಮಂದಿಗೆ ಉದ್ಯೋಗವಕಾಶವನ್ನು ಒದಗಿಸಿಕೊಟ್ಟವು.

### 114.6.2 ಲೊಕಾರ್ನೊ ಒಪ್ಪಂದ (Locarno pact)

ಜರ್ಮನಿಯು ಯುರೋಪಿನ ರಾಷ್ಟ್ರಗಳಿಗೆ ಶಾಂತಿ ಪ್ರಿಯನೆಂಬುದನ್ನು ಸಾಬೀತು ಪಡಿಸಲು ಪ್ರಯತ್ನ ನಡೆಸಿತು. ಅದೇ ರೀತಿ ಯುರೋಪಿನ ಇನ್ನಿತರ ರಾಷ್ಟ್ರಗಳು ಕೂಡ ಜರ್ಮನಿಯ ಬಗ್ಗೆ ದ್ವೇಷ ಭಾವನೆಯನ್ನು ಬಿಡಬೇಕೆಂದು ವಾದಿಸಿತು. ಜರ್ಮನಿಯ ಈ ಉತ್ಸಾಹಗಳಿಗೆ ಫ್ರಾನ್ಸ್ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಆದರೆ ಇಂಗ್ಲೆಂಡ್ ಸಂಪೂರ್ಣವಾಗಿ ತನ್ನ ಬೆಂಬಲವನ್ನು ವ್ಯಕ್ತಪಡಿಸಿತು. ಅಂತಿಮವಾಗಿ ಲೊಕಾರ್ನೊದಲ್ಲಿ (ಸ್ವಿಟ್ಜರ್ಲೆಂಡ್) ಒಂದು ಸಮಾವೇಶ ನಡೆಯಿತು. ಇಂಗ್ಲೆಂಡ್, ಜರ್ಮನಿ, ಬೆಲ್ಜಿಯಂ, ಫ್ರಾನ್ಸ್, ಇಟಲಿ, ಪೋಲೆಂಡ್ ಮತ್ತು ಜೆಕೊಸ್ಲೊವಾಕಿಯಾದಿಂದ ಪ್ರತಿನಿಧಿಗಳು ಆಗಮಿಸಿದ್ದರು. ಲೊಕಾರ್ನೊದಲ್ಲಿ ಅನೇಕ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಈ ಒಪ್ಪಂದಗಳ ಮೂಲಕ ಜರ್ಮನಿಯು ಫ್ರಾನ್ಸ್ ಮತ್ತು ಬೆಲ್ಜಿಯಂಗೆ ಯಾವುದೇ ಕಾರಣಕ್ಕೂ ತನ್ನ ಗಡಿಗಳನ್ನು ಬದಲಾಯಿಸಲು ಪ್ರಯತ್ನ ನಡೆಸುವುದಿಲ್ಲವೆಂದು ಆಶ್ವಾಸನೆ ನೀಡಿತು. ಆದರೆ ಅಂತಹ ಆಶ್ವಾಸನೆಯನ್ನು ತನ್ನ ಪೂರ್ವದ ಗಡಿಗಳಲ್ಲಿದ್ದ ಪೋಲೆಂಡ್ ಮತ್ತು ಜೆಕೊಸ್ಲೋವಾಕಿಯಾಗಳಿಗೆ ನೀಡಲು ನಿರಾಕರಿಸಿತು. ಆದರೂ ಕೂಡ ಅವುಗಳ ಗಡಿಯನ್ನು ವಿಸ್ತರಿಸುವುದಕ್ಕೋಸ್ಕರ ಯಾವುದೇ ಯುದ್ಧ ಮಾಡುವುದಿಲ್ಲವೆಂದು ಆಶ್ವಾಸನೆ ನೀಡಿತು. ಲೊಕಾರ್ನೊ ಒಪ್ಪಂದ ವಿಜಯಿ ರಾಷ್ಟ್ರಗಳು ಮತ್ತು ಸೋತ ರಾಷ್ಟ್ರಗಳ ನಡುವೆ ವಿಶ್ವಾಸವನ್ನು ಉಂಟು ಮಾಡುವುದರಲ್ಲಿ ಯಶಸ್ವಿಯಾಯಿತು. ಲೊಕಾರ್ನೊದಲ್ಲಿ ಮಾಡಿಕೊಂಡ ಒಪ್ಪಂದಗಳಿಂದಾಗಿ 1926 ರಲ್ಲಿ ಜರ್ಮನಿಯು ಲೀಗ್ ಆಫ್ ನೇಷನ್ಸ್ ಸದಸ್ಯನಾಗಲು ಅವಕಾಶ ಪಡೆದುಕೊಂಡಿತು.

### 114.6.3 ಯಂಗ್ ಯೋಜನೆ (Young Plan)

ದಾವೆಸ್ ಯೋಜನೆಯನ್ನು ಕೈಬಿಟ್ಟು 1929 ರಲ್ಲಿ ಯಂಗ್ ಯೋಜನೆಯನ್ನು ಜಾರಿಗೆ ತರಲಾಯಿತು. ಓವೆನ್ ಡಿ. ಯಂಗ್‌ನ ಅಧ್ಯಕ್ಷತೆಯಲ್ಲಿ ಯುದ್ಧ ಪರಿಹಾರ ದ್ರವ್ಯವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಒಂದು ವರದಿಯನ್ನು ಸಲ್ಲಿಸಲು ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಯಂಗ್‌ನು ತನ್ನ ವರದಿಯನ್ನು ಸಲ್ಲಿಸಿದನು. ಈ ಯಂಗ್‌ನ ಯೋಜನೆಯ ಪ್ರಕಾರ 37 ವರ್ಷಗಳವರೆಗೆ ಪ್ರತಿವರ್ಷವು 100 ಮಿಲಿಯನ್ ಪೌಂಡ್‌ಗಳನ್ನು ನೀಡಬಹುದಾಗಿತ್ತು. ವಿಜಯಿ ರಾಷ್ಟ್ರಗಳ ಮಿತ್ರರಾದ ಸಣ್ಣ ಪುಟ್ಟ ರಾಷ್ಟ್ರಗಳಿಗೂ ನಿಗಧಿತ ಮೊತ್ತ ನೀಡಲು ತೀರ್ಮಾನಿಸಲಾಯಿತು. ಜರ್ಮನಿಯ ಮೇಲೆ ವಿದೇಶಿ ರಾಷ್ಟ್ರಗಳ ಹಿಡಿತವನ್ನು ತೆಗೆದುಹಾಕಬೇಕು. ಹಣ ಪಡೆಯಲು ಮತ್ತು ವಿವಿಧ ರಾಷ್ಟ್ರಗಳಿಗೆ ಹಣ ನೀಡಲು ಬ್ಯಾಂಕ್ ಆಫ್ ಇಂಟರ್‌ನ್ಯಾಷನಲ್ ಸೆಟ್ಲಮೆಂಟ್‌ನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು. ಅದು ಇಂಟರ್‌ನ್ಯಾಷನಲ್ ಸೆಂಟ್ರಲ್ ಬ್ಯಾಂಕ್‌ನಂತೆಯು ಕೂಡ ಕೆಲಸ ನಿರ್ವಹಿಸಬೇಕಾಗಿತ್ತು. ಯಂಗ್ ಯೋಜನೆ 1930 ರ ಮೇ ಹದಿನೇಳರಂದು ಜಾರಿಗೆ ಬಂತು. ತಕ್ಷಣವೆ ಜರ್ಮನಿಯಲ್ಲಿದ್ದ ಕೊನೆಯ ಸೈನ್ಯದ ತುಕಡಿ ಆದೇಶದಿಂದ ಹೊರಕ್ಕೆ ಬಂತು. ಯಂಗ್ ಯೋಜನೆಯ ಪ್ರಕಾರ ಯುದ್ಧದ ಪರಿಹಾರ ಹಣವನ್ನು ಕಡಿಮೆ ಮಾಡಲಾಯಿತು ಮತ್ತು ಜರ್ಮನಿಗೆ ಈ ಮೊತ್ತವನ್ನು ತೆರಲು ಸಾಕಷ್ಟು ಸಮಯವಕಾಶವನ್ನು ನೀಡಲಾಯಿತು. ಈ ಯೋಜನೆಯ ಪ್ರಕಾರ ಮೊದಲನೆಯ ಕಂತನ್ನು ಪಾವತಿ ಮಾಡುವ ವೇಳೆಗೆ ಪ್ರಪಂಚದ ಆರ್ಥಿಕ ಮುಗ್ಗಟ್ಟು ಪ್ರಾರಂಭವಾಯಿತು.

### 114.6.4 ಜರ್ಮನಿಯ ಮೇಲೆ ಆರ್ಥಿಕ ಮುಗ್ಗಟ್ಟಿನ ಪ್ರಭಾವ

1929 ರಲ್ಲಿ ಜರ್ಮನಿಯಲ್ಲಿ ಎರಡು ಪ್ರಮುಖ ಘಟನೆಗಳಿಂದಾಗಿ ಅದಕ್ಕೆ ಹಿನ್ನಡೆ ಉಂಟಾಯಿತು. ಒಂದನೆಯದು ಸ್ಟ್ರೆಸ್‌ಮನ್ ಮರಣ. ಎರಡನೆಯದೂ ಆರ್ಥಿಕ ಮುಗ್ಗಟ್ಟು ಸ್ಟ್ರೆಸ್‌ಮನ್ ಛಾನ್ಸಲರ್ ಆಗಿದ್ದ ವೇಳೆಯಲ್ಲಿ ಜರ್ಮನಿಯು ಆರ್ಥಿಕವಾಗಿ ಚೇತರಿಸಿಕೊಂಡಿತ್ತು. ವಿದೇಶಗಳೊಡನೆ ಸಂಬಂಧಗಳು ಸೌಹಾರ್ದಯುತವಾಗಿದ್ದವು. ಅದರಲ್ಲೂ ವಿಶೇಷವಾಗಿ ಫ್ರಾನ್ಸಿನೊಡನೆ ಯುದ್ಧ ಬಿಗುವಿನವಂತಹ ವಾತಾವರಣವನ್ನು ತಿಳಿಗೊಳಿಸುವುದರಲ್ಲಿ ಯಶಸ್ವಿಯಾಗಿದ್ದನು. 1929 ರ ಅಕ್ಟೋಬರ್ ತಿಂಗಳಲ್ಲಿ ಅವನು ಮರಣ ಹೊಂದಿದುದು ಜರ್ಮನಿಗೆ ಬರಸಿಡಿಲು ಬಡಿದಂತಾಯಿತು. ಇದೇ ವೇಳೆಗೆ ಪ್ರಪಂಚದ ಆರ್ಥಿಕ ಮುಗ್ಗಟ್ಟು ತಲೆದೋರಿದುದು ಜರ್ಮನಿಯನ್ನು ಮತ್ತಷ್ಟು ಅಧೋಗತಿಗೆ ತಳ್ಳಲು ಕಾರಣವಾಯಿತು. ಜರ್ಮನಿಯ ಅರ್ಥ ವ್ಯವಸ್ಥೆಯು ಮುಖ್ಯವಾಗಿ ವಿದೇಶಗಳಿಂದ ಪಡೆದ ಸಾಲಿನ ಆಧಾರದ ಮೇಲೆ ನಿಂತಿತ್ತು. ಜರ್ಮನಿಗೆ ನೀಡಿದ್ದ ಹಣವನ್ನು ಹಿಂದಕ್ಕೆ ಪಡೆಯಲು ಪ್ರಾರಂಭಿಸಿದರು. ಇದರಿಂದ ಜರ್ಮನಿಯಲ್ಲಿ ಬಂಡವಾಳದ ಕೊರತೆ ಉಂಟಾಯಿತು. ಜರ್ಮನ್ನರು ಕೂಡ ಪ್ರಪಂಚದ ಆರ್ಥಿಕ ಮುಗ್ಗಟ್ಟನ್ನು ಗಮನಿಸಿ ತಾವು

ಜರ್ಮನಿಯ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ಠೇವಣಿಯನ್ನು ವಾಪಸ್ ಪಡೆದರು. ಅವರು ಈ ಹಣವನ್ನು ತಮ್ಮ ಮನೆಗಳಲ್ಲಿ ಮುಚ್ಚಿಟ್ಟುಕೊಂಡರು ಅಥವಾ ವಿದೇಶಗಳಿಗೆ ರವಾನಿಸಿದರು. ಇದರ ಪರಿಣಾಮವಾಗಿ ಅನೇಕ ಬ್ಯಾಂಕುಗಳು ಜರ್ಮನಿಯಲ್ಲಿ ಮುಚ್ಚಲ್ಪಟ್ಟವು. ಕೈಗಾರಿಕೆಗಳಲ್ಲಿ ಕೆಲಸ ಮುಂದುವರಿಸಲು ಬಂಡವಾಳವಿಲ್ಲದಂತಾಯಿತು. ನಿರುದ್ಯೋಗವು ಹೆಚ್ಚಾಯಿತು. ಆಂತರಿಕ ಮಾರುಕಟ್ಟೆಗಳು ಕುಸಿದವು. ತೆರಿಗೆಯ ವಸೂಲಿಯಿಂದ ಬರತಕ್ಕ ಆಧಾಯವು ಕೂಡ ಕಡಿಮೆಯಾಯಿತು. ಜರ್ಮನಿಯಲ್ಲಿ ದಿವಾಳಿಗಳ ಸಂಖ್ಯೆ ಹೆಚ್ಚಾಯಿತು.

## 114.7 ಗಣರಾಜ್ಯದ ವಿರುದ್ಧ ಹೆಚ್ಚುತ್ತಿದ್ದ ಅತೃಪ್ತಿ

ಜರ್ಮನಿಯ ಆರ್ಥಿಕ ಪರಿಸ್ಥಿತಿಯು ಹದಗೆಟ್ಟಿತು. ಆದುದರಿಂದ ಗಣರಾಜ್ಯದ ವಿರುದ್ಧ ಜನರು ತಮ್ಮ ಅಸಂತೋಷವನ್ನು ವ್ಯಕ್ತಪಡಿಸಲು ಪ್ರಾರಂಭಿಸಿದರು. ವೀಮರ್ ಗಣ ರಾಜ್ಯವೇ ಹೆಚ್ಚು ಅಪಮಾನದಿಂದ ಕೂಡಿದ್ದ ವರ್ಸೈಲ್ಸ್ ಒಪ್ಪಂದವನ್ನು ಮಾಡಿಕೊಳ್ಳಲು ಕಾರಣವೆಂದು ಜನರು ನಿಂದಿಸಲು ಪ್ರಾರಂಭಿಸಿದರು. ಕೆಳ ಮಧ್ಯವರ್ಗದವರ ಜನರು ಹಣದುಬ್ಬರದಿಂದಾಗಿ ಹೆಚ್ಚು ಕಷ್ಟವನ್ನು ಅನುಭವಿಸಿದರು. ಅವರ ಜೀವನ ಸಂಪೂರ್ಣವಾಗಿ ನಾಶಗೊಂಡಿತು. 1932 ರ ವೇಳೆಗೆ ನಿರುದ್ಯೋಗಿಗಳಸಂಖ್ಯೆ ಆರು ಮಿಲಿಯನ್‌ಗೆ ಏರಿತು. ಅದು ಹೆಮ್ಮರವಾಗಿ ಬೆಳೆಯಲು ಪ್ರಾರಂಭಿಸಿತು. ಇಂತಹ ಹದಗೆಟ್ಟ ಪರಿಸ್ಥಿತಿಯಿಂದ ದಿಕ್ಕು ಕಾಣದ ಜನರು ಗಣರಾಜ್ಯವನ್ನು ಅಧಿಕಾರದಿಂದ ಕಿತ್ತೊಗೆಯಲು ಸಂಚು ನಡೆಸುತ್ತಿದ್ದ ಗುಂಪುಗಳನ್ನು ಸೇರಿಕೊಂಡರು. ಅಧಿಕ ಸಂಖ್ಯೆಯಲ್ಲಿ ಜನರು ಕಮ್ಯುನಿಸ್ಟ್ ಪಕ್ಷ ಹಾಗೂ ರಾಷ್ಟ್ರೀಯ ಸಮಾಜವಾದಿಗಳ (National Socialists) ಪಕ್ಷಗಳನ್ನು ಸೇರಿದರು. ಅವರ ನಾಯಕ ಹಿಟ್ಲರ್ ಆದನು. ಕೇವಲ ಸಮಾಜವಾದಿ ಮಂದಗಾಮಿ ಗುಂಪು ಗಣರಾಜ್ಯದ ಪರವಾಗಿತ್ತು.

## 114.8 ಹಿಟ್ಲರನ ಏಳಿಗೆ ಹಾಗೂ ವೀಮರ್ ಗಣರಾಜ್ಯದ ಪತನ

ಗಣರಾಜ್ಯದ ಅಧ್ಯಕ್ಷ ಹಿಂಡೆನ್ ಬರ್ಗ್ 1933 ರ ಜನವರಿ 30 ರಂದು ಹಿಟ್ಲರ್‌ನನ್ನು ಛಾನ್ಸಲರ್‌ನನ್ನಾಗಿ ನೇಮಿಸಿದನು. ಗಣರಾಜ್ಯದ ಬಗ್ಗೆ ಹಿಟ್ಲರ್‌ನಿಗೆ ಯಾವುದೇ ಗೌರವವಿರಲಿಲ್ಲ. ಅವನು ಗಣರಾಜ್ಯದ ಅಧಿಕಾರವನ್ನು ಕಿತ್ತೊಗೆಯಲು ಅವಕಾಶಕ್ಕಾಗಿ ಕಾಯುತ್ತಿದ್ದನು. 1933 ರಲ್ಲಿ ಚುನಾವಣೆ ನಡೆದಾಗ ಹಿಟ್ಲರನ ಪಕ್ಷ ರೀಚ್‌ಸ್ಟ್ಯಾಗ್‌ನಲ್ಲಿ ಬಹುಮತವನ್ನು ಗಳಿಸಿತು. ನ್ಯಾಜಿ ಪಕ್ಷ ಅತ್ಯಂತ ಹೆಚ್ಚಿನ ಮತಗಳಿಸುವುದರಲ್ಲಿ ಯಶಸ್ವಿಯಾಯಿತು. ಹಿಟ್ಲರನು ತನ್ನ ವಿರೋಧಿಗಳನ್ನೆಲ್ಲ ಸದೆಬಡಿದನು. ತನ್ನ ಪಕ್ಷದ ಬಹುಮತವನ್ನು ಉಪಯೋಗಿಸಿಕೊಂಡು 1933 ರ ಮಾರ್ಚ್ 22 ರಂದು ಎನೆಬಲ್ಲಿಂಗ್ ಆಕ್ಟ್‌ನ್ನು (Enabling Act) ಜಾರಿಗೊಳಿಸಿದನು. ಇದರ ಪ್ರಕಾರ ಗಣರಾಜ್ಯದ ಆಳ್ವಿಕೆ ಕೊನೆಗೊಂಡಿತು. ಅನಂತರ ರೀಚ್‌ಸ್ಟ್ಯಾಗ್‌ನನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಿದನು. ಪ್ರಜಾಪ್ರಭುತ್ವದ ಸಂಸ್ಥೆಗಳು ಸದ್ಯಕ್ಕೆ ಮುಚ್ಚಲ್ಪಟ್ಟು ಸರ್ವಾಧಿಕಾರದ ಏಳಿಗೆಗೆ ದಾರಿ ಮಾಡಿಕೊಟ್ಟವು.

1934 ರಲ್ಲಿ ಹಿಂಡೆನ್ ಬರ್ಗ್ ಮರಣ ಹೊಂದಿದ ಮೇಲೆ, ಹಿಟ್ಲರ್ ಜರ್ಮನಿಯ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟನು. ಹಿಟ್ಲರ್ ಅಧ್ಯಕ್ಷ ಪದವಿ ಹಾಗೂ ಛಾನ್ಸಲರ್ ಹುದ್ದೆಗಳೆರಡನ್ನು ತನ್ನಲ್ಲೆ ಉಳಿಸಿಕೊಂಡನು. ಅವನು ಗಣರಾಜ್ಯವನ್ನು ಅಂತ್ಯಗೊಳಿಸಿ ಮೂರನೆ ರೀಚ್ (Third Rich) ನನ್ನು ಜರ್ಮನಿಯಲ್ಲಿ ಸ್ಥಾಪಿಸಿದನು. ನ್ಯಾಜಿ ಪಕ್ಷ ಧ್ವಜವನ್ನು ಮೂರನೆ ರೀಚ್‌ನ ಧ್ವಜವನ್ನಾಗಿ ಸ್ವೀಕರಿಸಲಾಯಿತು. ಚುನಾವಣೆಯ ಮೂಲಕ ಹಿಟ್ಲರ್‌ನನ್ನು ಫ್ಯೂಹರರ್ (Feurer) ಅಥವಾ ಜರ್ಮನಿಯ ನಾಯಕನೆಂದು ಘೋಷಿಸಲಾಯಿತು.

## 114.9 ಸಂಕ್ಷಿಪ್ತ ಅವಲೋಕನ

ಮೊದಲನೆಯ ಜಾಗತಿಕ ಯುದ್ಧದಲ್ಲಿ ಜರ್ಮನಿಯು ಸೋಲನ್ನನುಭವಿಸಿದ ಮೇಲೆ ಎರಡನೆಯ ಕೈಸರ್ ವಿಲಿಯಂ ಸಿಂಹಾಸನವನ್ನು ತ್ಯಜಿಸಿ ಹಾಲೆಂಡಿಗೆ ಪಲಾಯನ ಮಾಡಿದನು. ಅನಂತರ ವೀಮರ್ ಗಣರಾಜ್ಯವನ್ನು ಸ್ಥಾಪಿಸಲಾಯಿತು. ಈ ಗಣರಾಜ್ಯವು ವಿಜಯಿ ರಾಷ್ಟ್ರಗಳೊಡನೆ ವರ್ಸೈಲ್ಸ್ ಒಪ್ಪಂದವನ್ನು ಮಾಡಿಕೊಂಡಿತು. ದುರಾದೃಷ್ಟವಶಾತ್ ಪ್ರಾರಂಭದಿಂದಲೂ ಗಣರಾಜ್ಯ ಬೃಹತ್ ಸಮಸ್ಯೆಗಳನ್ನು ಎದುರಿಸಿತು. ಈ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನ ನಡೆಸಿತು. ರಾಯಲಿಸ್ಟರು ಗಣರಾಜ್ಯದ ವಿರುದ್ಧ ದಂಗೆಎದ್ದು ಅದನ್ನು ಪದಚ್ಯುತಿಗೊಳಿಸಲು ಪ್ರಯತ್ನಿಸಿದರು. ಅವರು ರಾಜತ್ವದ ಪರವಾಗಿದ್ದರು. ಇದರ ಜೊತೆಗೆ ಹಣದುಬ್ಬರ, ನಿರುದ್ಯೋಗ ಸಮಸ್ಯೆ, ಯುದ್ಧ ಪರಿಹಾರ ನೀಡುವುದಕ್ಕೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸಿತು. ಮಿತ್ರರಾಷ್ಟ್ರಗಳಿಗೆ ನೀಡಬೇಕಾಗಿದ್ದ ಯುದ್ಧ ಪರಿಹಾರ ಹಣ ಭರಿಸಲು ಸಾಧ್ಯವಾಗದಷ್ಟು ದೊಡ್ಡ ಮೊತ್ತವಾಗಿತ್ತು. ಜರ್ಮನಿಯು, ಯುದ್ಧ ನೌಕೆಗಳು, ಸಾರಿಗೆ ಹಡಗುಗಳು, ಮತ್ತು ಅನೇಕ ರೀತಿಯ ವಾಹಗನಳನ್ನು ಮಿತ್ರ ರಾಷ್ಟ್ರಗಳಿಗೆ ಬಿಟ್ಟು ಕೊಡುವುದರ ಮೂಲಕ ಕಳೆದುಕೊಂಡಿತು. ಅನೇಕ ಪ್ರದೇಶಗಳನ್ನು ಕೂಡ ಕಳೆದುಕೊಂಡಿತು. ವಸಾಹತುಗಳನ್ನು ಕೂಡ ವಿಜಯಿ ರಾಷ್ಟ್ರಗಳ ವಶಕ್ಕೆ ಬಿಟ್ಟು ಕೊಡಲಾಯಿತು. ವೀಮರ್ ಗಣರಾಜ್ಯದ ಆಳ್ವಿಕೆಯ ಸಮಯದಲ್ಲಿ ಜರ್ಮನಿಯು ಸ್ವಲ್ಪ ಮಟ್ಟಕ್ಕೆ ಆರ್ಥಿಕ ಚೇತರಿಕೆಯನ್ನು ಕಂಡಿತು. ಆದರೆ 1929 ರಲ್ಲಿ ಪ್ರಪಂಚದ

ಆರ್ಥಿಕ ಮುಗ್ಗಟ್ಟು ಗಣರಾಜ್ಯ ಅಸ್ತಿತ್ವಕ್ಕೆ ಬಲವಾದ ಪೆಟ್ಟು ಬಿದ್ದಿತು. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ನಾಝಿ ಪಕ್ಷ ಹಿಟ್ಲರನ ನಾಯಕತ್ವದಲ್ಲಿ ಹೆಚ್ಚು ಪ್ರಾಬಲ್ಯಕ್ಕೆ ಬಂತು. ಜರ್ಮನಿಯ ಪರಿಸ್ಥಿತಿಗಳು ಹಿಟ್ಲರನು ಅಧಿಕಾರಕ್ಕೆ ಬರಲು ಅನುಕೂಲವಾಗಿದ್ದವು. 1934 ರಲ್ಲಿ ಹಿಟ್ಲರನು ಗಣರಾಜ್ಯವನ್ನು ರದ್ದು ಪಡಿಸಿ 3ನೆಯ ರೀಚ್‌ನ್ನು ಸ್ಥಾಪಿಸಿದನು. ಈ ರೀತಿ ಜರ್ಮನಿಯಲ್ಲಿ ಪುನಃ ಸರ್ವಾಧಿಕಾರದ ಆಳ್ವಿಕೆ ಪ್ರಾರಂಭವಾಯಿತು.

## 114.10 ಮಾದರಿ ಪ್ರಶ್ನೆಗಳು

1. ಮೊದಲನೆಯ ಮಹಾಯುದ್ಧದ ನಂತರ ವೀಮರ್ ಗಣರಾಜ್ಯದ ಸಮಸ್ಯೆಗಳಾವುವು. ಈ ಸಮಸ್ಯೆಯನ್ನು ಗಣರಾಜ್ಯ ಎಷ್ಟರ ಮಟ್ಟಿಗೆ ಬಗೆಹರಿಸಿತು.
2. 1919-1932 ರ ನಡುವಣ ಜರ್ಮನಿಯ ಆಂತರಿಕ ಹಾಗೂ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ವಿವರಿಸಿ.
3. ಜರ್ಮನಿಯಲ್ಲಿ ವೀಮರ್ ಗಣರಾಜ್ಯ ಪತನವಾಗಲು ಕಾರಣಗಳೇನು ತಿಳಿಸಿ.

## 114.11 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. W.H. Carr : International Relations between the two world wars 1919-1939
2. H. Holborn : History of Modern Germany
3. G.A. Crarig : Europe since 1815
4. C.D. Hazen : Modern Europe since 1789
5. P.C. Thomas : History of Europe (1789-1945)


ಪ್ರೊ. ಶಿವಣ್ಣ

# ບັນທຶກ

# ಟಿಪ್ಪಣಿಗಳು

# ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*-National Education Policy 1986*




**♣ REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✢ **M.Ed Study Centres : 06**


Feedback : improvement, revision and launching of new programmes
Multimedia learning material
STUDENT
Electronic media
Academic and other support
Evaluation - methods and modes
INSTRUCTIONAL SYSTEM